ದಿನಾಂಕ:05-11-2008 ರಂದು ರಾತ್ರಿ 7-30 ಗಂಟೆ ಸಮಯದಲ್ಲಿ ಸುಳ್ಯ ತಾಲೂಕು ಕನಕಮಜಲು ಗ್ರಾಮದ ಕರ್ನಾಟಕ-ಕೇರಳ ಗಡಿ ಪ್ರದೇಶದ ಕನಕಮಜಲ್‌ನಿಂದ ದೇಲಂಪಾಡಿಗೆ ಹೋಗುವ ಡಾಮಾರು ರಸ್ತೆಯ ದೇರ್ಕಜ ಎಂಬಲ್ಲಿ ಸುಳ್ಯ ವಲಯದ ಅಬಕಾರಿ ಉಪ ನಿರೀಕ್ಷಕರು(ನಂ.1) ಇವರ ಪ್ರಥಮ ಮಾಹಿತಿ ವರದಿ ಸಂಖ್ಯೆ: 5/2008-09 ದಿ:4-11-2008 ಕ್ಕೆ ಸಂಬಂಧಿಸಿ ದಸ್ತಗಿರಿ ಮಾಡಬೇಕಾಗಿರುವ ಆರೋಪಿ ಗಣೇಶ್ ಗೌಡ (31 ವ), ಬಿನ್: ನಾಗಪ್ಪ ಗೌಡ, ಬೆಳ್ಳಿಪಾಡಿ, ಅಮ್ರಾಂಜೆಮೂಲೆ, ದೇಲಂಪಾಡಿ ಗ್ರಾಮ, ಪಂಜಿಕಲ್ಲು ಅಂಚೆ, ಕಾಸರಗೋಡು, ಕೇರಳ ಎಂಬಾತನನ್ನು ಸದರಿ ಪ್ರಕರಣ ದಾಖಲಿಸಿದ ಸಂದರ್ಭದಲ್ಲಿ ತಲೆಮರೆಸಿಕೊಂಡಿದ್ದು, ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿರುವುದರಿಂದ, ತಮ್ಮ ಇಲಾಖಾ ಸಿಬ್ಬಂದಿಯವರ ನೇತೃತ್ವದಲ್ಲಿ ಇಲಾಖಾ ವಾಹನದಲ್ಲಿ ಕನಕಮಜಲು ಗ್ರಾಮದ ದೇರ್ಕಜೆ ಎಂಬಲ್ಲಿಗೆ ಹೋಗಿ ವಾಪಾಸು ಬರುತ್ತಿದ್ದಾಗ, ಇಲಾಖಾ ವಾಹನದ ಎದುರುಗಡೆ ಒಬ್ಬ ವ್ಯಕ್ತಿಯು ಒಂದು ಮೋಟಾರು ಬೈಕನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದು ಹಾಗೂ ಅದರ ಮೇಲೆ ಒಂದು ಗೋಣಿ ಚೀಲದ ಕಟ್ಟು ಇರುವುದು ಕಂಡು ಬಂತು. ಸದರಿ ಮೋಟಾರು ಬೈಕನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಬೈಕನ್ನು ಚಲಾಯಿಸಿದ ವ್ಯಕ್ತಿಯು ಸದರಿ ಬೈಕನ್ನು ಅಲ್ಲಿಯೇ ಬಿಟ್ಟು ಓಡಿ ಪರಾರಿಯಾಗಿರುತ್ತಾನೆ. ಸಿಬ್ಬಂದಿಯವರು ಬೆನ್ನಟ್ಟಿದರೂ ಆತನನ್ನು ಹಿಡಿಯಲು ಸಾಧ್ಯವಾಗಿರುವುದಿಲ್ಲ. ಆದರೆ ಓಡಿ ಹೋದ ವ್ಯಕ್ತಿ ಈ ಹಿಂದೆ ಪ್ರಕರಣ ದಾಖಲಿಸಿರುವ ಮೊಕದ್ದಮೆಗೆ ಸಂಬಂಧಿಸಿ ತಲೆ ಮರೆಸಿಕೊಂಡಿರುವ ಆರೋಪಿಯಾಗಿರುತ್ತಾನೆ ಎಂದು ಇಲಾಖಾ ವಾಹನದ ಹೆಡ್‌ಲೈಟ್‌ನ ಸಹಾಯದಿಂದ ಕಂಡು ಬಂತು. ಈ ಬಗ್ಗೆ ಬೈಕಿನ ಶೋಧನಾ ಕಾರ್ಯ ನಡೆಸಲು ಮಾನ್ಯ ನ್ಯಾಯಾಲಯದಿಂದ ಸಮುಚಿತ ಆಧಾರ ಪಡೆದುಕೊಳ್ಳಲು ಕಾಲಾವಕಾಶವಿಲ್ಲದ ಕಾರಣ ಸ್ಥಳದಲ್ಲಿಯೇ ಸರ್ಚ್ ಮೆಮೊ ತಯಾರಿಸಿ, ಅಲ್ಲಿ ಹಾಜರಿದ್ದ ಸ್ಥಳೀಯ ಪಂಚರನ್ನು ಕರೆಯಿಸಿ ಶೋಧನಾ ಕಾರ್ಯ ಪ್ರಾರಂಭಿಸಲಾಯಿತು. ಸದರಿ ಮೋಟಾರು ಬೈಕ್‌ನ ನೋಂದಣಿ ಸಂ: ಕೆಎ-19-ಹೆಚ್-1499 ಯಮಾಹ ಮೋಟಾರು ಬೈಕ್ ಆಗಿದ್ದು, ಅದರ ಮೇಲ್ಗಡೆಯಿದ್ದ ಕಟ್ಟನ್ನು ಬಿಡಿಸಿ ನೋಡಲಾಗಿ, 180 ಎಂ.ಎಲ್.ನ ಸೂಪರ್ ಜಾಕ್ ವಿಸ್ಕಿಯ 36 ಬಾಟಲ್‌ಗಳಿದ್ದು, ಅವುಗಳಲ್ಲಿ 6-480 ಲೀಟರ್ ಮದ್ಯ ಇದ್ದು ಹಾಗೂ ಅಲ್ಲಿಯೇ ನೆಲದ ಮೇಲೆ ಬಿದ್ದಿರುವ ನೋಕಿಯೊ ಕಂಪೆನಿಯ ಎರಡು ಮೊಬೈಲ್ ಫೋನ್‌ಗಳು ಕೂಡಾ ಪತ್ತೆಯಾದವು. ಸದರಿ ಮದ್ಯವನ್ನು ಸಾಗಾಟ ಮಾಡಲು ಯಾವುದೇ ರಹದಾರಿ ಪತ್ರ ಹಾಗೂ ಬೇರೆ ಇತರೆ ಯಾವುದೇ ದಾಖಲಾತಿಗಳು ದೊರಕದ ಪ್ರಯುಕ್ತ ಮತ್ತು ಸದರಿ ಸ್ಥಳದಲ್ಲಿ ಹಾಜರಿದ್ದ ಪಂಚರೊಡನೆ ವಿವರಣೆಯನ್ನು ಕೇಳಲಾಗಿ, ಓಡಿ ಹೋಗಿರುವ ವ್ಯಕ್ತಿ ಮದ್ಯ ಮಾರಾಟಗಾರನಾದ ಗಣೇಶ್ ಗೌಡ ಇವನಿಂದ ಮದ್ಯವನ್ನು ಖರೀದಿಸಿ ಮಾರಾಟ ಮಾಡಲು ಇಲ್ಲಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ 180 ಎಂ.ಎಲ್.ನ ಒಂದು ಬಾಟಲ್‌ನ್ನು ತೆಗೆದು, ಅದಕ್ಕೆ ಬಟ್ಟೆದಾರದಿಂದ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ, ಮಾದರಿ ಮೊಹರಿನ ನಮೂನೆಯನ್ನು ಸ್ಥಳದಲ್ಲಿಯೇ ತಯಾರಿಸಿ ಆರೋಪಿಯ ವಿಳಾಸದ ಗುರುತಿನ ಚೀಟಿಗಳನ್ನು ಸೊತ್ತುಗಳಿಗೆ ಅಂಟಿಸಲಾಯಿತು. ಸದರಿ ಸೊತ್ತುಗಳನ್ನು ಸ್ಥಳ ಮಹಜರು ಮೂಲಕ ಇಲಾಖಾ ಸ್ವಾಧೀನಪಡಿಸಿಕೊಂಡು ಮಹಜರಿನಲ್ಲಿ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದು ಮತ್ತು ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 15 ರ

ಪ್ರಕಾರ ಅಪರಾಧ ಹಾಗೂ ಕಲಂ 32(1), 38(ಎ) ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ತಲೆಮರೆಸಿಕೊಂಡಿರುವ ಆರೋಪಿಯ ವಿರುದ್ದ ತಕ್ಷೀರು ಸಂಖ್ಯೆ: 6/2008-09 ದಿ:5-11-2008 ರಂತೆ ಪ್ರಕರಣವನ್ನು ನೋಂದಾಯಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತನಿಖೆಯನ್ನು ಮುಂದುವರಿಸಿದ ಅಬಕಾರಿ ಉಪ ನಿರೀಕ್ಷಕರು(ನಂ.1),ಸುಳ್ಯ ವಲಯ, ಸುಳ್ಯ ಇವರು ತನಿಖಾ ವರದಿ ಸಂಖ್ಯೆ: ಸಿಆರ್ಎಂ/27/2008-09 ದಿ:17-1-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದಿಂದ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ಕಳುಹಿಸಲಾಗಿದ್ದು ರಾಸಾಯನಿಕ ತಜ್ಞರು, ಮಂಗಳೂರುರವರ ವರದಿ ಸಂ: ಇ–549 ದಿ:12-12-2008 ರ ಪ್ರಕಾರ ಮದ್ಯದ ಮದ್ಯಸಾರ ಪ್ರಮಾಣ ಶೇ.42 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ಯಮಾಹ ಮೋಟಾರು ಬೈಕ್ ವಾಹನ ಇದರ ನೋಂದಣಿ ಸಂ: ಕೆಎ–19–ಹೆಚ್–1499 ರ "ಬಿ" ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಮೋಟಾರು ಬೈಕನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಹಾಗೂ ಮದ್ಯವನ್ನು ನಾಶಪಡಿಸಲು ಆದೇಶ ನೀಡಬೇಕೆಂದು ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಸದರಿ ವರದಿಯನ್ನು ಅನುಸರಿಸಿ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರ ವರದಿ ಸಂಖ್ಯೆ: ಸಿಆರ್ಎಂ/21/2008-09 ದಿ:22-1-2009 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಎ) ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಆದೇಶ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರು ಹಾಗೂ ಅಬಕಾರಿ ಉಪ ಅಧೀಕ್ಷಕರ ಶಿಫಾರಸ್ಸಿನ ಮೇರೆಗೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಸ್‌ಡಿಕೆ/139/ಡಿಟಿಸಿಆರ್/2008-09 ದಿ:10-02-2009 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರು ಬೈಕನ್ನು ಹೊರತುಪಡಿಸಿ ಮದ್ಯ ಹಾಗೂ ಮೊಬೈಲ್ ಫೋನನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಮತ್ತು ಮೊಬೈಲ್ ಫೋನನ್ನು ವಿಲೇವಾರಿಗೊಳಿಸಲು ಆದೇಶ ನೀಡಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು, ದ.ಕ.ಜಿಲ್ಲೆರವರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿ ದಿನಾಂಕ: 4-12-2008 ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಯಮಾಹ ಮೋಟಾರು ಬೈಕ್ ಸಂ:ಕೆಎ–19–ಹೆಚ್–1499 ರ ನೋಂದಣಿ ಮಾಲೀಕ ಶ್ರೀ.ಮೋಹನ್ ಸುರೇಂದ್ರ, ಬಿನ್:ವಿ.ವಾದಿವೇಲು, ಸಿ.ಆರ್.ಸಿ. ಕನಕಮಜಲು, ಸುಳ್ಯ ತಾಲೂಕು ಇವರಿಗೆ ಈ ಪ್ರಾಧಿಕಾರದಿಂದ ದಿ: 10-2-2009 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ಹಾಗೂ ವಲಯ ಅಬಕಾರಿ ಉಪ ನಿರೀಕ್ಷಕರ ಮುಖಾಂತರ ನೀಡಲಾಗಿದ್ದು, ನೋಂದಣಿ ಅಂಚೆ ಮೂಲಕ ನೀಡಲಾದ ನೋಟೀಸು ಜಾರಿಯಾಗದೆ ಹಿಂದೆ ಬಂದಿದ್ದು, ಅಬಕಾರಿ ಉಪ ನಿರೀಕ್ಷಕರು(ನಂ.1), ಸುಳ್ಯ ವಲಯ ಇವರು ದಿ:13-3-2009 ರಂದು ವಾಹನದ ನೋಂದಣಿ ಮಾಲೀಕರಾದ ಶ್ರೀ.ಮೋಹನ್ ಸುಂದರ್ ಇವರಿಗೆ ಕಾರಣ ಕೇಳಿ ನೋಟೀಸನ್ನು ಖುದ್ದಾಗಿ ಜಾರಿ ಮಾಡಿ ಸ್ವೀಕೃತಿಯನ್ನು ಈ ಕಚೇರಿಗೆ ಒಪ್ಪಿಸಿರುತ್ತಾರೆ.

ಈ ಪ್ರಾಧಿಕಾರವು ನೀಡಿದ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ವಾಹನದ ನೋಂದಣಿ ಮಾಲೀಕರಾದ ಶ್ರೀ.ಮೋಹನ್ ಸುರೇಂದ್ರ, ಬಿನ್:ವಿ.ವಾದಿವೇಲು, ಸಿ.ಆರ್.ಸಿ. ಕನಕಮಜಲು, ಸುಳ್ಯ ತಾಲೂಕು ಇವರ ಜಿ.ಪಿ.ಎ.ದಾರರಾದ ಶ್ರೀ ಗಣೇಶ್.ಬಿ (31 ವ), ಬಿನ್:ನಾಗಪ್ಪ ಗೌಡ, ಬೆಳ್ಳಿಪಾಡಿ,ಅಮ್ರಾಂಜೆಮೂಲೆ, ದೇಲಂಪಾಡಿ ಗ್ರಾಮ, ಪಂಜಿಕಲ್ಲು ಅಂಚೆ, ಕಾಸರಗೋಡು, ಕೇರಳ ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರವು ನೀಡಿದ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ದಿ:23-3-2009 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ ಹಾಗೂ ವಾಹನವು ಯಾವುದೇ ಅಕ್ರಮ ಮದ್ಯ ಸಾಗಾಟದಲ್ಲಿ ಭಾಗಿಯಾಗಿರುವುದಿಲ್ಲ. ತನ್ನ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ. ಸದರಿ ಅರ್ಜಿಯನ್ನು ಪರಿಶೀಲಿಸಿದ ಈ ಪ್ರಾಧಿಕಾರವು ವಾಹನದ ಪ್ರಸ್ತುತ ಮೌಲ್ಯಮಾಪನ ವರದಿಯನ್ನು ಪಡೆಯುವ ಸಲುವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಗೆ ದಿ:8-4-2009 ರಂದು ಪತ್ರ ಬರೆಯಲಾಗಿದ್ದು, ಸದರಿ ಪತ್ರದಂತೆ ಮೋಟಾರು ವಾಹನ ನಿರೀಕ್ಷಕರು, ಪುತ್ತೂರು ಇವರ ಮೌಲ್ಯಮಾಪನ ಪತ್ರ ದಿ:24-4-2009 ರಂತೆ ವಾಹನದ ಈಗಿನ ಮೌಲ್ಯ ರೂ.6,000/– ಗಳಾಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ವಾಹನದ ಮಾಲೀಕರಾದ ಶ್ರೀ.ಮೋಹನ್ ಸುರೇಂದ್ರ ಇವರಿಗೆ ಈ ಪ್ರಾಧಿಕಾರದಿಂದ ದಿ:21-5-2009 ರಂದು ನೋಟೀಸು ನೀಡಲಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ ಮೌಲ್ಯಮಾಪನ ವರದಿಯಂತೆ ರೂ.6,000/– ಕ್ಕೆ

ಸಮಾನವಾದ ಬ್ಯಾಂಕ್ ಗ್ಯಾರಂಟಿ ಹಾಗೂ ಇಂಡೆಮ್ನಿನಿಟಿ ಬಾಂಡ್ ನೀಡಿದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗುವುದೆಂದು ತಿಳಿಸಿ ನೋಟೀಸು ನೀಡಲಾಗಿರುತ್ತದೆ.

ಅರ್ಜಿದಾರರು ಸದರಿ ನೋಟೀಸಿಗೆ ಅನುಗುಣವಾಗಿ ದಿನಾಂಕ:5-6-2009 ರಂದು ಈ ಪ್ರಾಧಿಕಾರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸುಳ್ಯ ಶಾಖೆ ಇವರಿಂದ ರೂ.6,000/- ಮೌಲ್ಯಕ್ಕೆ ಸಮಾನವಾದ ಬ್ಯಾಂಕ್ ಭದ್ರತೆ ಸಂಖ್ಯೆ: 01/2009-10 ದಿ:5-6-2009 ರಂತೆ ಭದ್ರತಾ ಪತ್ರವನ್ನು ಒಪ್ಪಿಸಿರುವುದರಿಂದ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರುರವರ ಮಧ್ಯಂತರ ಆದೇಶ ಸಂಖ್ಯೆ: ಎಸ್‌ಡಿಕೆ/139/ಡಿಟಿಸಿಆರ್/2008-09 ದಿ:15-6-2009 ರಲ್ಲಿ ಕೆಲವು ಷರತ್ತುಗಳನ್ವಯ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಯಮಾಹ ಮೋಟಾರು ಬೈಕನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶ ನೀಡಲಾಗಿರುತ್ತದೆ. ಸದರಿ ಆದೇಶದಂತೆ ವಾಹನದ ಮಾಲೀಕರು ದಿ:10-7-2009 ರಂದು ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಕಚೇರಿ ಇವರಿಂದ ಛಾಪಾ ಕಾಗದದಲ್ಲಿ ಸಹಿ ಪಡೆದು ಸಾಕ್ಷಿದಾರರ ಸಮ್ಮುಖದಲ್ಲಿ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಪಡೆದುಕೊಂಡಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:15-11-2008 ರಂದು ಯಮಾಹ ಮೋಟಾರು ಬೈಕ್ ಸಂಖ್ಯೆ: ಕೆಎ-19-ಹೆಚ್-1499 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಕೃಷ್ಣ ನಾಯಕ್, ಅಬಕಾರಿ ಉಪ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರು ದಿ:2-9-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:9-9-2006 ರಿಂದ ಇಲ್ಲಿಯವರೆಗೆ ಸುಳ್ಯ ವಲಯ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತಾನು ದಿ:5-11-2008 ರಂದು ರಾತ್ರಿ 7-30 ಗಂಟೆ ಸಮಯದಲ್ಲಿ ಸುಳ್ಯ ತಾಲೂಕು ಕನಕಮಜಲು ಗ್ರಾಮದ ಕರ್ನಾಟಕ-ಕೇರಳ ಗಡಿ ಪ್ರದೇಶದ ದೇರ್ಕಜೆ ಎಂಬಲ್ಲಿಗೆ ದಿ: 4-11-2008 ರಂದು ದಸ್ತಗಿರಿ ಮಾಡಬೇಕಾಗಿರುವ ಆರೋಪಿ ಗಣೇಶ್ ಗೌಡ (31 ವ), ಬಿನ್: ನಾಗಪ್ಪ ಗೌಡ, ಬೆಳ್ಳಿಪಾಡಿ, ಅಮ್ಮಾಂಜೆಮೂಲೆ, ದೇಲಂಪಾಡಿ ಗ್ರಾಮ, ಪಂಜಿಕಲ್ಲು ಅಂಚೆ, ಕಾಸರಗೋಡು, ಕೇರಳ ಎಂಬಾತನನ್ನು ಸದರಿ ಪ್ರಕರಣ ದಾಖಲಿಸಿದ ಸಂದರ್ಭದಲ್ಲಿ ತಲೆಮರೆಸಿಕೊಂಡಿದ್ದು, ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿರುವುದರಿಂದ, ತಮ್ಮ ಇಲಾಖಾ ಸಿಬ್ಬಂದಿಯವರ ನೇತೃತ್ವದಲ್ಲಿ ಇಲಾಖಾ ವಾಹನದಲ್ಲಿ ಕನಕಮಜಲು ಗ್ರಾಮದ ದೇರ್ಕಜೆ ಎಂಬಲ್ಲಿಗೆ ಹೋಗಿ ವಾಪಾಸು ಬರುತ್ತಿದ್ದಾಗ, ಇಲಾಖಾ ವಾಹನದ ಎದುರುಗಡೆ ಒಬ್ಬ ವ್ಯಕ್ತಿಯು ಒಂದು ಮೋಟಾರು ಬೈಕನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದು ಹಾಗೂ ಅದರ ಮೇಲೆ ಒಂದು ಗೋಣಿ ಚೀಲದ ಕಟ್ಟು ಇರುವುದು ಕಂಡು ಬಂತು. ಸದರಿ ಮೋಟಾರು ಬೈಕನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಬೈಕನ್ನು ಚಲಾಯಿಸಿದ ವ್ಯಕ್ತಿಯು ಸದರಿ ಬೈಕನ್ನು ಅಲ್ಲಿಯೇ ಬಿಟ್ಟು ಓಡಿ ಪರಾರಿಯಾಗಿರುತ್ತಾನೆ. ಸಿಬ್ಬಂದಿಯವರು ಬೆನ್ನಟ್ಟಿದರೂ ಆತನನ್ನು ಹಿಡಿಯಲು ಸಾಧ್ಯವಾಗಿರುವುದಿಲ್ಲ. ಆದರೆ ಓಡಿ ಹೋದ ವ್ಯಕ್ತಿ ಈ ಹಿಂದೆ ಪ್ರಕರಣ ದಾಖಲಿಸಿರುವ ಮೊಕದ್ದಮೆಗೆ ಸಂಬಂಧಿಸಿ ತಲೆ ಮರೆಸಿಕೊಂಡಿರುವ ಆರೋಪಿಯಾಗಿರುತ್ತಾನೆ ಎಂದು ಇಲಾಖಾ ವಾಹನದ ಹೆಡ್‌ಲೈಟ್‌ನ ಸಹಾಯದಿಂದ ಕಂಡು ಬಂತು. ಈ ಬಗ್ಗೆ ಬೈಕಿನ ಶೋಧನಾ ಕಾರ್ಯ ನಡೆಸಲು ಮಾನ್ಯ ನ್ಯಾಯಾಲಯದಿಂದ ಸಮುಚಿತ ಆಧಾರ ಪಡೆದುಕೊಳ್ಳಲು ಕಾಲಾವಕಾಶವಿಲ್ಲದ ಕಾರಣ ಸ್ಥಳದಲ್ಲಿಯೇ ಸರ್ಚ್ ಮೆಮೊ ತಯಾರಿಸಿ, ಅಲ್ಲಿ ಹಾಜರಿದ್ದ ಸ್ಥಳೀಯ ಪಂಚರನ್ನು ಕರೆಯಿಸಿ ಶೋಧನಾ ಕಾರ್ಯ ಪ್ರಾರಂಭಿಸಲಾಯಿತು. ಸದರಿ ಬೈಕ್‌ನ ನೋಂದಣಿ ಸಂ: ಕೆಎ-19-ಹೆಚ್-1499 ಯಮಾಹ ಮೋಟಾರು ಬೈಕ್ ಆಗಿದ್ದು, ಅದರ ಮೇಲ್ಗಡೆಯಿದ್ದ ಕಟ್ಟನ್ನು ಬಿಡಿಸಿ ನೋಡಲಾಗಿ, 180

ಎಂ.ಎಲ್.ನ ಸೂಪರ್ ಜಾಕ್ ವಿಸ್ಕಿಯ 36 ಬಾಟಲ್‌ಗಳಿದ್ದು, ಅವುಗಳಲ್ಲಿ 6-480 ಲೀಟರ್ ಮದ್ಯ ಇದ್ದು ಹಾಗೂ ಅಲ್ಲಿಯೇ ನೆಲದ ಮೇಲೆ ಬಿದ್ದಿರುವ ನೋಕಿಯೊ ಕಂಪೆನಿಯ ಎರಡು ಮೊಬೈಲ್ ಫೋನ್‌ಗಳು ಕೂಡಾ ಪತ್ತೆಯಾದವು. ಸದರಿ ಮದ್ಯವನ್ನು ಸಾಗಾಟ ಮಾಡಲು ಯಾವುದೇ ರಹದಾರಿ ಪತ್ರ ಹಾಗೂ ಬೇರೆ ಇತರೆ ಯಾವುದೇ ದಾಖಲಾತಿಗಳು ದೊರಕದ ಪ್ರಯುಕ್ತ ಮತ್ತು ಸದರಿ ಸ್ಥಳದಲ್ಲಿ ಹಾಜರಿದ್ದ ಪಂಚರೊಡನೆ ವಿವರಣೆಯನ್ನು ಕೇಳಲಾಗಿ, ಓಡಿ ಹೋಗಿರುವ ವ್ಯಕ್ತಿ ಮದ್ಯ ಮಾರಾಟಗಾರನಾದ ಗಣೇಶ್ ಗೌಡ ಇವನಿಂದ ಮದ್ಯವನ್ನು ಖರೀದಿಸಿ ಸೇವನೆ ಮಾಡಲು ಇಲ್ಲಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ 180 ಎಂ.ಎಲ್.ನ ಒಂದು ಬಾಟಲ್‌ನ್ನು ತೆಗೆದು, ಅದನ್ನು ಬಟ್ಟೆದಾರದಿಂದ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ, ಮಾದರಿ ಮೊಹರಿನ ನಮೂನೆಯನ್ನು ಸ್ಥಳದಲ್ಲಿಯೇ ತಯಾರಿಸಿ ಆರೋಪಿಯ ವಿಳಾಸದ ಗುರುತಿನ ಚೀಟಿಗಳನ್ನು ಸೊತ್ತುಗಳಿಗೆ ಅಂಟಿಸಲಾಯಿತು. ಸದರಿ ಸೊತ್ತುಗಳನ್ನು ಸ್ಥಳ ಮಹಜರು ಮೂಲಕ ಇಲಾಖಾ ಸ್ವಾಧೀನಪಡಿಸಿಕೊಂಡು ಮಹಜರಿನಲ್ಲಿ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದು ಮತ್ತು ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11,15 ರ ಪ್ರಕಾರ ಅಪರಾಧ ಹಾಗೂ ಕಲಂ 32(1), 38(ಎ) ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ತಲೆಮರೆಸಿಕೊಂಡಿರುವ ಆರೋಪಿಯ ವಿರುದ್ದ ತಕ್ಷೀರು ಸಂಖ್ಯೆ: 6/2008-09 ದಿ:5-11-2008 ರಂತೆ ಪ್ರಕರಣವನ್ನು ನೋಂದಾಯಿಸಿ ಮೊಕದ್ದಮೆಯ ಮೂಲ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸ್ಥಳದಲ್ಲಿಯೇ ತಯಾರಿಸಿದ ಮಹಜರನ್ನು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಮತ್ತು ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ದಿ:11-11-2008 ರಂದು ಜಪ್ತುಪಡಿಸಿದ ವಾಹನದ ಮಾಲೀಕರ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಗೆ ಪತ್ರ ಬರೆದಿದ್ದು, ಅವರಿಂದ ದಿ:4-12-2008 ರಂದು ವಾಹನದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–3 ಎಂದು ಗುರುತಿಸಲಾಯಿತು. ಸದರಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕ ಶ್ರೀ.ಮೋಹನ್ ಸುರೇಂದ್ರ ಎಂದು ತಿಳಿದು ಬಂದಿರುತ್ತದೆ. ದಿ:14-11-08 ರಂದು ಜಪ್ತುಪಡಿಸಿದ ಮದ್ಯದ ಮಾದರಿ ಬಾಟಲ್‌ಗಳನ್ನು ಸುಳ್ಯ ವಲಯದ ಅಬಕಾರಿ ರಕ್ಷಕರಾದ ಶ್ರೀ.ಬಾಲಕೃಷ್ಣ ನಾಯಕ್ ಇವರ ಮುಖಾಂತರ ರಾಸಾಯನಿಕ ತಜ್ಞರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅವರಿಂದ ದಿ:5-1-2009 ರಂದು ಮಾದರಿ ಸೀಸೆ ಹಾಗೂ ರಾಸಾಯನಿಕ ವಿಶ್ಲೇಷಕರ ವರದಿಯನ್ನು ಪಡೆದುಕೊಂಡಿರುತ್ತೇನೆ. ರಾಸಾಯನಿಕ ವಿಶ್ಲೇಷಕರ ವರದಿಯನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ತಾನು ದಿ:17-1-2009 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಪ್ರಾಧಿಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ಈ ಪ್ರಾಧಿಕಾರದ ಆದೇಶ ದಿ:24-2-2009 ರಂದು ಜಪ್ತುಪಡಿಸಿದ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಿರುವುದರಿಂದ, ಜಪ್ತುಪಡಿಸಿದ ಮದ್ಯವನ್ನು ಮಹಜರು ಜರುಗಿಸಿ ನಾಶಪಡಿಸಲಾಗಿದೆ. ಪ್ರಕರಣದ ತನಿಖೆಯನ್ನು ಪೂರೈಸಿ ಮಾನ್ಯ ನ್ಯಾಯಾಲಯದಲ್ಲಿ ದಿ: 4-4-2009 ರಂದು ಪ್ರಕರಣದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ತಾನು ದಿ:23-4-2009 ರಂದು ಸದರಿ ವಾಹನದ ಮೌಲ್ಯಮಾಪನ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಗೆ ಪತ್ರ ಬರೆಯಲಾಗಿದ್ದು, ಇವರಿಂದ ದಿ:24-4-2009 ರಂದು ಸದರಿ ವಾಹನಕ್ಕೆ ರೂ.6,000/– ಗಳಾಗಬಹುದೆಂದು ದೃಢೀಕರಣ ಪತ್ರವನ್ನು ಪಡೆದು ಅದರ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸಿರುತ್ತೇನೆ. ದಿ:10-7-2009 ರಂದು ಸದರಿ ವಾಹನವನ್ನು ಈ ಪ್ರಾಧಿಕಾರದ ಆದೇಶದ ಮೇರೆಗೆ ವಾಹನದ ಮಾಲೀಕರ ಮಧ್ಯಂತರ ಸುಪರ್ಧಿಗೆ ಬಿಡುಗಡೆಗೊಳಿಸಿ ಸದರಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–6 ಎಂದು ಹಾಗೂ ಸ್ವೀಕೃತಿಯನ್ನು ನಿಶಾನೆ ಪಿ–7 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ದಿ:4-11-2008 ರಂದು ಕನಕಮಜಲು ಗ್ರಾಮದ ದೇರ್ಕಜೆ ಎಂಬಲ್ಲಿ ದಾಖಲಿಸಿದ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯ ವಿರುದ್ದ ಮೊಕದ್ದಮೆ ದಾಖಲಿಸಿರುತ್ತೇನೆ. ದಿ:5-11-2008 ರಂದು ಅಪರಾಧ ಸ್ಥಳದಲ್ಲಿ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದು, ನಿಲ್ಲಿಸಲು ಸೂಚನೆ ನೀಡಿದಾಗ, ಆತನು ಮೋಟಾರು ಬೈಕನ್ನು ರಸ್ತೆಯ ಬದಿಯಲ್ಲಿಟ್ಟು ಕಾಡಿನೊಳಗೆ ಓಡಿ ಪರಾರಿಯಾದನು. ಸದರಿ ಗೋಣಿ ಚೀಲವನ್ನು ಆತನು ಕುಳಿತುಕೊಳ್ಳುವ ಸೀಟಿನ ಮುಂಭಾಗದ ಪೆಟ್ರೋಲ್ ಟ್ಯಾಂಕ್‌ನ ಮೇಲೆ ಇರಿಸಿದ್ದನು. ತನಗೆ ತಕ್ಷೀರು ಸ್ಥಳದಲ್ಲಿ ಸಿಕ್ಕಿದ ಮೊಬೈಲ್ ಫೋನು ಚಾಲನೆಯಲ್ಲಿರುತ್ತದೆ. ಪಂಚರು ಸಾಕ್ಷಿದಾರರಾದ ನಾರಾಯಣ ಗೌಡ ಎಂಬ ವ್ಯಕ್ತಿ ಗಣೇಶ್ ಗೌಡ ಎಂಬವನಿಂದ ಮದ್ಯ ಖರೀದಿ ಮಾಡಲು ಬಂದಿರುತ್ತಾರೆ. ಈ ತಕ್ಷೀರಿನ ಆರೋಪಿಗೂ ಹಾಗೂ ವಾಹನದ ಮಾಲೀಕರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದರಿಂದ ವಾಹನದ ಮಾಲೀಕರು ತನ್ನ ವಾಹನದಲ್ಲಿ

ಅಕ್ರಮವಾಗಿ ಮದ್ಯ ಸಾಗಾಟವಾಗಿಲ್ಲ ಮತ್ತು ತಾನು ಮೊಕದ್ದಮೆಯಲ್ಲಿ ಭಾಗಿಯಾಗಿರುವುದಿಲ್ಲ ಎಂಬುವುದನ್ನು ದೃಢಪಡಿಸಲು ಯಾವುದೇ ಪ್ರಯೋಜನಕರ ಸಾಕ್ಷ್ಯಾಧಾರಗಳು ದೊರೆತಿರುವುದಿಲ್ಲ.

ಪ್ರಾ.ಸಾ: 2

ಶ್ರೀ.ನಾರಾಯಣ ಗೌಡ, ದೇಲಂಪಾಡಿ, ಸುಳ್ಯ ತಾಲೂಕು ಇವರು ದಿ:2-9-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ಇವರು ಮಹಜರಿನ ಪಂಚರು ಸಾಕ್ಷಿದಾರರಾಗಿದ್ದು, ತಾನು ದಿ:5-11-2008 ರಂದು ಕನಕಮಜಲು ಗ್ರಾಮದ ದೇರ್ಕಜೆ ಎಂಬಲ್ಲಿ ರಾತ್ರಿ 7-30 ಗಂಟೆಗೆ ಅಂಗಡಿಗೆ ತೆರಳಿರುವ ಸಂದರ್ಭದಲ್ಲಿ ಮಹಜರಿಗೆ ಸಹಿ ಹಾಕಿರುತ್ತೇನೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಹಾಗೂ ಮದ್ಯದ ಬಗ್ಗೆ ತನಗೆ ತಿಳಿದಿರುವುದಿಲ್ಲ. ಸದರಿ ಮಹಜರಿಗೆ ಸಹಿ ಹಾಕಿರುವುದನ್ನು ಗುರುತಿಸಿ ತನ್ನ ಸಹಿಯನ್ನು ನಿಶಾನೆ ಪಿ–8 ಎಂದು ಗುರುತಿಸಲಾಯಿತು.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಜಪ್ತು ಮಾಡಿಕೊಂಡಿರುವ ಅಕ್ರಮ ಮದ್ಯ ಹಾಗೂ ವಾಹನದ ಬಗ್ಗೆ ತನಗೆ ಯಾವುದೇ ತಿಳುವಳಿಕೆ ಇರುವುದಿಲ್ಲ. ತಾನು ವಾಸಿಸುವ ಮನೆಗೂ ಹಾಗೂ ಅಂಗಡಿಗೂ ಅರ್ಧ ಮೈಲು ದೂರ ಇದೆಯೆಂದು ಉತ್ತರಿಸಿರುತ್ತಾರೆ.

ಪ್ರಕರಣದ ಪಿಡಬ್ಲ್ಯೂ–1 ಮತ್ತು ಪಿಡಬ್ಲ್ಯೂ–2 ರ ಸಾಕ್ಷಿ ವಿಚಾರಣೆಯಲ್ಲಿ ಅರ್ಜಿದಾರರ ಪಾಟೀ ಸವಾಲಿನ ಉತ್ತರಕ್ಕೆ ಅನುಗುಣವಾಗಿ ವಿಚಾರಣೆಯಲ್ಲಿ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:5-11-2008 ರಂದು ಜಪ್ತುಪಡಿಸಿಕೊಂಡಿರುವ ಯಮಾಹ ಮೋಟಾರು ಬೈಕ್ ಸಂಖ್ಯೆ:ಕೆಎ–19–ಹೆಚ್–1499 ರಲ್ಲಿ, ಕರ್ನಾಟಕ–ಕೇರಳ ಗಡಿ ಪ್ರದೇಶದ ದೇರ್ಕಜೆ ಎಂಬಲ್ಲಿ ಹೆಚ್ಚಿನ ಹಣ ಸಂಪಾದಿಸುವ ಉದ್ದೇಶದಿಂದ 6-480 ಲೀಟರ್ ಮದ್ಯವನ್ನು ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಡಿಡಬ್ಲ್ಯೂ–1:

ಶ್ರೀ.ಮೋಹನ್ ಸುರೇಂದ್ರ, ಬಿನ್:ವಿ.ವಾದಿವೇಲು, ಸಿ.ಆರ್.ಸಿ. ಕನಕಮಜಲು, ಸುಳ್ಯ ತಾಲೂಕು ಇವರು ದಿ:11-5-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿದ್ದು, ತಾನು ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಆರ್.ಸಿ. ಮಾಲೀಕನಾಗಿದ್ದು, ತಾನು ದಿ:1-7-2008 ರಂದು ತನ್ನ ದ್ವಿಚಕ್ರ ವಾಹನವನ್ನು ಉಳಿಯ ಪೇಟೆಯ ಬಸ್ಸು ನಿಲ್ದಾಣದಲ್ಲಿ ನಿಲ್ಲಿಸಿದ್ದು, ತಾನು ಬೆಳಿಗ್ಗೆ ಸುಮಾರು 8-00 ಗಂಟೆಗೆ ಸದರಿ ಸ್ಥಳದಿಂದ ವಾಹನವನ್ನು ಬಿಟ್ಟು ಮಂಗಳೂರಿಗೆ ಬಸ್ಸಿನಲ್ಲಿ ಹೊರಟಿರುತ್ತೇನೆ. ಸಂಜೆ ಸುಮಾರು 6-00 ಗಂಟೆಗೆ ಸುಳ್ಯ ಪೇಟೆಗೆ ಬಂದ ಸಂದರ್ಭದಲ್ಲಿ ಬಸ್‌ಸ್ಟ್ಯಾಂಡ್‌ನಲ್ಲಿ ನಿಲ್ಲಿಸಿದ ದ್ವಿಚಕ್ರ ವಾಹನ ಪತ್ತೆಯಾಗದಿದ್ದು, ನಂತರ ದೂರು ನೀಡಲು ಪೊಲೀಸ್ ಠಾಣೆಗೆ ಸಂಪರ್ಕಿಸಿ, ಅವರು ಸದರಿ ದೂರನ್ನು ಸ್ವೀಕರಿಸದೆ ಹಿಂದಕ್ಕೆ ಕಳುಹಿಸಿರುತ್ತಾರೆ. ಅದೇ ದಿನ ರಾತ್ರಿ ತಾನು ಮನೆಗೆ ಹೋಗಿದ್ದು, ನಂತರ ದಿ:3-7-2008 ರಂದು ಠಾಣೆಗೆ ಹೋದಾಗ ಅಬಕಾರಿ ಇಲಾಖೆಯವರು ತನ್ನ ವಾಹನವನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ಮಧ್ಯಂತರ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿ, ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಪಡೆದುಕೊಂಡಿರುತ್ತೇನೆ. ತನ್ನ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿರುತ್ತಾರೆಂದು ಸಾಕ್ಷಿ ನುಡಿದಿರುತ್ತಾರೆ.

ಎ.ಡಿ.ಪಿ.ಯವರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತನ್ನ ಮೋಟಾರು ಬೈಕನ್ನು ಖರೀದಿಸಿ ಸುಮಾರು 6 ರಿಂದ 7 ವರ್ಷಗಳಾಬಹುದು. ತಾನು ಸಾಮಾನ್ಯವಾಗಿ ಮೋಟಾರು ಬೈಕನ್ನು ಬಸ್ಸುಸ್ಟ್ಯಾಂಡ್‌ನಲ್ಲಿ ಇಟ್ಟು ಹೋಗಿರುತ್ತೇನೆ. ದಿ:1-7-2008 ರಂದು ಬೈಕ್ ಕಳವಾದ ನಂತರ ಅದೇ ದಿನ ಸಾಯಂಕಾಲ 6-00 ಗಂಟೆಗೆ ಠಾಣೆಗೆ ಹೋಗಿರುತ್ತೇನೆ. ಠಾಣೆಗೆ ಹೋದಾಗ, ತನ್ನ ಪರಿಚಯದ ಪೊಲೀಸರು ಇರಲಿಲ್ಲ. ತಾನು ಠಾಣೆಗೆ ಹೋದಾಗ ಲಿಖಿತ ಅರ್ಜ್‌ಯನ್ನು ಕೊಂಡುಹೋಗಿರಲಿಲ್ಲ. ತನ್ನ ಮೇಲಾಧಿಕಾರಿಯವರಿಗೆ ಯಾವುದೇ ಲಿಖಿತ ದೂರು ನೀಡಿರುವುದಿಲ್ಲ. ಪೊಲೀಸ್‌ನವರು ವಾಹನವು ಸುಳ್ಯ ಅಬಕಾರಿ ಕಚೇರಿಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಸದರಿ ಬೈಕನ್ನು ಯಾವ ಸಂದರ್ಭಕ್ಕೆ ವಶಪಡಿಸಿಕೊಂಡಿರುತ್ತಾರೆ ಎಂದು ತನಗೆ ತಿಳಿದಿರುವುದಿಲ್ಲ. ತಕ್ಷೀರಿನಲ್ಲಿ ಪತ್ತೆಯಾದ ಆರೋಪಿ ಗಣೇಶ್ ಗೌಡನ ಪರಿಚಯವಿದ್ದು, ಗಣೇಶ್ ಗೌಡ ಆಗಾಗ ತನ್ನ ಬೈಕನ್ನು ಕೊಂಡು ಹೋಗುತ್ತಿದ್ದ. ಆತನ ವ್ಯವಹಾರ ತನಗೆ ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಯಮಾಹ ಮೋಟಾರು ಬೈಕ್‌ನ ನೋಂದಣಿ ಮಾಲೀಕರಾದ ಶ್ರೀ.ಮೋಹನ್ ಸುರೇಂದ್ರ ಇವರು ನೀಡಿರುವ ಸಾಕ್ಷಿ ಹೇಳಿಕೆಯಲ್ಲಿ, ತನ್ನ ಮೋಟಾರು ಬೈಕನ್ನು ದಿ:1-7-2008 ರಂದು ಸುಳ್ಯ ತಾಲೂಕು ಉಳಿಯ ಪೇಟೆಯ ಬಸ್ಸು ನಿಲ್ದಾಣದಲ್ಲಿ ನಿಲ್ಲಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ತಕ್ಷೀರು ದಾಖಲಿಸಿದ ದಿ:5-11-2008 ರಂದು ದಾಖಲಿಸಿದ್ದು, ಅವರು ನಿಲ್ಲಿಸಿದ ದಿನಾಂಕ ಹಾಗೂ ತಕ್ಷೀರು ದಾಖಲಿಸಿದ ದಿನಾಂಕದ ಮಧ್ಯಂತರ ಸುಮಾರು 5 ತಿಂಗಳ ನಂತರ ಮೊಕದ್ದಮೆ ದಾಖಲಿಸಿದ್ದು, ಅರ್ಜಿದಾರರ ಹೇಳಿಕೆಯು ತಪ್ಪಾಗಿರುತ್ತದೆ. ಕಳವಾದ ಬಗ್ಗೆ ಹತ್ತಿರದ ಪೊಲೀಸ್ ಠಾಣೆಯಿಂದ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ. ತಕ್ಷೀರಿನಲ್ಲಿ ಪತ್ತೆಯಾದ ಆರೋಪಿ ಗಣೇಶ್ ಗೌಡ ಈ ಮೊದಲೇ ಪರಿಚಯವಿದ್ದು ಹಾಗೂ ದಿ: 23-3-

2009 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿದ ಅರ್ಜಿಯಲ್ಲಿ, ಅರ್ಜಿದಾರರ ಪರ ಜಿ.ಪಿ.ಎ.ದಾರನಾಗಿ ಗಣೇಶ್ ಗೌಡ ಅರ್ಜಿ ಸಲ್ಲಿಸಿದ್ದು, ಇದರಿಂದ ವಾಹನದ ಮಾಲೀಕರು ಹಾಗೂ ಗಣೇಶ್ ಗೌಡ ಕೂಡಿಕೊಂಡು ತನ್ನ ಮೋಟಾರು ಬೈಕ್‌ನಲ್ಲಿ ಕೇರಳ ರಾಜ್ಯಕ್ಕೆ ಹೆಚ್ಚಿನ ಹಣ ಸಂಪಾದನೆ ಮಾಡುವ ದೃಷ್ಟಿಯಿಂದ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದುದರಿಂದ ದಿನಾಂಕ:5-11-2008 ರಂದು ಯಮಾಹ ಮೋಟಾರು ಬೈಕ್ ಸಂಖ್ಯೆ:ಕೆಎ–19–ಹೆಚ್–1499 ರಲ್ಲಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಗಳ ಮತ್ತು ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ರಾಸಾಯನಿಕ ವಿಶ್ಲೇಷಕರ ವರದಿ ಮತ್ತು ಲಭ್ಯವಿರುವ ದಾಖಲಾತಿಗಳಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಯಮಾಹ ಮೋಟಾರು ಬೈಕ್ ಸಂಖ್ಯೆ:ಕೆಎ–19–ಹೆಚ್–1499 ನ್ನು ಅಕ್ರಮವಾಗಿ 6-480 ಲೀಟರ್ ಮದ್ಯವನ್ನು ಸಾಗಾಟ ಮಾಡಲು ಬಳಸಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಯಮಾಹ ಮೋಟಾರು ಬೈಕ್ ಸಂಖ್ಯೆ:ಕೆಎ–19–ಹೆಚ್–1499 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/139/ಡಿಟಿಸಿಆರ್/2008-09 ದಿನಾಂಕ:17ನೇ ಮೇ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(ನಂ.1), ಸುಳ್ಯ ವಲಯ, ಸುಳ್ಯ ಇವರ ತಕ್ಷೀರು ಸಂಖ್ಯೆ: 6/2008-09 ದಿನಾಂಕ: 5-11-2008 ರಲ್ಲಿ ಜಪ್ತುಪಡಿಸಿರುವ ಯಮಾಹ ಮೋಟಾರು ಬೈಕ್ ಸಂಖ್ಯೆ:ಕೆಎ–19–ಹೆಚ್–1499 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:15-6-2009 ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಯಮಾಹ ಮೋಟಾರು ಬೈಕ್ ಸಂಖ್ಯೆ:ಕೆಎ–19–ಹೆಚ್–1499 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ನಿರೀಕ್ಷಕರು,ಸುಳ್ಯ ವಲಯ ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಸಂಖ್ಯೆ: 01/2009 ದಿ:5-6-2009 ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸುಳ್ಯ ಶಾಖೆ, ಸುಳ್ಯ ಇದರ ಮೌಲ್ಯದ ಮೊತ್ತ ರೂ.6,000/– ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ. ಈ ಆದೇಶದ ಪಾಲನೆ ಬಗ್ಗೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ನಿರೀಕ್ಷಕರು, ಸುಳ್ಯ ವಲಯ,ಸುಳ್ಯ ಇವರು ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:17-05-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ: 1- ಶ್ರೀ.ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು(ನಂ.1), ಸುಳ್ಯ ವಲಯ, ಸುಳ್ಯ.

ಪ್ರಾ.ಸಾ: 2 - ಶ್ರೀ.ನಾರಾಯಣ ಗೌಡ, ಪಂಚರ ಸಾಕ್ಷಿ.

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರ್ ಪ್ರತಿ

ನಿಶಾನೆ ಪಿ–1ಎ : ಮಹಜರ್‌ನಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ–2 : ಪ್ರಥಮ ಮಾಹಿತಿ ವರದಿ.

ನಿಶಾನೆ ಪಿ–2A : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ.

ನಿಶಾನೆ ಪಿ–3 : ವಾಹನದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿ..

ನಿಶಾನೆ ಪಿ–4 : ಕೆಮಿಕಲ್ ವರದಿ.

ನಿಶಾನೆ ಪಿ–5 : ತನಿಖಾ ವರದಿ.

ನಿಶಾನೆ ಪಿ–6 : ವಾಹನವನ್ನು ಅರ್ಜಿದಾರರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಛಾಪಾ ಕಾಗದದಲ್ಲಿ ಸ್ವೀಕೃತಿ ಪ್ರತಿ.

ನಿಶಾನೆ ಪಿ–7 : ವಾಹನವನ್ನು ಬಿಡುಗಡೆಗೊಳಿಸಿದ ವರದಿ.

ನಿಶಾನೆ ಪಿ–8 : ಪ್ರಾ.ಸ.ಅ–2 ಇವರು ಮಹಜರಿನಲ್ಲಿ ಹಾಕಿದ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಸಲ್ಲಿಸಿದ ಸಾಕ್ಷಿದಾರರು:

ಡಿಡಬ್ಲ್ಯೂ–1: ಶ್ರೀ.ಮೋಹನ್ ಸುರೇಂದ್ರ, ಬಿನ್:ವಿ.ವಾದಿವೇಲು, ಸಿ.ಆರ್.ಸಿ. ಕನಕಮಜಲು, ಸುಳ್ಯ ತಾಲೂಕು.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು:

–ಇಲ್ಲ –

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.915

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/146/ಡಿಟಿಸಿಆರ್/2008-09 ದಿನಾಂಕ:20ನೇ ಮೇ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು,
ವಿಟ್ಲ ಪೊಲೀಸ್ ಠಾಣೆ, ವಿಟ್ಲ.

ಆರೋಪಿಗಳು:
ಆರೋಪಿ ಹಾಗೂ ವಾಹನ ಮಾಲೀಕರು ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:11–11–2008 ರಂದು ರಾತ್ರಿ ಸುಮಾರು 7-00 ಗಂಟೆ ಸಮಯಕ್ಕೆ ಫಿರ್ಯಾದುದಾರರಿಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಯವರೊಂದಿಗೆ ಕೂಡಿಕೊಂಡು ಇಲಾಖಾ ವಾಹನದಲ್ಲಿ ಮಂಗಳೂರಿನಿಂದ ಹೊರಟು ತೊಕ್ಕೊಟ್ಟು ಮುಡಿಪು ರಸ್ತೆಯಿಂದ ಕರೋಪಾಡಿ ಎಂಬಲ್ಲಿಗೆ ತಲುಪಿ ಇಲಾಖಾ ಜೀಪನ್ನು ನಿಲ್ಲಿಸಿ ರಸ್ತೆಗಾವಲು ನಡೆಸುತ್ತಿದ್ದಾಗ, ದೊರೆತ ಖಚಿತ ವರ್ತಮಾನದಂತೆ ಕೆಎಲ್–11–ಸಿ–2765 ಸಂಖ್ಯೆಯ ಮಹೇಂದ್ರ ಇಂಟರ್ ನ್ಯಾಶನಲ್ ಜೀಪನ್ನು ಅದರ ಚಾಲಕನು ಅತೀ ವೇಗದಿಂದ ಚಲಾಯಿಸಿಕೊಂಡು ಬರುತ್ತಿದ್ದು, ನಿಲ್ಲಿಸಲು ಸೂಚನೆ ನೀಡಿದಾಗ, ತಮ್ಮ ಸೂಚನೆಯನ್ನು ಲೆಕ್ಕಿಸದೆ ಮುಂದಕ್ಕೆ ಚಲಾಯಿಸಿದ ಪರಿಣಾಮ ಕನ್ಯಾನ ಕಡೆಯಿಂದ ಮುಂದೆ ಬಂದು ನಿಲ್ಲಲು ಸೂಚಿಸಿ ಇಲಾಖಾ ಜೀಪನ್ನು ಬರುವಂತೆ ಫೋನ್ ಮುಖಾಂತರ ತಿಳಿಸಿ, ಸದರಿ ಜೀಪನ್ನು ಹಿಂಬಾಲಿಸಿಕೊಂಡು ಮುಂದಕ್ಕೆ ಹೋದಾಗ ಸುಮಾರು 2 ಕಿ.ಮೀ. ದೂರದಲ್ಲಿ ಎದುರುಗಡೆಯಿಂದ ಇನ್ನೊಂದು ಜೀಪು ಬಂದಾಗ ಅದರ ಚಾಲಕ ಜೀಪನ್ನು ರಸ್ತೆಯ ಬದಿಯಲ್ಲಿ ಚಾಲನೆಯಲ್ಲಿಯೇ ನಿಲ್ಲಿಸಿ ರಸ್ತೆ ಬದಿಯ ತೋಟಕ್ಕೆ ಜಿಗಿದು ಓಡಿ ಪರಾರಿಯಾದನು. ಆಗ ಸಮಯ ರಾತ್ರಿ ಸುಮಾರು 9-00 ಗಂಟೆ ಆಗಿರುವುದರಿಂದ, ಓಡಿ ಹೋದ ವ್ಯಕ್ತಿಯನ್ನು ಹಿಂಬಾಲಿಸಿಕೊಂಡು ಸಿಬ್ಬಂದಿಯವರೊಂದಿಗೆ ಹಿಡಿಯಲು ಪ್ರಯತ್ನಿಸಿದರೂ ಆತನು ಕತ್ತಲೆಯಲ್ಲಿ ಮರೆಯಾದನು. ಸದರಿ ಸ್ಥಳದಲ್ಲಿ ಹಾಜರಿದ್ದ ಪಂಚರಲ್ಲಿ ಆರೋಪಿಯ ಬಗ್ಗೆ ವಿಚಾರಿಸಲಾಗಿ, ಯಾರು ಎಂಬುವುದಾಗಿ ತಿಳಿಯಲಿಲ್ಲ. ಓಡಿ ಹೋದ ವ್ಯಕ್ತಿಯ ವಯಸ್ಸು ಸುಮಾರು 18 ವರ್ಷಗಳಾಗಿರಬಹುದು. ಆತನು ಕಪ್ಪು ಪ್ಯಾಂಟ್ ಮತ್ತು ಬಿಳಿ ಬಣ್ಣದ ಉದ್ದದ ಶರ್ಟ್ ಹಾಕಿದ್ದು,

ಮುಂದಕ್ಕೆ ನೋಡಿದಲ್ಲಿ ಗುರುತಿಸಬಹುದು. ಸದರಿ ಜೀಪನ್ನು ನೋಡಲಾಗಿ, ಮಹೇಂದ್ರ ಕಂಪೆನಿಯ ಇಂಟರ್‌ನ್ಯಾಶನಲ್ ಜೀಪು ಆಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎಲ್–11–ಸಿ–2765 ಎಂಬ ನಂಬರು ಪ್ಲೇಟುಗಳು ಇರುತ್ತದೆ. ಜೀಪಿನ ಹಿಂಬದಿಯ ಟರ್ಪಾಲನ್ನು ತೆಗೆದು ನೋಡಲಾಗಿ ಸುಮಾರು 10 ಪಾಲಿಥಿನ್ ಚೀಲಗಳ ಕಟ್ಟು ಇದ್ದು, ಅದರೊಳಗೆ ಸಾರಾಯಿ ಸ್ಯಾಚೆಟ್‌ಗಳ ಪ್ಯಾಕೇಟುಗಳಿರುವುದು ಕಂಡು ಬಂತು. ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸಿಬ್ಬಂದಿಯವರ ಸಹಾಯದಿಂದ ಈ ಕೆಳಗಿನಂತೆ ಪರಿಶೀಲಿಸಿ ನೋಡಲಾಯಿತು.

ಸದರಿ 10 ಪಾಲಿಥಿನ್ ಚೀಲಗಳ ಕಟ್ಟುಗಳನ್ನು ಪರಿಶೀಲಿಸಲಾಗಿ, ಪ್ರತಿ ಪಾಲಿಥಿನ್ ಚೀಲಗಳಲ್ಲಿ ಕ್ರಮವಾಗಿ 100 ಎಂ.ಎಲ್.ನ 500 ಸಾರಾಯಿ ಸ್ಯಾಚೆಟ್‌ಗಳಂತೆ ಒಟ್ಟು 5000 ಸಾರಾಯಿ ಸ್ಯಾಚೆಟ್‌ಗಳು ಪತ್ತೆಯಾದವು. ಇವುಗಳ ಮೇಲೆ 100 ಎಂ.ಎಲ್.ನ 35 ಡಿಗ್ರಿ ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಿದ ಮೈ.ಶುಗರ್ ಕಂಪೆನಿ ಲಿಮಿಟೆಡ್ ಮಂಡ್ಯ, ಸಾರಾಯಿ ಮದ್ಯಪಾನವು ಆರೋಗ್ಯಕ್ಕೆ ಹಾನಿಕರ, ಇದು ಕರ್ನಾಟಕ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂದು ಬರೆದಿತ್ತು. ಪ್ರತಿ ಗೋಣಿ ಚೀಲದಲ್ಲಿ ಸಾರಾಯಿ ಸ್ಯಾಂಪಲ್‌ಗಾಗಿ ಕ್ರಮವಾಗಿ ಒಂದು ಸಾರಾಯಿ ಸ್ಯಾಚೆಟ್‌ಯನ್ನು ಸ್ಯಾಂಪಲ್‌ಗಾಗಿ ಪ್ರತ್ಯೇಕಿಸಿ ಪಂಚರ ಸಹಿಯುಳ್ಳ ಬಿಳಿ ಬಟ್ಟೆಯನ್ನು ಸುತ್ತಿ ಅದಕ್ಕೆ ಅರಗು ಸೀಲ್ ಮಾಡಿ 1 ರಿಂದ 10 ರವರೆಗೆ ಇರುವ ಪಾಲಿಥಿನ್ ಚೀಲಕ್ಕೆ ಎ ರಿಂದ ಜೆ ವರೆಗೆ ಗುರುತು ಮಾಡಿ ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಲಾಯಿತು. ಇದು ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ರಾಜ್ಯದಿಂದ ಕೇರಳಕ್ಕೆ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಯಾವುದೇ ರಹದಾರಿ ಪತ್ರವಿಲ್ಲದೆ ಆರೋಪಿಗಳು ಜೀಪಿನಲ್ಲಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸಿರುವುದು ದೃಢಪಟ್ಟಿರುವುದರಿಂದ ಮಹಜರನ್ನು ಅದೇ ದಿನ ರಾತ್ರಿ 9-15 ರಿಂದ 11-00 ಗಂಟೆಯವರೆಗೆ ಟಾರ್ಚ್ ಲೈಟ್‌ನ ಸಹಾಯದಿಂದ ಸ್ಥಳದಲ್ಲಿಯೇ ಬರೆದು ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ ಮಹಜರಿಗೆ ಪಂಚರ ಹಾಗೂ ಸಿಬ್ಬಂದಿಯವರ ಸಹಿ ಪಡೆದುಕೊಂಡು ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಣಿಕೆಗೆ ಬಳಸಿದ ಮಹೇಂದ್ರ ಜೀಪನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ನಂತರ ವಿಟ್ಲ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರಿಗೆ ಮೊಕದ್ದಮೆ ದಾಖಲಿಸಲು ಹಸ್ತಾಂತರಿಸಲಾಗಿದ್ದು, ಪೊಲೀಸ್ ಉಪ ನಿರೀಕ್ಷಕರು ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ಓಡಿ ಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:176/2008 ದಿ:11-11-2008 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಜೀಪನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಪ್ರಾಧಿಕಾರಕ್ಕೆ ದಿ:14-11-2008 ರಂದು ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/146/ಡಿಟಿಸಿಆರ್/2008-09 ದಿ:20-11-2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಜೀಪನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ತನಿಖೆಯನ್ನು ಮುಂದುವರಿಸಿದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ /23/2008-09 ದಿ: 4-2-2010 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರ ವರದಿ ಸಂಖ್ಯೆ: ಇ–59-10 ದಿ:3-3-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿಯ ಮದ್ಯಸಾರದ ಪ್ರಮಾಣ ಶೇ.22 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಸಿ ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಈ ಪ್ರಾಧಿಕಾರದ ಆದೇಶ ಸಂಖ್ಯೆ:ಎಸ್‌ಡಿಕೆ/146/ಡಿಟಿಸಿಆರ್/ 2008-09 ದಿ:22-3-2010 ರ ಆದೇಶದಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ ಪಿಇಎಸ್/2007 ದಿ:13-7-2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶವಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12-9-2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಹಾಗೂ ಪತ್ರಿಕಾ ಮಾಧ್ಯಮಗಳ ಪ್ರತಿನಿಧಿಗಳ ಸಮಕ್ಷಮ

ಅಬಕಾರಿ ಆಯುಕ್ತರ ಸುತ್ತೋಲೆಯನ್ನು ಅನುಸರಿಸಿ, ಮುಟ್ಟುಗೋಲು ಹಾಕಿಕೊಳ್ಳಲಾದ 499-000 ಲೀಟರ್ ಸಾರಾಯಿ ಸ್ಯಾಚೆಟ್‌ಗಳನ್ನು ನಾಶಪಡಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ/23/2008-09 ದಿ:17-4-2010 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂ:ಕೆಎಲ್–11–ಸಿ–2765 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆಯಲು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್, ಕ್ಯಾಲಿಕಟ್ ಡಿಸ್ಟ್ರಿಕ್ಟ್, ಕೇರಳ ಇವರಿಗೆ ದಿ:20-6-2009 ಮತ್ತು ದಿ:2-3-2010 ರಂದು ಪತ್ರ ಬರೆಯಲಾಗಿದ್ದು, ಅವರಿಂದ ಇದುವರೆಗೂ ಯಾವುದೇ ವರದಿ ಬಂದಿರುವುದಿಲ್ಲ. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ಜಪ್ತು ಮಾಡಿ ಈಗಾಗಲೇ 1 ವರ್ಷ 5 ತಿಂಗಳು ಮೀರಿದ್ದರೂ, ಯಾವುದೇ ವ್ಯಕ್ತಿ ಅಥವಾ ಆರೋಪಿಗಳು, ವಾಹನದ ನೋಂದಣಿ ಮಾಲೀಕರಾಗಲಿ, ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಕಚೇರಿಯನ್ನಾಗಲಿ ಅಥವಾ ತಮ್ಮ ಕಚೇರಿಯನ್ನಾಗಲಿ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಜೀಪು ಸಂ: ಕೆಎಲ್–11–ಸಿ–2765 ಇದರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:11-11-2008 ರಂದು ಜೀಪು ಸಂ: ಕೆಎಲ್–11–ಸಿ–2765 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ. ಜೆ.ಪಾಪಯ್ಯ, ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ದ.ಕ.ಜಿಲ್ಲೆ, ಮಂಗಳೂರು ಇವರು ದಿ:20-4-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ದಿ:24-3-2008 ರಿಂದ ಇಲ್ಲಿಯವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಉಪ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:11-11-2008 ರಂದು ರಾತ್ರಿ ಸುಮಾರು 7-00 ಗಂಟೆ ಸಮಯಕ್ಕೆ ನನಗೆ ಬಂದ ಖಚಿತ ವರ್ತಮಾನದ ಮೇರೆಗೆ ಮಂಗಳೂರಿನಿಂದ ಹೊರಟು ನಾನು ತೊಕ್ಕೊಟ್ಟು ಮುಡಿಪು ರಸ್ತೆಯಿಂದ ಕರೋಪಾಡಿ ಎಂಬಲ್ಲಿಗೆ ತಲುಪಿ ಜೀಪನ್ನು ನಿಲ್ಲಿಸಿ ರಸ್ತೆಗಾವಲು ನಡೆಸುತ್ತಿದ್ದಾಗ, ದೊರೆತ ಖಚಿತ ವರ್ತಮಾನದಂತೆ ಕೆಎಲ್–11–ಸಿ–2765 ಸಂಖ್ಯೆಯ ಮಹೇಂದ್ರ ಇಂಟರ್‌ನ್ಯಾಶನಲ್ ಜೀಪನ್ನು ಅದರ ಚಾಲಕನು ಅತೀ ವೇಗದಿಂದ ಚಲಾಯಿಸಿಕೊಂಡು ಬರುತ್ತಿದ್ದು, ನಿಲ್ಲಿಸಲು ಸೂಚನೆ ನೀಡಿದಾಗ, ತಮ್ಮ ಸೂಚನೆಯನ್ನು ಲೆಕ್ಕಿಸದೆ ಮುಂದಕ್ಕೆ ಚಲಾಯಿಸಿದ ಪರಿಣಾಮ ಕನ್ಯಾನ ಕಡೆಯಿಂದ ಮುಂದೆ ಬಂದು ನಿಲ್ಲಲು ಸೂಚಿಸಿದ ಜೀಪನ್ನು ಬರುವಂತೆ ಫೋನ್ ಮುಖಾಂತರ ತಿಳಿಸಿ, ನಾನು ಸದರಿ ಜೀಪನ್ನು ಹಿಂಬಾಲಿಸಿಕೊಂಡು ಮುಂದಕ್ಕೆ ಹೋದಾಗ ಸುಮಾರು 2 ಕಿ.ಮೀ. ದೂರದಲ್ಲಿ ಎದುರುಗಡೆಯಿಂದ ಇನ್ನೊಂದು ಜೀಪು ಬಂದಾಗ ಅದರ ಚಾಲಕ ಜೀಪನ್ನು ರಸ್ತೆಯ ಬದಿಯಲ್ಲಿ ಚಾಲನೆಯಲ್ಲಿಯೇ ರಸ್ತೆ ಬದಿಯ ತೋಟಕ್ಕೆ ಜಿಗಿದು ಓಡಿ ಪರಾರಿಯಾದನು. ಆಗ ಸಮಯ ಸುಮಾರು ರಾತ್ರಿ ಸುಮಾರು 9-00 ಗಂಟೆ ಆಗಿರುವುದರಿಂದ, ಓಡಿ ಹೋದ ವ್ಯಕ್ತಿಯನ್ನು ಹಿಂಬಾಲಿಸಿಕೊಂಡು ಸಿಬ್ಬಂದಿಯವರೊಂದಿಗೆ ಹಿಡಿಯಲು ಪ್ರಯತ್ನಿಸಿದರೂ ಆತನು ಕತ್ತಲೆಯಲ್ಲಿ ಮರೆಯಾದನು. ಸದರಿ ಸ್ಥಳದಲ್ಲಿ ಹಾಜರಿದ್ದ ಪಂಚರಲ್ಲಿ ಆರೋಪಿಯ ಬಗ್ಗೆ ವಿಚಾರಿಸಲಾಗಿ,

ಯಾರು ಎಂಬುವುದಾಗಿ ತಿಳಿಯಲಿಲ್ಲ. ಓಡಿ ಹೋದ ವ್ಯಕ್ತಿಯ ವಯಸ್ಸು 18 ವರ್ಷಗಳಾಗಿರಬಹುದು. ಆತನು ಕಪ್ಪು ಪ್ಯಾಂಟ್ ಮತ್ತು ಬಿಳಿ ಬಣ್ಣದ ಉದ್ದದ ಶರ್ಟ್ ಹಾಕಿದ್ದು, ಮುಂದಕ್ಕೆ ನೋಡಿದಲ್ಲಿ ಗುರುತಿಸಬಹುದು. ಸದರಿ ಜೀಪನ್ನು ನೋಡಲಾಗಿ, ಮಹೇಂದ್ರ ಕಂಪೆನಿಯ ಇಂಟರ್‌ನ್ಯಾಶನಲ್ ಜೀಪು ಆಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎಲ್–11–ಸಿ–2765 ಎಂಬ ನಂಬರು ಪ್ಲೇಟುಗಳು ಇರುತ್ತದೆ. ಜೀಪಿನ ಹಿಂಬದಿಯ ಟರ್ಪಾಲನ್ನು ತೆಗೆದು ನೋಡಲಾಗಿ ಸುಮಾರು 10 ಪಾಲಿಥಿನ್ ಚೀಲಗಳ ಕಟ್ಟು ಇದ್ದು, ಅದರೊಳಗೆ ಸಾರಾಯಿ ಸ್ಯಾಚೆಟ್ ಪ್ಯಾಕೇಟುಗಳಿರುವುದು ಕಂಡು ಬಂತು. ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸಿಬ್ಬಂದಿಯವರ ಸಹಾಯದಿಂದ ಈ ಕೆಳಗಿನಂತೆ ಪರಿಶೀಲಿಸಿ ನೋಡಲಾಯಿತು.

ಸದರಿ 10 ಪಾಲಿಥಿನ್ ಚೀಲಗಳ ಕಟ್ಟುಗಳನ್ನು ಪರಿಶೀಲಿಸಲಾಗಿ, ಪ್ರತಿ ಪಾಲಿಥಿನ್ ಚೀಲಗಳಲ್ಲಿ ಕ್ರಮವಾಗಿ 100 ಎಂ.ಎಲ್.ನ 500 ಸಾರಾಯಿ ಸ್ಯಾಚೆಟ್‌ಗಳಂತೆ ಒಟ್ಟು 5000 ಸಾರಾಯಿ ಸ್ಯಾಚೆಟ್‌ಗಳು ಪತ್ತೆಯಾದವು. ಇವುಗಳ ಮೇಲೆ 100 ಎಂ.ಎಲ್.ನ 35 ಡಿಗ್ರಿ ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಿದ ಮೈ.ಶುಗರ್ ಕಂಪೆನಿ ಲಿಮಿಟೆಡ್ ಮಂಡ್ಯ, ಸಾರಾಯಿ ಮದ್ಯಪಾನವು ಆರೋಗ್ಯಕ್ಕೆ ಹಾನಿಕರ, ಇದು ಕರ್ನಾಟಕ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂದು ಬರೆದಿತ್ತು.

ಪ್ರತಿ ಗೋಣಿ ಚೀಲದಲ್ಲಿ ಸಾರಾಯಿ ಸ್ಯಾಂಪಲ್‌ಗಾಗಿ ಕ್ರಮವಾಗಿ ಒಂದು ಸಾರಾಯಿ ಸ್ಯಾಚೆಟನ್ನು ಸ್ಯಾಂಪಲ್‌ಗಾಗಿ ಪ್ರತ್ಯೇಕಿಸಿ ಪಂಚರ ಸಹಿಯುಳ್ಳ ಬಿಳಿ ಬಟ್ಟೆಯನ್ನು ಸುತ್ತಿ ಅದಕ್ಕೆ ಅರಗು ಸೀಲ್ ಮಾಡಿ 1 ರಿಂದ 10 ರವರೆಗೆ ಇರುವ ಪಾಲಿಥಿನ್ ಚೀಲಕ್ಕೆ ಎ ರಿಂದ ಜೆ ವರೆಗೆ ಮಾರ್ಕ್ ಮಾಡಿ ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಲಾಯಿತು. ಇದು ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ರಾಜ್ಯದಿಂದ ಕೇರಳಕ್ಕೆ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಯಾವುದೇ ರಹದಾರಿ ಪತ್ರವಿಲ್ಲದೆ ಆರೋಪಿಗಳು ಜೀಪಿನಲ್ಲಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸಿರುವುದು ದೃಢಪಟ್ಟಿರುವುದರಿಂದ ನಹಜರನ್ನು ಅದೇ ದಿನ ರಾತ್ರಿ 9-15 ರಿಂದ 11-00 ಗಂಟೆಯವರೆಗೆ ಟಾರ್ಚ್ ಲೈಟ್‌ನ ಸಹಾಯದಿಂದ ಸ್ಥಳದಲ್ಲಿಯೇ ಬರೆದು ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ ಮಹಜರಿಗೆ ಪಂಚರ ಹಾಗೂ ಸಿಬ್ಬಂದಿಯವರ ಸಹಿ ಪಡೆದುಕೊಂಡು ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಣಿಕೆಗೆ ಬಳಸಿದ ಮಹೇಂದ್ರ ಜೀಪನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ನಂತರ ವಿಟ್ಲ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರಿಗೆ ಮೊಕದ್ದಮೆಗೆ ದಾಖಲಿಸಲು ಹಸ್ತಾಂತರಿಸಿರುತ್ತೇನೆ. ಪೊಲೀಸ್ ಉಪ ನಿರೀಕ್ಷಕರು ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ಓಡಿ ಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:176/2008 ದಿ:11-11-2008 ರಂತೆ ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ತನಿಖೆಯನ್ನು ಕೈಗೊಂಡಿರುತ್ತಾರೆ.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖೆಯ ಸಾಕ್ಷಿದಾರರಾದ ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ದಿ:20-4-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ,ತಾನು ದಿ:19-9-08 ರಿಂದ ಇಲ್ಲಿಯವರೆಗೆ ಬಂಟ್ವಾಳ ವಲಯ ಕಚೇರಿಯ ಅಬಕಾರಿ ನಿರೀಕ್ಷಕರಾಗಿದ್ದು, ತಕ್ಷೀರಿಗೆ ಸಂಬಂಧಪಟ್ಟ ಜೀಪ್ ಸಂ: ಕೆಎಲ್–11–ಸಿ–2765 ಹಾಗೂ 100 ಎಂ.ಎಲ್.ನ 5000 ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು (ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಸ್ಯಾಂಪಲ್‌ಗಳನ್ನು ಹೊರತುಪಡಿಸಿ) ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ ಇವರಿಂದ ಪಡೆದುಕೊಂಡಿರುತ್ತೇನೆ ಹಾಗೂ ಇದರೊಂದಿಗೆ ರಾಸಾಯನಿಕ ವಿಶ್ಲೇಷಕರ ವರದಿಯನ್ನು ಪಡೆದುಕೊಂಡು, ಈ ಬಗ್ಗೆ ವಶಪಡಿಸಿಕೊಂಡ ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ದಿನಾಂಕ: 4-2-2010 ರಂದು ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ಮಂಗಳೂರು ಇವರಿಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ತನಿಖಾ ವರದಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ಅದನ್ನು ನಿಶಾನೆ ಪಿ–1 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ಸದರಿ ತನಿಖಾ ವರದಿಯನ್ನು ಆಧರಿಸಿ ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ಮಂಗಳೂರು ಇವರ ಪ್ರಾಧಿಕಾರ ಆದೇಶ ಸಂ:ಎಸ್‌ಡಿಕೆ/146/ಡಿಟಿಸಿಆರ್/2008-09 ದಿ:22-03-2010 ರಲ್ಲಿ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 100 ಎಂ.ಎಲ್.ನ 5000 ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು (ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಸ್ಯಾಂಪಲ್‌ಗಳನ್ನು ಹೊರತುಪಡಿಸಿ) ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಿರುತ್ತಾರೆ. ಸದರಿ ನ್ಯಾಯಾಲಯದ ಆದೇಶದಂತೆ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮಹಜರು ಮುಖೇನ ಹಾಗೂ ಸಾರ್ವಜನಿಕ ಸಮಕ್ಷಮ ನಾಶಪಡಿಸಲಾಗಿದೆ. ಪೊಲೀಸ್ ಉಪ ನಿರೀಕ್ಷಕರು ಇವರು ಸಲ್ಲಿಸಿದ ಮಹಜರ್ ಪ್ರತಿಯನ್ನು ನೋಡಲಾಗಿ, ಅದನ್ನು ನಿಶಾನೆ ಪಿ–2 ಎಂದು, ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–3 ಎಂದು ಮತ್ತು ರಾಸಾಯನಿಕ ವರದಿಯನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪ್ ಸಂ: ಕೆಎಲ್–11–ಸಿ–2765 ರ ಮಾಲಿಕತ್ವದ ಬಗ್ಗೆ ರೀಜಿನಲ್ ಟ್ರಾನ್ಸ್‌ಪೋರ್ಟ್ ಆಫೀಸ್,ಕ್ಯಾಲಿಕಟ್ ಡಿಸ್ಟ್ರಿಕ್ಟ್ ಇವರಿಗೆ ದಿ:20-6-2009 ಮತ್ತು ದಿ:2-3-2010 ರಂದು ವಾಹನದ ಬಿ

ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಲ್ಲಿಸಲು ಪತ್ರ ಬರೆಯಲಾಗಿದ್ದು, ಇದುವರೆಗೂ ಯಾವುದೇ ವರದಿ ಬಂದಿರುವುದಿಲ್ಲ. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವು ಈಗಾಗಲೇ ಒಂದು ವರ್ಷ 5 ತಿಂಗಳು ಕಳೆದಿದ್ದು, ತಕ್ಷೀರಿಗೆ ಸಂಬಂಧಿಸಿದ ಆರೋಪಿಯಾಗಲಿ ಅಥವಾ ಅವರ ಪರ ವಕೀಲರಾಗಲಿ ಮತ್ತು ವಾಹನದ ಮಾಲೀಕರಾಗಲಿ ಇದುವರೆಗೂ ತಮ್ಮ ಕಚೇರಿಯಲ್ಲಿ ಹಾಜರಾಗಿರುವುದಿಲ್ಲ ಹಾಗೂ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ಹಾಗೂ ಸದರಿ ವಾಹನವನ್ನು ಇನ್ನೂ ಹೆಚ್ಚಿನ ಕಾಲ ತೆರೆದ ವಾತಾವರಣದಲ್ಲಿ ಇರಿಸುವುದರಿಂದ, ವಾಹನದ ಸ್ಥಿತಿಗತಿ ಕ್ಷೀಣಗೊಂಡು ಸರಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆಯಿರುವುದರಿಂದ ಹಾಗೂ ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವು ಈಗಾಗಲೇ ಒಂದು ವರ್ಷ 5 ತಿಂಗಳು ಕಳೆದಿದ್ದು, ತಕ್ಷೀರಿಗೆ ಸಂಬಂಧಿಸಿದ ಆರೋಪಿಯಾಗಲಿ ಅಥವಾ ಅವರ ಪರ ವಕೀಲರಾಗಲಿ ಮತ್ತು ವಾಹನದ ಮಾಲೀಕರಾಗಲಿ ಇದುವರೆಗೂ ತಮ್ಮ ಕಚೇರಿಯಲ್ಲಿ ಹಾಜರಾಗಿರುವುದಿಲ್ಲ ಹಾಗೂ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ಅಭಿಯೋಜಕ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂ: ಕೆಎಲ್-11-ಸಿ-2765 ಆಗಿದ್ದು, ಇದು ಕೇರಳ ರಾಜ್ಯದಲ್ಲಿ ನೋಂದಾಯಿತ ವಾಹನವಾಗಿರುತ್ತದೆ. ತನಿಖಾಧಿಕಾರಿಯವರು ದಿ:20-6-2009 ಮತ್ತು ದಿ:2-3-2010 ರಂದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್, ಕ್ಯಾಲಿಕಟ್ ಡಿಸ್ಟ್ರಿಕ್ಟ್, ಕೇರಳ ಇವರಿಗೆ "ಬಿ" ಎಕ್ಸ್‌ಟ್ರ್ಯಾಕ್ಟ್ ವರದಿಯ ಬಗ್ಗೆ ಪತ್ರ ಬರೆಯಲಾಗಿದ್ದು, ಅವರಿಂದ ಇದುವರೆಗೂ ಯಾವುದೇ "ಬಿ" ಎಕ್ಸ್‌ಟ್ರ್ಯಾಕ್ಟ್ ವರದಿ ಬಂದಿರುವುದಿಲ್ಲ. ಇದಲ್ಲದೆ ವಾಹನವು ಜಪ್ತಾಗಿ ಈಗಾಗಲೇ 1 ವರ್ಷ 5 ತಿಂಗಳು ಕಳೆದರೂ ಯಾವುದೇ ವ್ಯಕ್ತಿ ಅಥವಾ ಆರೋಪಿಗಳು, ವಾಹನದ ನೋಂದಣಿ ಮಾಲೀಕರಾಗಲಿ, ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಕಚೇರಿಯನ್ನಾಗಲಿ ಅಥವಾ ತಮ್ಮ ಕಚೇರಿಯನ್ನಾಗಲಿ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ಹಾಗೂ ಸದರಿ ವಾಹನವನ್ನು ಇನ್ನೂ ಹೆಚ್ಚಿನ ಕಾಲ ತೆರೆದ ವಾತಾವರಣದಲ್ಲಿ ಇರಿಸುವುದರಿಂದ, ವಾಹನದ ಸ್ಥಿತಿಗತಿ ಕ್ಷೀಣಗೊಳ್ಳುವ ಸಾಧ್ಯತೆಯಿರುವುದರಿಂದ ಹಾಗೂ ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:11-11-2008 ರಂದು ಜಪ್ತುಪಡಿಸಿಕೊಂಡಿರುವ ಜೀಪು ಸಂಖ್ಯೆ: ಕೆಎಲ್-11-ಸಿ-2765 ನ್ನು ಅಳವಡಿಸಿ ಅಕ್ರಮವಾಗಿ 100 ಎಂ.ಎಲ್.ನ 5000 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಆಧಾರಿತ ನೈಜ ದಾಖಲೆಗಳೊಂದಿಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಮತ್ತು ಪತ್ತೆಯಾಗದಿರುವ ಆರೋಪಿಗಳು ಮತ್ತು ವಾಹನದ ಮಾಲೀಕತ್ವ ಹೊಂದಿರುವ ವ್ಯಕ್ತಿಗಳು ಸದರಿ ವಾಹನದಲ್ಲಿ ಅವರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸಿರುವುದು ಘಟನೆಯಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43(ಸಿ)ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 100 ಎಂ.ಎಲ್.ನ 5000 ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಜೀಪು ಸಂಖ್ಯೆ: ಕೆಎಲ್–11-ಸಿ–2765 ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂ:ಕೆಎಲ್–11-ಸಿ–2765 ನ್ನು ವಶಪಡಿಸಿಕೊಂಡು ಸುಮಾರು 1 ವರ್ಷ 5 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಮತ್ತು ತನಿಖಾಧಿಕಾರಿಯವರ ಕಚೇರಿ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರಾಗಲಿ, ಪರಾರಿಯಾದ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಯವರು ಸಲ್ಲಿಸಿದ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ನೋಂದಣಿ ಸಂಖ್ಯೆ: ಕೆಎಲ್–11-ಸಿ–2765 ಆಗಿದ್ದು, ಇದರ ನೋಂದಣಿ ಮಾಲಿಕತ್ವದ ಬಗ್ಗೆ ಸಾರಿಗೆ ಅಧಿಕಾರಿಯವರನ್ನು ಸಂಪರ್ಕಿಸಿದರೂ ಅವರಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ತಕ್ಷೀರು ನಡೆಸಿದ ಸಂದರ್ಭದಲ್ಲಿ ಆರೋಪಿಯು ಪರಾರಿಯಾಗಿದ್ದು, ಆರೋಪಿ ಹಾಗೂ ವಾಹನ ಚಾಲಕರು ಕೂಡಿಕೊಂಡು ಸಾರಾಯಿ ಸ್ಯಾಚೆಟ್‌ಗಳನ್ನು ಅಕ್ರಮವಾಗಿ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ಹಾಗೂ ಸದರಿ ವಾಹನವನ್ನು ಇನ್ನೂ ಹೆಚ್ಚಿನ ಕಾಲ ತೆರೆದ ವಾತಾವರಣದಲ್ಲಿ ಇರಿಸುವುದರಿಂದ ವಾಹನದ ಸ್ಥಿತಿಗತಿ ಕ್ಷೀಣಗೊಳ್ಳುವ ಸಾಧ್ಯತೆಯಿರುವುದರಿಂದ ಹಾಗೂ ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನಿಖಾಧಿಕಾರಿಯವರು ಶಿಫಾರಸ್ಸು ಮಾಡಿರುತ್ತಾರೆ.

ತನಿಖಾಧಿಕಾರಿಯವರು ಸದ್ರಿ ವಾಹನದ "ಬಿ" ಎಕ್ಸ್‌ಟ್ರ್ಯಾಕ್ಟ್ ವರದಿ ಪಡೆಯಲು ಅವರ ಕಚೇರಿಯಿಂದ ದಿ:20-6-2009 ಹಾಗೂ ದಿ: 2-3-2010 ರಂದು ಎರಡು ಬಾರಿ ಸಾರಿಗೆ ಅಧಿಕಾರಿ, ಕ್ಯಾಲಿಕಟ್ ಜಿಲ್ಲೆ ಇವರಿಗೆ ಪತ್ರಗಳ ಮೂಲಕ ಪ್ರಯತ್ನ ಮಾಡಿದ್ದು, ಸದ್ರಿ ಸಾರಿಗೆ ಅಧಿಕಾರಿಗಳಿಂದ ಯಾವುದೇ ಉತ್ತರ ಹಾಗೂ ಮಾಹಿತಿ ಲಭ್ಯವಿರುವುದಿಲ್ಲ. ಕಾರಣ ವಾಹನದ ಮಾಲೀಕರು ಯಾರು ಎಂಬುವುದು ಈ ಪ್ರಾಧಿಕಾರಕ್ಕೆ ಮಾಹಿತಿ ಲಭ್ಯವಾಗದಿರುವ ಕಾರಣ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಬಿ) ರಡಿ ಕಾರಣ ಕೇಳಿ ನೋಟೀಸು ನೀಡಲು ಸಾಧ್ಯವಾಗಿರುವುದಿಲ್ಲ. ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪನ್ನು ಈಗಾಗಲೇ 1 ವರ್ಷ 5 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಜೀಪು ಸಂಖ್ಯೆ: ಕೆಎಲ್–11-ಸಿ–2765 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/146/ಡಿಟಿಸಿಆರ್/2008–09, ದಿನಾಂಕ:20ನೇ ಮೇ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ,ವಿಟ್ಲ ಇವರ ತಕ್ಷೀರು ಸಂ;176/2008 ದಿ:11-11-2008 ರಲ್ಲಿ ಜಪ್ತುಪಡಿಸಿರುವ ಜೀಪು ಸಂಖ್ಯೆ: ಕೆಎಲ್–11-ಸಿ–2765 ನ್ನು ನಿಯಮ 43(ಸಿ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:20-05-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ. ಜೆ.ಪಾಪಯ್ಯ, ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ದ.ಕ.ಜಿಲ್ಲೆ, ಮಂಗಳೂರು.

ಪ್ರಾ.ಸಾ–2: ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1: ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ಮಂಗಳೂರು ಇವರಿಗೆ ಸಲ್ಲಿಸಿದ ತನಿಖಾ ವರದಿ.

ನಿಶಾನೆ ಪಿ–1A : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ನಿಶಾನೆ ಪಿ–2 : ಮಹಜರಿನ ಪ್ರತಿ.

ನಿಶಾನೆ ಪಿ–3 : ಪ್ರಥಮ ಮಾಹಿತಿ ವರದಿ.

ನಿಶಾನೆ ಪಿ–4 : ರಾಸಾಯನಿಕ ವರದಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.934

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/153/ಡಿಟಿಸಿಆರ್/2006-07 ದಿನಾಂಕ:17ನೇ ಮೇ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ನಿರೀಕ್ಷಕರು,
ಮಂಗಳೂರು ಗ್ರಾಮಾಂತರ ಉಳ್ಳಾಲ
ಪೊಲೀಸ್ ಠಾಣೆ, ಉಳ್ಳಾಲ.

ಆರೋಪಿಗಳು:

1) ದೇವದಾಸ್ ಅಮೀನ್, ಬಿನ್:ನಾರಾಯಣ ಸುವರ್ಣ, ಎಂ.ಸಿ.ಸಿ. 208 ಸ್ಯಾಂಡ್‌ಪಿಟ್, ಬೆಂಗರೆ, ಮಂಗಳೂರು.
2) ರಾಜೇಶ್ ಸುವರ್ಣ, ಬಿನ್:ಹೇಮಚಂದ್ರ ಅಮೀನ್, ತೋಟಬೆಂಗ್ರೆ, ಮಂಗಳೂರು.
3) ರಾಮಚಂದ್ರ, ಬಿನ್:ಐತಪ್ಪ ಬಂಗೇರ, ಸ್ಯಾಂಡ್ಸ್‌ಫಿಟ್, ಬೆಂಗ್ರೆ, ಮಂಗಳೂರು.
4) ವಿಜಯ ಮೆಂಡನ್,ಬಿನ್:ಸುಂದರ ಕರ್ಕೇರಾ, ತೋಟ ಬೆಂಗ್ರೆ, ಮಂಗಳೂರು.
5) ಶಂಕರ ಬಾರ್ವಿ.

6)ವಾಜ್ ಯಾನೆ ವಾಜಿ, ಅಡಂಕುದ್ರು, ಮಂಗಳೂರು.

ದೋಣಿಯ ಮಾಲೀಕರು:

1. ಶ್ರೀ.ದೇವದಾಸ್ ಅಮೀನ್, ಬಿನ್:ನಾರಾಯಣ ಸುವರ್ಣ, ಎಂ.ಸಿ.ಸಿ. 208 ಸ್ಟಾಂಡ್‌ಪಿಟ್, ಬೆಂಗರೆ, ಮಂಗಳೂರು.
2. ಶ್ರೀ.ಹರೀಶ್ ಕುಮಾರ್, ಬಿನ್:ದಿ.ಕೃಷ್ಣಪ್ಪ ಸಾಲಿಯಾನ್, ಪುರುಷೋತ್ತಮ ನಿಲಯ, ಮೀನಕಳಿಯ ಅಂಚೆ, ಪಣಂಬೂರು, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 21-8-2006 ರಂದು ಮಂಗಳೂರು ತಾಲೂಕಿನ ಉಳ್ಳಾಲ ಗ್ರಾಮದ ಕೋಟೆಪುರ ಎಂಬಲ್ಲಿ ನೇತ್ರಾವತಿ ನದಿಯ ಬದಿಯಲ್ಲಿ ಉಳ್ಳಾಲ ಅಡಂಕುದ್ರು ಬಳಿಯಿಂದ ಕಂಟ್ರಿ ಸಾರಾಯಿಯನ್ನು ಪ್ರತಿನಿತ್ಯ ಬೆಂಗ್ರೆ ಕಡೆಗೆ ದೋಣಿಗಳಲ್ಲಿ ಸಾಗಿಸಲಾಗುತ್ತಿದ್ದು, ನೇತ್ರಾವತಿ ನದಿಯ ಮೂಲಕ ಅಳಿವೆ ಬಾಗಿಲಿನ ಬಳಿಗೆ ಬಂದು ಕಂಟ್ರಿ ಸಾರಾಯಿಯನ್ನು ಖರೀದಿಸುವವರಿಗೆ ಹಸ್ತಾಂತರಿಸಲಾಗುತ್ತಿತ್ತು ಎಂಬುವುದರ ಬಗ್ಗೆ ಬೆಳಿಗ್ಗೆ 11-30 ಗಂಟೆಗೆ ಡಿ.ಸಿ. ಇ.ಐ.ಬಿ. ಕಚೇರಿಗೆ ಬಂದ ಖಚಿತ ವರ್ತಮಾನ ಮಾಹಿತಿ ಪ್ರಕಾರ ಫಿರ್ಯಾದುದಾರರು ತನ್ನ ಸಿಬ್ಬಂದಿಯವರೊಂದಿಗೆ ಮತ್ತು ಪಂಚರೊಂದಿಗೆ ಕಚೇರಿಯಿಂದ ಸುಮಾರು 11-30 ಗಂಟೆಗೆ ಹೊರಟು ಸದರಿ ಸ್ಥಳಕ್ಕೆ ದಾಳಿ ನಡೆಸಿದಾಗ, ಅಡಂಕುದ್ರು ಕಡೆಯಿಂದ ನೇತ್ರಾವತಿ ಬದಿಯಲ್ಲಿ ಎರಡು ನಾಡದೋಣಿಗಳು ಬಂದು ನದಿ ತೀರದಲ್ಲಿ ನಿಂತಿತ್ತು. ಎರಡು ದೋಣಿಗಳ ಪೈಕಿ ಒಂದು ದೋಣಿಯಲ್ಲಿ ಮೂವರು ಹಾಗೂ ಇನ್ನೊಂದರಲ್ಲಿ ಇಬ್ಬರು ಇದ್ದು, ಆ ದೋಣಿಗಳನ್ನು ಪರಿಶೀಲಿಸುವ ಸಲುವಾಗಿ ಹತ್ತಿರ ತೆರಳಿದಾಗ, ಮೂರು ಜನರಿದ್ದ ದೋಣಿಯಿಂದ ಇಬ್ಬರು ಹಾಗೂ ಎರಡು ಜನರಿದ್ದ ದೋಣಿಯಿಂದ ಒಬ್ಬ ಅಳಿವೆ ಬಾಗಿಲಿನ ಕಡೆಗೆ ಓಡಿ ಪರಾರಿಯಾದರು. ಎರಡು ದೋಣಿಗಳಲ್ಲಿ ಉಳಿದ ಇಬ್ಬರನ್ನು ಸಿಬ್ಬಂದಿಗಳ ಸಹಾಯದಿಂದ ವಶಕ್ಕೆ ತೆಗೆದುಕೊಂಡು ಪಂಚರ ಸಮಕ್ಷಮ ದೋಣಿಯನ್ನು ದಡಕ್ಕೆ ಎಳೆದು ಪರಿಶೀಲಿಸಿದಾಗ, ಎರಡು ದೋಣಿಗಳ ಒಳಗೆ ತಲಾ 35 ಲೀಟರ್ ಸಾಮರ್ಥ್ಯದ ಎರಡೆರಡು ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂತು. ಈ ಬಗ್ಗೆ ಇಬ್ಬರನ್ನು ವಿಚಾರಿಸಲಾಗಿ, ಇದು ಕಂಟ್ರಿ ಸಾರಾಯಿ ಆಗಿದ್ದು ಅಡಂಕುದ್ರುವಿನ ವಾಜ್ ಯಾನೆ ವಾಜಿ, ಅಡಂಕುದ್ರು, ಮಂಗಳೂರು ಎಂಬಾತನಿಂದ ಈ ಕಂಟ್ರಿ ಸಾರಾಯಿಗಳನ್ನು ಖರೀದಿಸಿದ್ದು, ಆಳ ಸಮುದ್ರಕ್ಕೆ ಹೋಗುವ ಮೀನುಗಾರರಿಗೆ ಮಾರಾಟ ಮಾಡಲೆಂದು ಈ ಸಾರಾಯಿಯನ್ನು ಸಾಗಿಸಿರುವುದೆಂದು ತಿಳಿಸಿರುತ್ತಾರೆ. ಓಡಿ ಹೋದವರ ಹೆಸರು ರಾಮಚಂದ್ರ ಬಿನ್:ಐತಪ್ಪ ಬಂಗೇರ ಸ್ಟಾಂಡ್ಸ್‌ಫಿಟ್ ಬೆಂಗ್ರೆ ಮಂಗಳೂರು, ವಿಜಯ ಮೆಂಡನ್,ಬಿನ್:ಸುಂದರ ಕರ್ಕೇರಾ, ತೋಟ ಬೆಂಗ್ರೆ, ಮಂಗಳೂರು ಮತ್ತು ಶಂಕರ ಖರ್ವಿ, ಅವರ ಹೆಸರು ದೇವದಾಸ್ ಅಮೀನ್, ಬಿನ್:ನಾರಾಯಣ ಸುವರ್ಣ, ಎಂ.ಸಿ.ಸಿ. 208 ಸ್ಟಾಂಡ್‌ಪಿಟ್, ಬೆಂಗರೆ, ಮಂಗಳೂರು ಹಾಗೂ ರಾಜೇಶ್ ಸುವರ್ಣ, ಬಿನ್:ಹೇನುಚಂದ್ರ ಅಮೀನ್, ತೋಟಬೆಂಗ್ರೆ, ಮಂಗಳೂರು ಎಂದು ತಿಳಿಸಿದರು. ಈ ಕಂಟ್ರಿ ಸಾರಾಯಿಯನ್ನು ಹೊಂದಿರುವ ಬಗ್ಗೆ ದಾಖಲೆ ಪತ್ರಗಳೇನಾದರೂ ಇದೆಯೇ ಎಂದು ಕೇಳಿದಾಗ,ತನ್ನ ಬಳಿ ಯಾವುದೇ ದಾಖಲೆ ಪತ್ರಗಳು ಇಲ್ಲವೆಂದು ತಿಳಿಸಿದ ಕಾರಣ ಇದು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದರಿಂದ ಮತ್ತು ಕರ್ನಾಟಕ ಅಬಕಾರಿ ಕಾಯಿದೆ ಕಲಂ 13(1)(ಎ)(ಎಫ್) ಮತ್ತು ಕಲಂ 15(1) 32, 34, 41(1)(2) ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಪರಿಶೀಲಿಸಲಾಯಿತು.

1) ತಲಾ 35 ಲೀಟರ್ ಸಾಮರ್ಥ್ಯದ ಕಂಟ್ರಿ ಸಾರಾಯಿ ತುಂಬಿರುವ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳು–3 ಹಾಗೂ ನೀಲಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ ಸುಮಾರು ಅರ್ಧದಷ್ಟು ಕಂಟ್ರಿ ಸಾರಾಯಿ ತುಂಬಿಸಿದ್ದು, ಒಟ್ಟು ಸುಮಾರು 105 ಲೀಟರ್ ಕಳ್ಳಭಟ್ಟಿ ಸಾರಾಯಿ.
2) ಕಳ್ಳಭಟ್ಟಿ ಸಾರಾಯಿಯನ್ನು ನೇತ್ರಾವತಿ ಹೊಳೆಯಲ್ಲಿ ಸಾಗಿಸಲು ಉಪಯೋಗಿಸಿದ ಸಣ್ಣ ನದಿ ದೋಣಿಗಳು–2. ಒಂದು ನದಿ ದೋಣಿಯ ಹೊರಮೈ ಎರಡೂ ಕಡೆ "ಕೆ.ಎಸ್." ಎಂದು ಬರೆದಿದ್ದು, ಇದರ ಹೊರಮೈ ಕೇಸರಿ ಬಣ್ಣ ಹಾಗೂ ಒಳಮೈ ನೀಲಿ ಬಣ್ಣದಿಂದ ಪೈಂಟ್ ಮಾಡಿರುತ್ತದೆ. ಇನ್ನೊಂದು ದೋಣಿಯ ಹೊರಮೈ ಎರಡೂ ಕಡೆ "ಡಿಂಕಿ" ಎಂದು ಬರೆದಿದ್ದು, ಇದರ ಹೊರಮೈ ಕಂದು ಬಣ್ಣ ಹಾಗೂ ಒಳಮೈ ಕಪ್ಪು ಬಣ್ಣದಾಗಿರುತ್ತದೆ. ಎರಡು ನಾಡದೋಣಿಗಳನ್ನು ನಡೆಸಲು ಉಪಯೋಗಿಸುವ ಚುಕ್ಕಾಣಿಗಳಿವೆ. ತಲಾ ಒಂದೊಂದು ದೋಣಿಯಲ್ಲಿ ಎರಡೆರಡು ಚುಕ್ಕಾಣಿಗಳಿದ್ದು, ತಲಾ 35 ಲೀಟರ್ ಸಾಮರ್ಥ್ಯದ 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಕಳ್ಳಭಟ್ಟಿ ಸಾರಾಯಿ ಇದ್ದು, ಡಿಂಕಿ ದೋಣಿಯಲ್ಲಿ ಒಂದು ಬಿಳಿ ಬಣ್ಣದ ಸಾರಾಯಿ ತುಂಬಿದ ಕ್ಯಾನು ಹಾಗೂ ಕೆ.ಎಸ್. ದೋಣಿಯಲ್ಲಿ ನೀಲಿ ಬಣ್ಣದ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನುಗಳು ಪತ್ತೆಯಾದವು. ಸದರಿ 4 ಪ್ಲಾಸ್ಟಿಕ್ ಕ್ಯಾನುಗಳಿಂದ ತಲಾ ಒಂದೊಂದು ಲೀಟರ್‌ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಮಾದರಿಗಾಗಿ ತೆಗೆದು, ಅದನ್ನು ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತುಂಬಿಸಿ ಸಾರಾಯಿ ತುಂಬಿರುವ 4 ಪ್ಲಾಸ್ಟಿಕ್ ಕ್ಯಾನುಗಳನ್ನು

ಮತ್ತು ಮಾದರಿಯಾಗಿ ತೆಗೆದ 4 ಪ್ಲಾಸ್ಟಿಕ್ ಕ್ಯಾನುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ಎಸ್.ಹೆಚ್.ಒ. ಸೀಲ್ ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಯಿತು. ಕಳ್ಳಭಟ್ಟಿ ಸಾರಾಯಿ ಹಾಗೂ ಅಕ್ರಮ ಸಾಗಾಟಕ್ಕೆ ಬಳಸಿದ ದೋಣಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ವಶಪಡಿಸಿಕೊಂಡು ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಮಹಜರನ್ನು ಸ್ಥಳದಲ್ಲಿಯೇ ಬರೆದು ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ, ದಿನಾಂಕ ಮತ್ತು ಸಮಯ ಹಾಗೂ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದುಕೊಂಡು ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ: 189/2006 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ವರದಿಯನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರು ದಿ:22-8-2006 ರ ಪತ್ರದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿ ಕ್ರಮ ಜರುಗಿಸುವ ಬಗ್ಗೆ ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಆದೇಶ ನೀಡಬೇಕೆಂದು ಕೋರಿರುವ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ,ಮಂಗಳೂರು ಇವರ ಆದೇಶ ಸಂಖ್ಯೆ: ಎಂಎನ್‌ಜಿ/ಇ.ಐ.ಬಿ /5/2006-07 ದಿ:30-8-2006 ರಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತು ಹಾಗೂ ಕಡತವನ್ನು ಮುಂದಿನ ತನಿಖೆಗಾಗಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮಂಗಳೂರು ದಕ್ಷಿಣ ಇವರಿಗೆ ಹಸ್ತಾಂತರಿಸಲು ಆದೇಶಿಸಿರುತ್ತಾರೆ.

ತಕ್ಷೀರಿನಲ್ಲಿ ಎರಡು ನಾಡದೋಣಿಗಳ ಪೈಕಿ ಡಿಂಕಿ ಎಂದು ನಮೂದಿಸಿರುವ ದೋಣಿಯ ಮಾಲೀಕರಾದ ಶ್ರೀ.ದೇವದಾಸ್ ಅಮೀನ್, ಬಿನ್:ನಾರಾಯಣ ಸುವರ್ಣ, ಎಂ.ಸಿ.ಸಿ. 208 ಸ್ಟಾಂಡ್‌ಪಿಟ್, ಬೆಂಗರೆ, ಮಂಗಳೂರು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:1-9-2006 ರಂದು ಮತ್ತು ಕೆ.ಎಸ್. ಎಂಬ ಹೆಸರಿನ ನಾಡದೋಣಿಯ ಮಾಲೀಕರಾದ ಶ್ರೀ.ಹರೀಶ್ ಕುಮಾರ್, ಬಿನ್:ದಿ.ಕೃಷ್ಣಪ್ಪ ಸಾಲಿಯಾನ್,ಪುರುಷೋತ್ತಮ ನಿಲಯ, ಮೀನಕಳಿಯ ಅಂಚೆ, ಪಣಂಬೂರು, ಮಂಗಳೂರು ಇವರು ತನ್ನ ವಕೀಲರ ಮುಖಾಂತರ ದಿ:23-8-2006 ರಂದು ಅರ್ಜಿ ಸಲ್ಲಿಸಿ, ಸದರಿ ನಾಡದೋಣಿಗಳು ಯಾವುದೇ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಿಲ್ಲ. ತಮ್ಮ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿ ದೋಣಿಗಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ದೋಣಿಗಳನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

ಶ್ರೀ.ದೇವದಾಸ್ ಅಮೀನ್ ಇವರ ಮಾಲಿಕತ್ವ ಹೊಂದಿರುವ ದೋಣಿಯ ಮೌಲ್ಯಮಾಪನದ ಬಗ್ಗೆ ಯಶವಂತ ಕ್ಯಾನೊ ವರ್ಕರ್ಸ್ ಅಂಡ್ ರಿಪಯ್ರ್ಸ್ ಉಳಿಯ, ಉಳ್ಳಾಲ,ಮಂಗಳೂರು ಇವರು ನೀಡಿದ ಬಿಲ್ಡರ್ಸ್ ಸರ್ಟಿಫಿಕೆಟ್‌ನಲ್ಲಿ ಸದ್ರಿ ನಾಡದೋಣಿಯನ್ನು 1999 ನೇ ಸಾಲಿನಲ್ಲಿ ನಿರ್ಮಿಸಲ್ಪಟ್ಟಿದ್ದು, ಇದರ ಅಂದಾಜು ಮೌಲ್ಯ ರೂ.8,500/- ಗಳಾಗಬಹುದೆಂದು ಹಾಗೂ ಶ್ರೀ.ಹರೀಶ್ ಕುಮಾರ್ ಇವರ ಮಾಲಿಕತ್ವ ಹೊಂದಿರುವ ದೋಣಿಯ ಮೌಲ್ಯಮಾಪನದ ಬಗ್ಗೆ ಶಾರ್ಕ್ ಬೋಟ್ಸ್, ನಿಯರ್ ಪಡುಮಡ ಟೆಂಪಲ್, ಉಳಿಯ, ಉಳ್ಳಾಲ, ಮಂಗಳೂರು ಇವರು ದಿ:17-6-2000 ರಂದು ನೀಡಿದ ವರದಿಯಲ್ಲಿ ರೂ.28,000/- ಗಳಾಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ.

ಸದ್ರಿ ಅರ್ಜಿಗಳನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಮಧ್ಯಂತರ ಆದೇಶ ಸಂಖ್ಯೆ: ಇ.ಐ.ಬಿ /ಡಿಟಿಸಿಆರ್/153/2006-07 ದಿ:11-1-2007 ರ ಆದೇಶದಲ್ಲಿ, ಶ್ರೀ.ದೇವದಾಸ್ ಅಮೀನ್ ಇವರಿಗೆ ಸೇರಿದ ನಾಡದೋಣಿಗೆ ರೂ.10,000/- ಮೌಲ್ಯವನ್ನು ನಿಗಧಿಪಡಿಸಿ, ಅದಕ್ಕೆ ಸಮಾನವಾದ ರಾಷ್ಟ್ರೀಕೃತ ಬ್ಯಾಂಕಿನಿಂದ ಭದ್ರತೆ ನೀಡಿದಲ್ಲಿ ಹಾಗೂ ಇತರೆ ಷರತ್ತುಗಳನ್ನು ಪಾಲಿಸಿದಲ್ಲಿ,ತಕ್ಷೀರಿನಲ್ಲಿ ವಶಪಡಿಸಿಕೊಂಡ ಕೆ.ಎಸ್. ಎಂದು ನಮೂದಿಸಿದ ನಾಡದೋಣಿಯನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಕೆ.ಎಸ್. ನಾಡದೋಣಿಗೆ ರೂ.28,000/- ಮೌಲ್ಯವನ್ನು ನಿಗಧಿಪಡಿಸಿ ಅದಕ್ಕೆ ಸಮಾನವಾದ ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ಯ ಗ್ಯಾರಂಟಿ ಹಾಗೂ ಇತರ ಷರತ್ತುಗಳಿಗೆ ಬದ್ಧರಾದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಕೆ.ಎಸ್. ನಾಡದೋಣಿಯನ್ನು ಅದರ ಮಾಲೀಕರಾದ ಶ್ರೀ.ಹರೀಶ್ ಕುಮಾರ್ ಇವರಿಗೆ ಮಧ್ಯಂತರ ಬಿಡುಗಡೆಗೊಳಿಸಲು ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಮಧ್ಯಂತರ ಆದೇಶ ಸಂಖ್ಯೆ: ಇ.ಐ.ಬಿ/ಡಿಟಿಸಿಆರ್/153/2006-07 ದಿ:15-2-2007 ರಂದು ಆದೇಶಿಸಿರುತ್ತಾರೆ.

ಶ್ರೀ.ದೇವದಾಸ್ ಅಮೀನ್,ಬಿನ್:ನಾರಾಯಣ ಸುವರ್ಣ,ಎಂ.ಸಿ.ಸಿ. 208 ಸ್ಟಾಂಡ್‌ಪಿಟ್, ಬೆಂಗರೆ, ಮಂಗಳೂರು ಇವರು ಮೇಲಿನ ಮಧ್ಯಂತರ ಆದೇಶದಂತೆ ರೂ.10,000/- ಬ್ಯಾಂಕ್ ಭದ್ರತೆಯನ್ನು ಕೆನರಾ ಬ್ಯಾಂಕ್, ಹೊಯಿಗೆ ಬಜಾರ್ ಶಾಖೆ, ಮಂಗಳೂರು ಇವರಿಂದ ಪಡೆದು ಈ ಪ್ರಾಧಿಕಾರಕ್ಕೆ ದಿ:9-2-2007 ರಂದು ಸಲ್ಲಿಸಿರುತ್ತಾರೆ. ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಇ.ಐ.ಬಿ/ ಡಿಟಿಸಿಆರ್/153/2006-07

ದಿ:9-2-2007 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಡಿಂಕಿ ದೋಣಿಯ ಮಾಲೀಕರಾದ ಶ್ರೀ.ದೇವದಾಸ್ ಅಮೀನ್ ಇವರಿಗೆ ಮಧ್ಯಂತರ ಸುಪರ್ಧಿಗೆ ಪಡೆಯಲು ಆದೇಶಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಂದ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪೊಲೀಸ್ ಉಪ ಅಧೀಕ್ಷಕರು, ಪಣಂಬೂರು ಉಪ ವಿಭಾಗ, ಪಣಂಬೂರು ಇವರು ರಾಸಾಯನಿಕ ತಜ್ಞರು, ಮಂಗಳೂರು ಇವರಿಗೆ ಕಳುಹಿಸಲಾಗಿದ್ದು, ಇವರ ಪತ್ರ ಸಂಖ್ಯೆ: ಇ–421-4 ದಿ:1-12-2006 ರ ವರದಿಯಲ್ಲಿ, ಕಳ್ಳಭಟ್ಟಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.26 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಎರಡು ನಾಡದೋಣಿಗಳ ಮಾಲೀಕರಿಗೂ ಹಾಗೂ ಆರೋಪಿಗಳಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ಈ ಪ್ರಾಧಿಕಾರದಿಂದ ದಿ:2-8-2007 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ಕಾರಣ ಕೇಳಿ ನೋಟೀಸಿಗೆ ದೋಣಿಯ ಮಾಲೀಕರಾದ ಶ್ರೀ.ದೇವದಾಸ್ ಅಮೀನ್ ಮಾತ್ರ ಉತ್ತರವನ್ನು ದಿ:5-9-2007 ರಂದು ಸಲ್ಲಿಸಿರುತ್ತಾರೆ.

ಇನ್ನೊಂದು ನಾಡದೋಣಿಯ ಮಾಲೀಕರಾದ ಶ್ರೀ.ಹರೀಶ್ ಕುಮಾರ್, ಬಿನ್:ದಿ.ಕೃಷ್ಣಪ್ಪ ಸಾಲಿಯಾನ್, ಪುರುಷೋತ್ತಮ ನಿಲಯ, ಮೀನಕಳಿಯ ಅಂಚೆ, ಪಣಂಬೂರು, ಮಂಗಳೂರು ಇವರಿಗೆ ಈ ಪ್ರಾಧಿಕಾರದಿಂದ ನಾಡದೋಣಿಯ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿದರೂ, ತದನಂತರ ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸಲು ನೋಟೀಸು ನೀಡಿದರೂ ಈ ಪ್ರಾಧಿಕಾರದ ಮುಂದೆ ಇದುವರೆಗೂ ಹಾಜರಾಗದೆ ಯಾವುದೇ ಬ್ಯಾಂಕ್ ಗ್ಯಾರಂಟಿಯನ್ನು ಹಾಗೂ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ಇದುವರೆಗೂ ಸಲ್ಲಿಸಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:21-8-2006 ರಂದು ಕೆ.ಎಸ್. ಮತ್ತು ಡಿಂಕಿ ನಾಡದೋಣಿಗಳಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ದೋಣಿಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ದೋಣಿಗಳಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ದೋಣಿಗಳ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ದೋಣಿಗಳ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ನಾಡದೋಣಿಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಕೆ.ತಿಲಕಚಂದ್ರ, ಪೊಲೀಸ್ ನಿರೀಕ್ಷಕರು, ಮಂಗಳೂರು ದಕ್ಷಿಣ ಪೊಲೀಸ್ ಠಾಣೆ, ಮಂಗಳೂರು ಇವರು ದಿ:3-12-2008 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಡಿಸೆಂಬರ್–2004 ರಿಂದ ಸಪ್ಟೆಂಬರ್–2006 ರವರೆಗೆ ಜಿಲ್ಲಾ ಅಪರಾಧ ಮಾಹಿತಿ ದಳದಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:21-8-2006 ರಂದು ಬೆಳಿಗ್ಗೆ 11-30 ಗಂಟೆಗೆ ತನ್ನ ಕಚೇರಿಗೆ ಬಂದ ಮಾಹಿತಿಯಂತೆ ಉಳ್ಳಾಲ ಕೋಟೆಪುರ ಸಮೀಪದ ನದಿಯಲ್ಲಿ ಅಕ್ರಮವಾಗಿ ನಾಡದೋಣಿಯಲ್ಲಿ ಕಳ್ಳಭಟ್ಟಿ ಸಾರಾಯಿ ಸಾಗಾಟ ನಡೆಯುತ್ತಿದೆ. ಈ ಬಗ್ಗೆ ಪೊಲೀಸ್ ಅಧೀಕ್ಷಕರ ಅನುಮತಿ ಪಡೆದು ಸಿಬ್ಬಂದಿ ಹಾಗೂ ಪಂಚರೊಂದಿಗೆ ಇಲಾಖಾ ವಾಹನದಲ್ಲಿ ಉಳ್ಳಾಲ ಕೋಟೆಪುರ ಅಳಿವೆ ಬಳಿಗೆ ಹೋಗಿ ಮರೆಯಲ್ಲಿ ನಿಂತು ಹೊಂಚು ಹಾಕುತ್ತಿರುವಾಗ, ಮಧ್ಯಾಹ್ನ 1-15 ಗಂಟೆ ಸಮಯಕ್ಕೆ ಅಡಂಕುದ್ರು ಕಡೆಯಿಂದ ಬಂದ ಎರಡು ದೋಣಿಗಳನ್ನು ಚಲಾಯಿಸಿಕೊಂಡು ತೀರಕ್ಕೆ ತಂದು ನಿಲ್ಲಿಸಿದರು. ಕೂಡಲೇ ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಸ್ಥಳಕ್ಕೆ ಧಾವಿಸಿ, ಒಂದು ದೋಣಿಯಲ್ಲಿದ್ದ 3 ಜನರಲ್ಲಿ ಇಬ್ಬರು ಹಾಗೂ ಮತ್ತೊಂದು ದೋಣಿಯಲ್ಲಿದ್ದ ಇಬ್ಬರಲ್ಲಿ ಒಬ್ಬಾತ ತಪ್ಪಿಸಿ ಪರಾರಿಯಾಗುವಲ್ಲಿ ಯಶಸ್ವಿಯಾದನು. ಉಳಿದ ಇಬ್ಬರನ್ನು ತಮ್ಮ ವಶಕ್ಕೆ ತೆಗೆದುಕೊಂಡು ದೋಣಿಯನ್ನು ಪರಿಶೀಲಿಸಲಾಗಿ ಎರಡು ನಾಡದೋಣಿಗಳಿದ್ದು, ಒಂದು ದೋಣಿಯ ಎರಡು ಬದಿಯಲ್ಲಿ ಕೆ.ಎಸ್. ಎಂದು ಮತ್ತು ಇನ್ನೊಂದು ದೋಣಿಯ ಎರಡು ಬದಿಯಲ್ಲಿ ಡಿಂಕಿ ಎಂದು ಬರೆದಿರುತ್ತದೆ. ದೋಣಿಗಳನ್ನು ಪರಿಶೀಲಿಸಲಾಗಿ, ಎರಡು ದೋಣಿಗಳಲ್ಲಿ ಸಾರಾಯಿ ತುಂಬಿಸಿದ ತಲಾ 35 ಲೀಟರ್ ಗಾತ್ರದ ಎರಡು ಪ್ಲಾಸ್ಟಿಕ್ ಕ್ಯಾನುಗಳಿದ್ದವು. ಸಾರಾಯಿ ಸಾಗಾಟದ ಬಗ್ಗೆ

ಪರವಾನಿಗೆ ಕೇಳಲಾಗಿ, ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿದರು. ವಶಕ್ಕೆ ತೆಗೆದುಕೊಂಡ ವ್ಯಕ್ತಿಗಳನ್ನು ಪರಿಶೀಲಿಸಲಾಗಿ, ಒಬ್ಬ ದೇವದಾಸ್ ಅಮೀನ್ ಹಾಗೂ ಇನ್ನೊಬ್ಬ ರಾಜೇಶ್ ಸುವರ್ಣ ಎಂಬುವುದಾಗಿ ತಿಳಿಸಿರುತ್ತಾರೆ ಹಾಗೂ ಪರಾರಿಯಾದ ರಾಮಚಂದ್ರ ಮತ್ತು ವಿಜಯ ಮೆಂಡನ್ ಹಾಗೂ ಶಂಕರ್ ಖಾರ್ವಿ ಎಂದು ತಿಳಿಸಿರುತ್ತಾರೆ. ಆರೋಪಿಗಳು ಕರ್ನಾಟಕ ಅಬಕಾರಿ ಕಾಯಿದೆಯಂತೆ ಅಪರಾಧವೆಸಗಿದಾಗಿ ತಿಳಿಸಿ, ಮಾದರಿ ಬಗ್ಗೆ 4 ಪ್ಲಾಸ್ಟಿಕ್ ಕ್ಯಾನುಗಳಿಂದ ಒಂದೊಂದು ಲೀಟರ್‌ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಪ್ರತ್ಯೇಕ ಕ್ಯಾನುಗಳಿಗೆ ಪ್ಯಾಕ್ ಮಾಡಿ ಎಲ್ಲಾ ಕ್ಯಾನುಗಳಿಗೆ ಬಿಳಿ ಬಟ್ಟೆ ಸುತ್ತಿ ಸೀಲ್ ಮಾಡಿ ಪಂಚರ ಸಹಿಯಿರುವ ಚೀಟಿಯನ್ನು ಅಂಟಿಸಿರುತ್ತಾರೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಬರೆದಿರುತ್ತೇನೆ. ಇದು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ನಂತರ ಈ ಬಗ್ಗೆ ವರದಿಯನ್ನು ಪಡೆದು ಮುಂದಿನ ಕ್ರಮದ ಬಗ್ಗೆ ಆರೋಪಿಗಳನ್ನು ಹಾಗೂ ದಾಖಲೆಗಳನ್ನು ಠಾಣಾ ವ್ಯಾಪ್ತಿಯ ಉಳ್ಳಾಲ ಪೊಲೀಸ್ ಠಾಣೆಗೆ ಹಸ್ತಾಂತರಿಸಿರುತ್ತೇನೆ. ತನ್ನ ವರದಿಯ ಪ್ರತಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಎರಡು ನಾಡದೋಣಿಗಳಲ್ಲಿ ಒಂದು ದೋಣಿಯನ್ನು ಮಾಲೀಕರ ಸುಪರ್ಧಿಗೆ ಬಿಡುಗಡೆ ಮಾಡಲಾಗಿದ್ದು, ಇನ್ನೊಂದು ದೋಣಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತೇನೆ. ಸದರಿ ನಾಡದೋಣಿಯನ್ನು ಮುದ್ದೆಮಾಲ್ ನಂ:1 ಎಂದು ಗುರುತಿಸಲಾಯಿತೆಂದು ಸಾಕ್ಷಿ ನುಡಿದಿರುತ್ತಾರೆ.

ರಕ್ಷಣ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ,ತನಗೆ ಬಂದ ವರ್ತಮಾನ ವರದಿಯು ದೂರವಾಣಿ ಮುಖಾಂತರ ಬಂದಿರುತ್ತದೆ. ಈ ಬಗ್ಗೆ ಠಾಣೆಯ ಕೇಸ್ ಡೈರಿಯಲ್ಲಿ ನಮೂದಿಸಿರುತ್ತೇನೆ. ತಕ್ಷೀರು ನಡೆದ ಸ್ಥಳಕ್ಕೆ ತಮ್ಮ ಇಲಾಖಾ ವಾಹನದಲ್ಲಿ ಹೋಗಿರುತ್ತೇನೆ. ಪಂಚರನ್ನು ತಮ್ಮ ಕಚೇರಿಯಿಂದಲೇ ಕರೆದುಕೊಂಡು ಹೋಗಿರುತ್ತೇನೆ. ಸದರಿ ದೋಣಿಗಳಲ್ಲಿ ಸಾಗಿ ಬರುತ್ತಿದ್ದ ಜನರ ಪೈಕಿ ದೋಣಿ ನದಿ ತೀರಕ್ಕೆ ತಲುಪಿದ ತಕ್ಷಣ ಮೂವರು ತಮ್ಮನ್ನು ಕಂಡು ನೀರಿನಲ್ಲಿ ಪರಾರಿಯಾಗಿ ಓಡಿದರು. ಕಳ್ಳಭಟ್ಟಿ ಸಾರಾಯಿ ತುಂಬಿದ ಪ್ಲಾಸ್ಟಿಕ್ ಕ್ಯಾನುಗಳನ್ನು ದೋಣಿಯ ಮಧ್ಯ ಭಾಗದಲ್ಲಿ ಇರಿಸಲಾಗಿತ್ತು. ದೋಣಿಯ ಮಾಲೀಕರ ವಿರುದ್ದ ಸುಳ್ಳು ಮೊಕದ್ದಮೆಯನ್ನು ಸೃಷ್ಟಿಸಿ ದೋಣಿಗಳನ್ನು ವಶಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಕರಣದ ಫಿರ್ಯಾದುದಾರರು ನೀಡಿದ ಸಾಕ್ಷಿ ವಿಚಾರಣೆಯಲ್ಲಿ ಅರ್ಜಿದಾರರ ಪಾಟೀ ಸವಾಲಿನ ಉತ್ತರಕ್ಕೆ ಅನುಗುಣವಾಗಿ ವಿಚಾರಣೆಯಲ್ಲಿ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:21-8-2006 ರಂದು ಜಪ್ತುಪಡಿಸಿಕೊಂಡಿರುವ ಎರಡು ನಾಡದೋಣಿಗಳಲ್ಲಿ 105 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಡಿಡಬ್ಲ್ಯು–1:

ಶ್ರೀ.ದೇವದಾಸ್ ಅಮೀನ್, ಬಿನ್:ನಾರಾಯಣ ಸುವರ್ಣ, ಅಮೀನ್ ನಿಕೇತನ್, ಬೆಂಗರೆ ತೋಟ, ಮಂಗಳೂರು ಇವರು ದಿ:12-8-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಪರ ಸಾಕ್ಷಿ ನೀಡಿದ್ದು, ತಾನು ಡಿಂಕಿ ಎಂಬ ದೋಣಿಯ ಮಾಲೀಕನಾಗಿದ್ದು, ತಾನು ಈ ನಾಡದೋಣಿಯನ್ನು 1991 ರಲ್ಲಿ ಮೊಗವೀರ ಸಂಸ್ಥೆಯ ಸಹಾಯಧನದಿಂದ ಸಾಲ ಪಡೆದು ಖರೀದಿಸಿರುತ್ತೇನೆ. ಇದರ ಮೌಲ್ಯ ಸುಮಾರು ರೂ.8,500/– ಆಗಿರುತ್ತದೆ. ತಾನು ಸದರಿ ಸಾಲವನ್ನು ಇಲ್ಲಿಯವರೆಗೂ ಪೂರ್ಣವಾಗಿ ಪಾವತಿಸಿರುವುದಿಲ್ಲ. ತಾನು ದಿನನಿತ್ಯ ಬೆಳಗಿನ ಜಾವ 4-30 ಗಂಟೆಗೆ ಸಾಮಾನ್ಯ ಮೀನು ಹಿಡಿಯುವ ಕಸಬಿಗೆ ಹೋಗಿದ್ದು, ತಾನು ಮೀನು ಹಿಡಿಯುವ ಕಾರ್ಯವನ್ನು ನಡೆಸಿ ಬೆಳಿಗ್ಗೆ ಸುಮಾರು 9-30 ಕ್ಕೆ ಮೀನು ಮಾರಾಟ ಮಾಡುವ ಸ್ಥಳಕ್ಕೆ ತಲುಪಿಸುತ್ತೇವೆ. ಮೀನು ಖಾಲಿ ಮಾಡಿ, ಖಾಲಿ ದೋಣಿಯನ್ನು ನದಿಯ ದಡದ ಹತ್ತಿರ ನದಿಯಲ್ಲಿಯೇ ಬೋಟನ್ನು ಲಂಗರು ಹಾಕಿ ಪುನ: ಬಲೆ ಹಾಕಿ ಬೋಟನ್ನು ಅಲ್ಲಿಯೇ ಇತರ ದೋಣಿಗಳನ್ನು ಇರಿಸುವ ಸ್ಥಳದಲ್ಲಿ ಬಲೆಗಳನ್ನು ಬಿಡಿಸುವ ಸಲುವಾಗಿ ನಿಲುಗಡೆ ಮಾಡಿರುತ್ತೇನೆ. ನಂತರ ದೋಣಿಯನ್ನು ಅಲ್ಲಿಯೇ ನಿಲ್ಲಿಸಿ ತನ್ನ ಊಟೋಪಚಾರಕ್ಕೆ ಬೇರೆ ದೋಣಿಯ ಮೂಲಕ ಬೆಂಗ್ರೆ ಸ್ಥಳಕ್ಕೆ ಹೋಗಿರುತ್ತೇವೆ. ಮಧ್ಯಾಹ್ನ ಪುನ: 3-00 ಗಂಟೆಗೆ ವಾಪಸು ಬಂದು ಮೀನು ಹಿಡಿಯುವ ಬಲೆಯನ್ನು ಸರಿಯಾಗಿ ಬಿಡಿಸಿ ಪುನ: ಮೀನು ಹಿಡಿಯುವ ಕಾರ್ಯ ಮಾಡುತ್ತೇವೆ. ತಾನು ದಿ: 21-8-2006 ರಂದು ಇದೇ ರೀತಿ ಬೆಳಿಗ್ಗೆ 4-30 ಗಂಟೆಗೆ ಮೀನು ಹಿಡಿಯಲು ಸಮುದ್ರಕ್ಕೆ ಹೋಗಿದ್ದು, ವಾಪಾಸು ಬೆಳಿಗ್ಗೆ 9-30 ಕ್ಕೆ ಮೀನು ಹಿಡಿದು, ಹಿಡಿದ ಮೀನನ್ನು ಸೊಸೈಟಿಗೆ ನೀಡಿ ಬೋಟನ್ನು ಲಂಗರು ಹಾಕುವ ಜಾಗದಲ್ಲಿ ಇರಿಸಿರುತ್ತೇನೆ. ಆ ದಿವಸ ಮಂಗಳೂರು ಮೀನು ಮಾರುಕಟ್ಟೆ ಸಮಿತಿ ಇವರಲ್ಲಿ ತಾನು ಹಿಡಿದ ಮೀನಿನ ಮೌಲ್ಯ ರೂ.1,600/- ಕ್ಕೆ ರಶೀದಿ ಪಡೆದುಕೊಂಡು, ಈ ರಶೀದಿಯಂತೆ ರೂ.80/– ನ್ನು ತನ್ನ ದೋಣಿಯ ಸಾಲದ ಬಗ್ಗೆ ಜಮೆ ಮಾಡಲಾಗಿರುತ್ತದೆ. ಆ ದಿವಸ ಪಡೆದುಕೊಂಡಿರುವ ರಶೀದಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿ ಅದನ್ನು ನಿಶಾನೆ ಡಿ–1 ಎಂದು ಗುರುತಿಸಿರುತ್ತೇನೆ. ಆ ದಿವಸ ತಾನು ಮೀನು ಖಾಲಿ ಮಾಡಿ ತನ್ನ ದೋಣಿಯನ್ನು ಉಳ್ಳಾಲ ಕೋಟೆಪುರ ಬಳಿ ದೋಣಿ ತಂದು ಇಟ್ಟಿದ್ದು, ತಾನು ಕೋಟೆಪುರ ಉಳ್ಳಾಲದಲ್ಲಿ ಇಟ್ಟು ವಾಪಾಸು ಮನೆಗೆ ಬಂದಿರುತ್ತೇನೆ. ತನಗೆ ಮಧ್ಯಾಹ್ನ 1-30 ಗಂಟೆಗೆ

ದೂರವಾಣಿ ಮುಖಾಂತರ ತನ್ನ ನಾಡದೋಣಿಯನ್ನು ಪೊಲೀಸ್ ಅಧಿಕಾರಿಗಳು ಎತ್ತಿಕೊಂಡು ಹೋಗಿದ್ದು, ಅದರೊಟ್ಟಿಗೆ ಮೀನು ಹಿಡಿಯುವ ಬಲೆ, ಲಂಗರು ಮತ್ತು ಚುಕ್ಕಾಣಿ ಇತ್ಯಾದಿಗಳನ್ನು ವಶಪಡಿಸಿಕೊಂಡಿದ್ದು, ನಂತರ ಉಳ್ಳಾಲ ಪೊಲೀಸ್ ಠಾಣೆಗೆ ಧಾವಿಸಿ ನೋಡಲಾಗಿ, ಪೊಲೀಸ್ ಠಾಣೆಯ ಹಿಂಬದಿಯಲ್ಲಿ ತನ್ನ ಬೋಟನ್ನು ಇರಿಸಿಕೊಂಡಿರುತ್ತಾರೆ. ಠಾಣೆಯಲ್ಲಿ ಪ್ರಶ್ನಿಸಿದಾಗ, ತನ್ನ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿಕೊಂಡು ತನ್ನೊಟ್ಟಿಗೆ ಬಂದಿದ್ದ ರಾಜೇಶ್ ಮತ್ತು ತನ್ನನ್ನು ದಸ್ತಗಿರಿ ಮಾಡಿರುತ್ತಾರೆ. ತನ್ನ ದೋಣಿಯನ್ನು ಮೀನು ಹಿಡಿಯುವ ಉದ್ದೇಶಕ್ಕೆ ಅಲ್ಲದೆ ಬೇರೆ ಯಾವುದೇ ಉಪಯೋಗಕ್ಕೆ ಬಳಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಎ.ಡಿ.ಪಿ.ಯವರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಪೊಲೀಸರು ಅನವಶ್ಯಕ ತನ್ನ ದೋಣಿಯನ್ನು ವಶಕ್ಕೆ ತೆಗೆದುಕೊಂಡಿರುವ ಬಗ್ಗೆ ಸಂಬಂಧಪಟ್ಟ ಮಾನ್ಯ ನ್ಯಾಯಾಲಯದಲ್ಲಾಗಲಿ ಅಥವಾ ಪೊಲೀಸ್ ಹಿರಿಯ ಅಧಿಕಾರಿಯವರಲ್ಲಾಗಲಿ ತಾನು ಖುದ್ದಾಗಿ ಯಾವುದೇ ದೂರು ನೀಡಿರುವುದಿಲ್ಲ. ತನ್ನ ವಿರುದ್ಧ ಸ್ಥಳೀಯ ಪೊಲೀಸರೊಂದಿಗೆ ಯಾವುದೇ ವೈಮನಸ್ಸು ಇರುವುದಿಲ್ಲ. ತನ್ನ ಬೋಟನ್ನು ಈ ಮೊಕದ್ದಮೆಯಿಂದ ಹಿಂದಕ್ಕೆ ಪಡೆಯುವ ಉದ್ದೇಶದಿಂದ ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕೆ.ಎಸ್. ನಾಡದೋಣಿಯ ಮಾಲೀಕರಾದ ಶ್ರೀ.ಹರೀಶ್ ಕುಮಾರ್, ಬಿನ್:ದಿ.ಕೃಷ್ಣಪ್ಪ ಸಾಲಿಯಾನ್, ಪುರುಷೋತ್ತಮ ನಿಲಯ, ಮೀನಕಳಿಯ ಅಂಚೆ, ಪಣಂಬೂರು, ಮಂಗಳೂರು ಇವರಿಗೆ ಈ ಪ್ರಾಧಿಕಾರದಿಂದ ದಿ: 15-2-2007 ರಂದು ರೂ.28,000/– ಮೊತ್ತದ ಬ್ಯಾಂಕ್ ಭದ್ರತೆ ನೀಡಿದಲ್ಲಿ, ಸದರಿ ನಾಡದೋಣಿಯನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಈ ಪ್ರಾಧಿಕಾರದಿಂದ ಮಧ್ಯಂತರ ಆದೇಶ ನೀಡಲಾಗಿದ್ದರೂ, ಇದುವರೆಗೂ ಯಾವುದೇ ರಾಷ್ಟ್ರೀಕೃತ ಬಾಂಕ್‌ನ ಭದ್ರತೆಯನ್ನು ನೀಡಿರುವುದಿಲ್ಲ ಹಾಗೂ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43(ಬಿ) ರನ್ವಯ ಕಾರಣ ಕೇಳಿ ನೋಟೀಸುಗಳನ್ನು ದಿ:2-8-2007 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ಇದುವರೆಗೂ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಹಾಗೂ ಸಾಕ್ಷಿ ವಿಚಾರಣೆಗೆ ಅವರಿಗೂ ಹಾಗೂ ಅವರ ಪರ ವಕೀಲರಿಗೆ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ನೀಡಿದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಆದುದರಿಂದ ಶ್ರೀ.ಹರೀಶ್ ಕುಮಾರ್, ಬಿನ್:ದಿ.ಕೃಷ್ಣಪ್ಪ ಸಾಲಿಯಾನ್, ಪುರುಷೋತ್ತಮ ನಿಲಯ, ಮೀನಕಳಿಯ ಅಂಚೆ, ಪಣಂಬೂರು, ಮಂಗಳೂರು ಇವರು ತನ್ನ ಕೆ.ಎಸ್. ನಾಡದೋಣಿಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದು ದೃಢಪಟ್ಟಿರುತ್ತದೆ.

ಆದುದರಿಂದ ದಿನಾಂಕ:21-8-2006 ರಂದು ಎರಡು ನಾಡದೋಣಿಗಳನ್ನು ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಫಿರ್ಯಾದುದಾರರ ಸಾಕ್ಷಿ ವಿಚಾರಣೆ ಹಾಗೂ ರಾಸಾಯನಿಕ ವಿಶ್ಲೇಷಕರ ವರದಿ ಮತ್ತು ಲಭ್ಯವಿರುವ ದಾಖಲಾತಿಗಳಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಡಿಂಕಿ ಮತ್ತು ಕೆ.ಎಸ್. ಹೆಸರಿನ ನಾಡದೋಣಿಗಳನ್ನು ಅಕ್ರಮವಾಗಿ 105 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟ ಮಾಡಲು ಬಳಸಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ನಾಡದೋಣಿಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಎರಡು ನಾಡದೋಣಿಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/153/ಡಿಟಿಸಿಆರ್/2006-07 ದಿನಾಂಕ:17ನೇ ಮೇ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ನಿರೀಕ್ಷಕರು, ಉಳ್ಳಾಲ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ, ಉಳ್ಳಾಲ, ಮಂಗಳೂರು ಇವರ ತಕ್ಷೀರು ಸಂಖ್ಯೆ: 189/2006 ದಿನಾಂಕ: 21-8-2006 ರಲ್ಲಿ ಜಪ್ತುಪಡಿಸಿರುವ ಡಿಂಕಿ ಮತ್ತು ಕೆ.ಎಸ್. ಹೆಸರಿನ ಎರಡು ನಾಡದೋಣಿಗಳನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:11-1-2007 ಮತ್ತು ದಿ:9-2-2007 ರಂದು ಡಿಂಕಿ ಎಂಬ ಹೆಸರಿನ ನಾಡದೋಣಿಯನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ದೋಣಿಯ ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಡಿಂಕಿ ಎಂಬ ಹೆಸರಿನ ನಾಡದೋಣಿಯನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ

ಭದ್ರತೆಯಾಗಿ ರೆವೆನ್ಯೂ ಡಿಪೋಸಿಟ್‌ನಲ್ಲಿ ಇರಿಸಿರುವ ಬ್ಯಾಂಕ್ ಗ್ಯಾರಂಟಿ ಮೊತ್ತ ರೂ.10,000/– ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿ:17-05-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾಸಾ:1- ಶ್ರೀ.ಕೆ.ತಿಲಕಚಂದ್ರ, ಪೊಲೀಸ್ ನಿರೀಕ್ಷಕರು,ಮಂಗಳೂರು ದಕ್ಷಿಣ ಪೊಲೀಸ್ ಠಾಣೆ ಮಂಗಳೂರು

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರ್ ಪ್ರತಿ
ನಿಶಾನೆ ಪಿ–1ಎ : ಮಹಜರ್‌ನಲ್ಲಿ ಫಿರ್ಯಾದುದಾರರ ಸಹಿ
ನಿಶಾನೆ ಪಿ–2 : ಫಿರ್ಯಾದುದಾರರ ವರದಿ.
ನಿಶಾನೆ ಪಿ–2A : ವರದಿಯಲ್ಲಿ ಫಿರ್ಯಾದುದಾರರ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಸಲ್ಲಿಸಿದ ಸಾಕ್ಷಿದಾರರು:

ಡಿಡಬ್ಲ್ಯೂ–1: ಶ್ರೀ.ದೇವದಾಸ್ ಅಮೀನ್, ಬಿನ್:ನಾರಾಯಣ ಸುವರ್ಣ, ಅಮೀನ್ ನಿಕೇತನ್, ಬೆಂಗರೆ ತೋಟ, ಮಂಗಳೂರು.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು:

ಡಿ–1: ಡಿಡಬ್ಲ್ಯೂ–1 ಇವರು ಸಲ್ಲಿಸಿದ ರಶೀದಿ ಸಂಖ್ಯೆ: 78/48.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.935

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/305/2009–10, ದಿನಾಂಕ:19ನೇ ಏಪ್ರಿಲ್, 2010

ಅಬಕಾರಿ ಉಪ ನಿರೀಕ್ಷಕರು, ಮಂಡ್ಯ ಉಪವಿಭಾಗ, ಮಂಡ್ಯ ಇವರ ಪ್ರ.ಮಾ.ವ ಸಂಖ್ಯೆ:08/2009–10, ದಿನಾಂಕ:10–01–2010.

ಉಪಸ್ಥಿತರು: ಡಾ: ವೈ.ಮಂಜುನಾಥ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ.

ಫಿರ್ಯಾದುದಾರರು	ಆಪಾದಿತರು
ಅಬಕಾರಿ ಉಪ ನಿರೀಕ್ಷಕರು ಮಂಡ್ಯ, ಉಪವಿಭಾಗ, ಮಂಡ್ಯ	ತಲೆಮರೆಸಿಕೊಂಡಿರುತ್ತಾರೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:10–01–2010 ರಂದು ಸಾಯಂಕಾಲ 04–00 ಗಂಟೆ ಸಮಯದಲ್ಲಿ ಮಂಡ್ಯ ತಾಲ್ಲೂಕು, ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾ ಹತ್ತಿರವಿರುವ ದೀಪಾ ಡಾಬಾದ ಪಕ್ಕದಲ್ಲಿರುವ ಸರ್ಕಾರಿ

ಜಾಗದಲ್ಲಿ ಅಕ್ರಮವಾಗಿ ಸುಮಾರು 9,000.000 ಲೀ ಮದ್ಯಸಾರವನ್ನು ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ: ಕೆಎ–02/ಸಿ–7474 ರ ಟ್ಯಾಂಕರ್ (10 ಚಕ್ರದ್ದು) ವಾಹನದಲ್ಲಿ ಸಾಗಾಣಿಕೆಗಾಗಿ ಹೊಂದಿರುವುದನ್ನು ಪತ್ತೆಮಾಡಿದ ಫಿರ್ಯಾದುದಾರರು, ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11,14,32, 38(ಎ),43 ಮತ್ತು 43(ಎ) ರ ರೀತ್ಯಾ ಅಪರಾಧ ವಾದ್ದರಿಂದ ಮೇಲ್ಕಂಡ ಮದ್ಯಸಾರ ಮತ್ತು ವಾಹನವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಪ್ರ.ಮಾ.ವ ಸಂಖ್ಯೆ:08/09–10, ದಿನಾಂಕ:10–01–2010 ರಂತೆ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ.

ಅಬಕಾರಿ ಅಧೀಕ್ಷಕರು, ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿ, ಡಿಸ್ಟಿಲರಿ, ಭಾರತೀನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ದಿನಾಂಕ:09–01–2010 ರ ಪತ್ರದ ಮೂಲಕ ದಿನಾಂಕ:09–01–2010 ರಂದು 02–30 ಗಂಟೆಗೆ ಓರಿಯನ್ ಡಿಸ್ಟಿಲರೀಸ್, ಬೆಂಗಳೂರು ಇಲ್ಲಿಗೆ 20,000 ಲೀ ಮದ್ಯಸಾರವನ್ನು ತುಂಬಿಕೊಂಡು ಹೊರಟ ಲಾರಿ, ಚಾಲಕ ಓರಿಯನ್ ಡಿಸ್ಟಿಲರೀಸ್, ಬೆಂಗಳೂರು – ಇಲ್ಲಿಗೆ ತಲುಪಿರುವುದಿಲ್ಲವೆಂಬ ವಿಷಯವನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯಸಾರದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಬಳಸಬಹುದಾದ ಮದ್ಯವನ್ನು ತಯಾರಿಸಲು ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ.

ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ: ಕೆಎ–02/ಸಿ–7474 (ಟ್ಯಾಂಕರ್) ವಾಹನಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ರಾಜಾಜಿನಗರ, ಬೆಂಗಳೂರು (ಪಶ್ಚಿಮ) ಇವರು ನೀಡಿರುವ "ಬಿ" ವಹಿಯ ಪರಿಶೀಲನೆಯಿಂದ ಶ್ರೀಮತಿ ಎನ್.ಎಸ್.ಸರಸ್ವತಿ ಕೋಂ ಹೆಚ್.ನಾಗರಾಜು, ನಂ.168, 7 ನೇ ಮೈನ್, 6 ನೇ ಹಂತ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು–560044 ಇವರು ವಾಹನದ ಮಾಲೀಕರೆಂಬುದು ತಿಳಿದು ಬಂದಿರುತ್ತದೆ.

ಅಬಕಾರಿ ಉಪ ಅಧೀಕ್ಷಕರು, ಮಂಡ್ಯ ಉಪವಿಭಾಗ, ಮಂಡ್ಯ ಇವರು ದಿನಾಂಕ:23–01–2010 ರ ಪತ್ರದ ಮೂಲಕ ದಿನಾಂಕ:11–01–2010 ರಂದು ಶ್ರೀ ಹೆಚ್.ಟಿ.ನಾಗರಾಜು ಇವರು ಮೇಲ್ಕಂಡ ಸ್ಪಿರಿಟ್ ತುಂಬಿದ ಟ್ಯಾಂಕರ್ ಸಂಖ್ಯೆ: ಕೆಎ–02/ಸಿ–7474 ವಾಹನವನ್ನು ಬಿಡದಿ ಬಳಿ ದಿನಾಂಕ:08–01–2010 ರ ರಾತ್ರಿ 08–45 ರಲ್ಲಿ ದರೋಡೆ ಕೋರರು ದರೋಡೆ ಮಾಡಿರುತ್ತಾರೆ ಎಂದು ಬಿಡದಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುವುದಾಗಿ, ಈ ಬಗ್ಗೆ ಬಿಡದಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:12/2010 ರ ಮೇರೆಗೆ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿ, ಬಿಡದಿ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಥಮ ಮಾಹಿತಿ ವರದಿಯನ್ನು ಲಗತ್ತಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪೋಲೀಸ್ ವೃತ್ತ ನಿರೀಕ್ಷಕರು, ರಾಮನಗರ ಗ್ರಾಮಾಂತರ ವೃತ್ತ, ರಾಮನಗರ ಜಿಲ್ಲೆ ಇವರು ದಿನಾಂಕ: 04–02–2010 ರ ಪತ್ರದ ಮೂಲಕ ಬಿಡದಿ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:12/2010 ರ ಪ್ರಕರಣದ ಸಂಬಂಧ ಪ್ರಸ್ತಾಪಿತ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ:ಕೆಎ–02/ಸಿ–7474 (ಟ್ಯಾಂಕರ್) ವಾಹನವನ್ನು ಹಾಗೂ ಪ್ರಕರಣದ ದಾಖಲಾತಿಗಳನ್ನು ಮುಂದಿನ ತನಿಖೆಯ ಸಂಬಂಧ ವರ್ಗಾಯಿಸಿಕೊಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ:08–02–2010 ರ ಜ್ಞಾಪನ ಪತ್ರದ ಮೂಲಕ ಪ್ರಸ್ತಾಪಿತ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ: ಕೆಎ–02/ಸಿ–7474 (ಟ್ಯಾಂಕರ್) ವಾಹನ ಮತ್ತು ಪ್ರಕರಣದ ದಾಖಲಾತಿಗಳನ್ನು ಆರಕ್ಷಕ ವೃತ್ತ ನಿರೀಕ್ಷಕರು, ರಾಮನಗರ ಗ್ರಾಮಾಂತರ ವೃತ್ತ, ರಾಮನಗರ ಜಿಲ್ಲೆ ಇವರಿಗೆ ಸೂಕ್ತ ಸ್ವೀಕೃತಿ ಪಡೆದುಕೊಂಡು ಹಸ್ತಾಂತರಿಸಲು ಫಿರ್ಯಾದುದಾರರಿಗೆ ಸೂಚಿಸಲಾಗಿತ್ತು.

ಫಿರ್ಯಾದುದಾರರು ದಿನಾಂಕ:10–03–2010 ರ ಪತ್ರದ ಮೂಲಕ ದಿನಾಂಕ:24–02–2010 ರಂದು ರಾಮ ನಗರ ಗ್ರಾಮಾಂತರ ವೃತ್ತ ಪೋಲೀಸ್ ಠಾಣೆಯ ಸಿಬ್ಬಂದಿಗಳು ಆಗಮಿಸಿ ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ: ಕೆಎ–02/ಸಿ–7474 (ಟ್ಯಾಂಕರ್) ರ ಬಗ್ಗೆ ಸ್ಥಳ ಮಹಜರ್ ಜರುಗಿಸಿ ಸದರಿ ಟ್ಯಾಂಕರ್ ಮತ್ತು ಸುಮಾರು 9,000.000 ಲೀ ಮದ್ಯಸಾರವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದು ಹಾಗೂ ಸುರಕ್ಷತೆ ದೃಷ್ಟಿಯಿಂದ ಸದರಿ ಟ್ಯಾಂಕರ್ ಮತ್ತು ಮದ್ಯಸಾರವನ್ನು ಯಥಾಸ್ಥಿತಿಯಲ್ಲಿ ತಮ್ಮ ಅಭಿರಕ್ಷೆಗೆ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ದಿನಾಂಕ:28–02–2010 ರ ಪತ್ರದಲ್ಲಿ ಆರಕ್ಷಕ ವೃತ್ತ ನಿರೀಕ್ಷಕರು, ರಾಮನಗರ ಇವರು ಸದರಿ ಟ್ಯಾಂಕರ್‌ನಲ್ಲಿದ್ದ ಸುಮಾರು 9,000 ಲೀ ಮದ್ಯಸಾರ ಮತ್ತು ವಾಹನವನ್ನು ಬಿಡದಿ ಪೋಲೀಸ್ ಠಾಣೆಯ ಸ್ವತ್ತಿನ ಪಟ್ಟಿ ಸಂಖ್ಯೆ:79/2010, ದಿನಾಂಕ:24–02–2010 ರಲ್ಲಿ ಅಳವಡಿಸಿಕೊಂಡಿದ್ದು, ಸದರಿ ಸ್ವತ್ತನ್ನು ಅಬಕಾರಿ ಇಲಾಖೆಗೆ ವರ್ಗಾಯಿಸಲು ಆದೇಶ ಕೋರಿ ರಾಮನಗರ ಸಿ.ಜೆ ಮತ್ತು ಸಿ.ಜೆ.ಎಂ ನ್ಯಾಯಾಲಯದಲ್ಲಿ ಸ್ವತ್ತಿನ ಪಟ್ಟಿಯಲ್ಲಿ ನಿವೇದಿಸಿಕೊಂಡಿದ್ದು, ದಿನಾಂಕ:25–02–2010 ರಂದು ನ್ಯಾಯಾಲಯವು ಮಂಡ್ಯ ಅಬಕಾರಿ ಇಲಾಖೆಗೆ ವರ್ಗಾಯಿಸುವಂತೆ ಆದೇಶ ನೀಡಿರುತ್ತದೆ ಎಂದು ತಿಳಿಸಿ ರುತ್ತಾರೆ.

ಹಾಗೂ ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡು ಸುರಕ್ಷಿತ ದೃಷ್ಟಿಯಿಂದ ಫಿರ್ಯಾದುದಾರರ ವಶದಲ್ಲಿ ರುವ ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ: ಕೆಎ–02/ಸಿ–7474 (ಟ್ಯಾಂಕರ್) ವಾಹನ ಹಾಗೂ ಅದರಲ್ಲಿರುವ ಸುಮಾರು 9,000.000 ಲೀ ಮದ್ಯಸಾರವನ್ನು ಸ್ವೀಕರಿಸಿಕೊಂಡು ಸ್ವೀಕೃತಿಯನ್ನು ನೀಡಬೇಕಾಗಿ ಕೋರಿ, ಪ್ರಕರಣದ ಪ್ರ.ಮಾ.ವ ಪ್ರತಿ, ಅಮಾನತ್ತು ಮಹಜರ್ ಪ್ರತಿ ಮತ್ತು ನ್ಯಾಯಾಲಯದಿಂದ ವರ್ಗಾವಣೆಗೊಳಿಸುವಂತೆ ನೀಡಿದ ಸ್ವತ್ತಿನ ಪಟ್ಟಿಯ ಪ್ರತಿ ಇವುಗಳನ್ನು ಫಿರ್ಯಾದುದಾರರಿಗೆ ಕಳುಹಿಸಿಕೊಟ್ಟಿರುತ್ತಾರೆ.

ಮುಂದುವರೆದು ದಿನಾಂಕ:05–03–2010 ರ ಪತ್ರದಲ್ಲಿ ಆರಕ್ಷಕ ವೃತ್ತ ನಿರೀಕ್ಷಕರು, ರಾಮನಗರ ಗ್ರಾಮಾಂತರ ವೃತ್ತ, ರಾಮನಗರ ಜಿಲ್ಲೆ ಇವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 9,000.000 ಲೀ ಮದ್ಯಸಾರ ಹಾಗೂ ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ: ಕೆಎ–02/ಸಿ–7474 (ಟ್ಯಾಂಕರ್) ವಾಹನವನ್ನು ಘನ ನ್ಯಾಯಾಲಯದ ಆದೇಶದನ್ವಯ ಫಿರ್ಯಾದುದಾರರಿಗೆ ವರ್ಗಾಯಿಸಿಕೊಟ್ಟಿರುವುದಾಗಿ ತಿಳಿಸಿ, ಹಾಗೂ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಲಾರಿ ಯನ್ನು ವಾರಸುದಾರರಾದ ಶ್ರೀಮತಿ ಎನ್.ಎಸ್.ಸರಸ್ವತಿ ಕೋಂ ಹೆಚ್.ಟಿ.ನಾಗರಾಜು, ನಂ.68, 7 ನೇ ಮೈನ್, 6 ನೇ ಫೇಸ್, ರಾಜಾಜಿನಗರ, ಬೆಂಗಳೂರು ಇವರಿಗೆ ಬಿಡುಗಡೆ ಮಾಡುವಂತೆ ರಾಮನಗರದ ಸಿಜೆ ಮತ್ತು ಸಿಜೆಎಂ ಘನ ನ್ಯಾಯಾಲಯವು ದಿನಾಂಕ:02–03–2010 ರಂದು ಆದೇಶ ಮಾಡಿರುತ್ತೆ ಎಂದು ತಿಳಿಸಿ, ಲಾರಿ ಬಿಡುಗಡೆ ಬಗ್ಗೆ ಘನ ನ್ಯಾಯಾಲಯವು ನೀಡಿರುವ ಆದೇಶದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಫಿರ್ಯಾದುದಾರರಿಗೆ ಕಳುಹಿಸಿರುತ್ತಾರೆ.

ರಾಮನಗರದ ಸಿಜೆ ಮತ್ತು ಸಿಜೆಎಂ ಘನ ನ್ಯಾಯಾಲಯದ ಆದೇಶದಲ್ಲಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಾಹನವನ್ನು ವಾರಸುದಾರರಾದ ಶ್ರೀಮತಿ ಎನ್.ಎಸ್.ಸರಸ್ವತಿ ಕೋಂ ಹೆಚ್.ಟಿ.ನಾಗರಾಜು ಇವರಿಗೆ ಬಿಡುಗಡೆಗೊಳಿಸಲು ಆರಕ್ಷಕ ಉಪ ನಿರೀಕ್ಷಕರು, ಬಿಡದಿ ಪೋಲೀಸ್ ಠಾಣೆ ಇವರಿಗೆ ತಿಳಿಸಿರುವುದು ಕಂಡು ಬಂದಿರುತ್ತದೆ.

1. The applicant shall execute an indemnity bond for Rs.15 lakhs with sureity for like sum.
2. He shall produce the vehicle before the court whenever he is called upon to so.
3. He shall not change the shape, colour and mode of the vehicle.
4. He shall not sell the vehicle till disposal of this case.
5. The I.O shall get inspect the vehicle within one day and shall release the vehicle, while releasing he shall take photographs of the vehicle at least from three angles, at the costs of the applicant and that he shall prepare a mahazar in this regard. He shall keep those documents in record. The applicant shall co-operate with I.O to do so.

ಈ ಪ್ರಕರಣದ ಸಂಬಂಧ ಅಬಕಾರಿ ಉಪ ಅಧೀಕ್ಷಕರು, ಮಂಡ್ಯ ಉಪವಿಭಾಗ ಇವರಿಂದ ಪ್ರತ್ಯೇಕ ವರದಿಯನ್ನು ಪಡೆಯಲಾಗಿದ್ದು, ಸದರಿ ವರದಿಯಲ್ಲಿ ಅವರು ಖುದ್ದಾಗಿ ರಾಮನಗರ ಆರಕ್ಷಕ ವೃತ್ತ ನಿರೀಕ್ಷಕರನ್ನು ಭೇಟಿ ಮಾಡಿ ಹಾಗೂ ದೂರವಾಣಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆದಿರುವುದಾಗಿ ತಿಳಿಸಿ, ದರೋಡೆಕೋರರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ಹಾಗೂ ಪ್ರಸ್ತಾಪಿತ ಟ್ಯಾಂಕರ್ ಮತ್ತು ಮದ್ಯಸಾರದ ದರೋಡೆ ಪ್ರಕರಣವು ಟ್ಯಾಂಕರ್ ಚಾಲಕ ಮತ್ತು ಮಾಲೀಕರ ಅರಿವಿಗೆ ಬರದಂತೆ ನಡೆದಿರುವುದು ಖಚಿತವಾಗಿರುತ್ತದೆ. ಅಲ್ಲದೇ ಸದರಿಯವರುಗಳು ಈ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲವೆಂಬ ಅಂಶ ಇದುವರೆಗಿನ ತನಿಖೆಯಲ್ಲಿ ಕಂಡು ಬಂದಿರುತ್ತದೆ ಹಾಗೂ ಪ್ರಕರಣದ ಅಂತಿಮ ದೋಷಾ ರೋಪಣಾ ಪಟ್ಟಿಯನ್ನು ಸಲ್ಲಿಸಲಾಗುವುದು ಎಂದು ತಿಳಿಸಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿರುವ ಟ್ಯಾಂಕರ್ ಲಾರಿಯನ್ನು ವಾರಸುದಾರರ ವಶಕ್ಕೆ ಮಾನ್ಯ ನ್ಯಾಯಾಲಯದ ಆದೇಶದನ್ವಯ ನೀಡಬಹುದಾಗಿರುತ್ತದೆಯೆಂದು ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:29–03–2010 ರಂದು ಪ್ರಕರಣದ ವಿಚಾರಣೆಯನ್ನು ದಿನಾಂಕ:17–04–2010 ಕ್ಕೆ ನಿಗದಿಪಡಿಸಿ, ಫಿರ್ಯಾದುದಾರು & ತನಿಖಾಧಿಕಾರಿಗಳು ಮತ್ತು ವಾಹನದ ಮಾಲೀಕರಿಗೆ ಸಮನ್ಸ್:ನೋಟೀಸ್ ಜಾರಿ ಪಡಿಸಲಾಗಿತ್ತು. ದಿನಾಂಕ:17–04–2010 ರಂದು ಫಿರ್ಯಾದುದಾರರು & ತನಿಖಾಧಿಕಾರಿಗಳು ಮತ್ತು ವಾಹನದ ಮಾಲೀಕರು ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಮ್ಮ ಹೇಳಿಕೆಗಳನ್ನು ನೀಡಿದ್ದು, ವಾಹನದ ಮಾಲೀಕರ ಪರವಾಗಿ ಅವರ ವಕೀಲರು ವಾದ ಮಂಡಿಸಿರುತ್ತಾರೆ. ವಾದ ಪ್ರತಿವಾದಗಳನ್ನು ಆಲಿಸಿ, ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/305/2009–10, ದಿನಾಂಕ:19ನೇ ಏಪ್ರಿಲ್, 2010

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಅಬಕಾರಿ ಉಪ ನಿರೀಕ್ಷಕರು, ಮಂಡ್ಯ ಉಪವಿಭಾಗ, ಮಂಡ್ಯ ಇವರು ಪ್ರ.ಮಾ.ವ ಸಂಖ್ಯೆ:

08/2009–10, ದಿನಾಂಕ:08–01–2010 ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಸುಮಾರು 9,000.000 ಲೀ ಮದ್ಯಸಾರ ವನ್ನು ತಾತ್ಕಾಲಿಕವಾಗಿ ಅಬಕಾರಿ ಅಧೀಕ್ಷಕರು, ಮೆ: ಮೈಷುಗರ್ ಡಿಸ್ಟಿಲರಿ ಲಿ, ಮಂಡ್ಯ ಇವರ ಸುಪರ್ದಿಯಲ್ಲಿರಿಸಲು ಹಾಗೂ ಪ್ರಕರಣದಲ್ಲಿ ಜಪ್ತುಪಡಿಸಿರುವ ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ:ಕೆಎ–02/ಸಿ–7474 (ಟ್ಯಾಂಕರ್) ವಾಹನವನ್ನು ರಾಮನಗರದ ಸಿಜೆ ಮತ್ತು ಸಿಜೆಎಂ ನ್ಯಾಯಾಲಯದ ಆದೇಶದನ್ವಯ ವಾರಸುದಾರರಿಗೆ ಬಿಡುಗಡೆಗೊಳಿಸುವ ಸಂಬಂಧ ಆರಕ್ಷಕ ಉಪ ನಿರೀಕ್ಷಕರು, ಬಿಡದಿ ಪೋಲೀಸ್ ಠಾಣೆ ಇವರಿಗೆ ಸೂಕ್ತ ಸ್ವೀಕೃತಿ ಪಡೆದು ಹಸ್ತಾಂತರಿಸಲು ಫಿರ್ಯಾದು ದಾರರಿಗೆ ಆದೇಶಿಸಲಾಗಿದೆ. ಹಾಗೂ ಮಾನ್ಯ ಸಿ.ಜೆ ಮತ್ತು ಸಿ.ಜೆ.ಎಂ ನ್ಯಾಯಾಲಯ, ರಾಮನಗರ ಇಲ್ಲಿನ ಆದೇಶದಲ್ಲಿನ ಷರತ್ತುಗಳನ್ನು ವಾಹನದ ಮಾಲೀಕರು ಪೂರೈಸಿರುವುದನ್ನು ಖಚಿತ ಪಡಿಸಿಕೊಂಡು ವಾಹನವನ್ನು ಮಾಲೀಕರ ಸುಪರ್ದಿಗೆ ನೀಡಲು ಆರಕ್ಷಕ ಉಪ ನಿರೀಕ್ಷಕರು, ಬಿಡದಿ ಪೋಲೀಸ್ ಠಾಣೆ, ಬಿಡದಿ ಇವರಿಗೆ ಸೂಚಿಸಿ, ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಈ ಆದೇಶವನ್ನು ಇಂದು ಅಂದರೆ 2010 ನೇ ಇಸವಿ ಏಪ್ರಿಲ್ ತಿಂಗಳ 19 ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.697

ಸಹಕಾರ ಸಂಘಗಳ ಸಹಾಯಕ ನಿಬಂಧಕರು, (ನಿ.441) ಹಾಗೂ ವಸೂಲಾಧಿಕಾರಿಯವರು
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,
ನಂ.132, ಕೆ.ಹೆಚ್. ರಸ್ತೆ, ಪಿ.ಬಿ.ನಂ.2724, ಬೆಂಗಳೂರು–560027
ಕ್ರಮ ಸಂಖ್ಯೆ: ಸಿ.ಇ.ಪಿ./ಎಆರ್ಇ/ಯುಬಿಎಫ್/77–09–10, ದಿನಾಂಕ:4ನೇ ಜೂನ್, 2010

ವಿಷಯ: ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಲಿ., ಎನ್.ಆರ್. ಕಾಲೋನಿ, ಬೆಂಗಳೂರು ಇದರ ಅಮಲ್ಜಾರಿ ಅರ್ಜಿ ಸಂಖ್ಯೆ: ಎಆರ್‌ಬಿ 11(45) 141/99–2000 ಮತ್ತು ವರ್ಗಾವಣೆ ಸಿ.ಇ.ಪಿ/ಎ.ಆರ್.ಇ/ ಯು.ಬಿ.ಎಫ್/77/09–10ಕ್ಕೆ ಸಂಬಂಧಪಟ್ಟಂತೆ ತೀರ್ಮಸಾಲಗಾರರ ಸ್ಥಿರಾಸ್ತಿಯನ್ನು 1960ನೇ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ನಿಯಮ 38(7) ಅನ್ವಯ ಮಾರಾಟ ಸ್ಥಿರೀಕರಣಗೊಳಿಸುವ ಬಗ್ಗೆ.

ಉಲ್ಲೇಖ: 1) ದಾವಾ ಸಂಖ್ಯೆ: ಡಿಆರ್‌ಬಿ2/ಡಿ 3139/97–98, ಆದೇಶ ದಿನಾಂಕ:01.08.1998.
2) ಅಮಲ್ಜಾರಿ ಅರ್ಜಿ ಸಂಖ್ಯೆ:ಎಆರ್‌ಬಿ 11(45) ಸಿಇಪಿ 141/99–2000, ದಿನಾಂಕ:29.08.2003.
3) ಅಮಲ್ಜಾರಿ ಅರ್ಜಿ ಸಂಖ್ಯೆ: ಎಆರ್ಇ/ಯುಬಿಎಫ್/77/09–10 (ವ)
4) ಬ್ಯಾಂಕಿನ ಮಾರಾಟಾಧಿಕಾರಿಯವರ ವರದಿ ದಿನಾಂಕ:16.04.2010.

ಪ್ರಸ್ತಾವನೆ:

ಶ್ರೀ ಯು. ಬಸವರಾಜು ಬಿನ್ ಲೇಟ್ ಉಮಾಶಂಕರಪ್ಪ, ನಂ.13, 6ನೇ ಮುಖ್ಯರಸ್ತೆ, ಶಿವನಗರ, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–10ರವರು ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಲಿ., ಎನ್.ಆರ್.ಕಾಲೋನಿ, ಬೆಂಗಳೂರು–19 ಈ ಬ್ಯಾಂಕಿನಲ್ಲಿ ಸದಸ್ಯರಾಗಿ ಪ್ರಧಾನ ಕಛೇರಿ ಶಾಖೆಯಲ್ಲಿ ವ್ಯಾಪಾರಾಭಿವೃದ್ಧಿಯ ಉದ್ದೇಶಕ್ಕಾಗಿ ದಿನಾಂಕ:22.06.1996ರಂದು ರೂ.10,00,000/– (ರೂಪಾಯಿ ಹತ್ತು ಲಕ್ಷಗಳು ಮಾತ್ರ) ಸಾಲವಾಗಿ ಪಡೆದಿರುತ್ತಾರೆ. ಈ ಸಾಲಕ್ಕೆ 2ನೇ ಪ್ರತಿವಾದಿಯಾದ ಉಮಾಶಂಕರಪ್ಪರವರ ಆಸ್ತಿ ಹೊಸ ನಂ.13, ಹಳೆದು 7/13, 6ನೇ ಮುಖ್ಯರಸ್ತೆ, ಶಿವನಗರ, ಬೆಂಗಳೂರು–10 ಈ ಸ್ವತ್ತನ್ನು ರಾಜಾಜಿನಗರ ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕ:27.06.1996ರಂದು ಡೆಪಾಸಿಟ್ ಆಫ್ ಮೆಮೋರೆಂಡಮ್ ಆಫ್ ಟೈಟಲ್ ಡೀಡ್ ಮಾಡಿಕೊಟ್ಟಿರುತ್ತಾರೆ. ಬ್ಯಾಂಕಿನ ಸಾಲ ಮಂಜೂರಾತಿಯ ಷರತ್ತು ಮತ್ತು ನಿಯಮಗಳ ಪ್ರಕಾರ ಸಾಲದ ಬಾಕಿಯನ್ನು ಮರುಪಾವತಿಸಲು ವಿಫಲರಾದ ಪ್ರಯುಕ್ತ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಸಾಲದ ಬಾಕಿ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರನ್ವಯ ಸಹಕಾರ ಸಂಘಗಳ ಉಪ ನಿಬಂಧಕರು–2, ಬೆಂಗಳೂರು ನಗರ ಜಿಲ್ಲೆ ಇವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: ಡಿಆರ್‌ಬಿ 2/ಡಿ 3139/97–98ರಂತೆ ದಾವಾ ಹೂಡಿ ಡಿಕ್ರಿ ಆದೇಶ ಪಡೆದಿದ್ದರೂ ಸಾಲದ ಬಾಕಿ ವಸೂಲಾತಿಯಾಗಿರುವುದಿಲ್ಲ.

ಸಹಕಾರ ಸಂಘಗಳ ಉಪ ನಿಬಂಧಕರು–2, ಬೆಂಗಳೂರು ನಗರ ಜಿಲ್ಲೆ ಇವರ ನ್ಯಾಯಾಲಯದಿಂದ ಪಡೆದ ಡಿಕ್ರಿ ಆದೇಶಾನುಸಾರ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಸಹಕಾರ ಸಂಘಗಳ

ನಿಯಮಗಳು 1960 ನಿಯಮ 34(1)ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು 2ನೇ ವಲಯ, ಬೆಂಗಳೂರು ಇವರ ಕಛೇರಿಯಲ್ಲಿ ಅಮಲ್ಜಾರಿ ಅರ್ಜಿ ಸಂಖ್ಯೆ: ಎಆರ್‌ಬಿ 11(45) ಸಿಇಪಿ 141/1999–2000ರಂತೆ ದಾಖಲು ಮಾಡಿರುತ್ತಾರೆ. ಸದರಿ ಅಮಲ್ಜಾರಿ ಅರ್ಜಿಯನ್ನು ವಿಲೇಗೊಳಿಸಲು ಹಿಂದಿನ ಬ್ಯಾಂಕಿನ ಮಾರಾಟಾಧಿಕಾರಿಗಳು ನಿಯಮಾನುಸಾರ ದಿನಾಂಕ:02.03.2000, 06.07.2000, 06.09.2000 ಮತ್ತು 18.01.2001ರಂದು ಕ್ರಮ ತೆಗೆದುಕೊಂಡರೂ ಸಾಲ ಮರುಪಾವತಿಯಾಗಿರುವುದಿಲ್ಲ. ನಂತರ 2ನೇ ಪ್ರತಿವಾದಿಯಾದ ಶ್ರೀ ಉಮಾಶಂಕರಪ್ಪರವರು ದಿನಾಂಕ:29.07.2001ರಂದು ಪೌತಿಯಾದ ಕಾರಣ (1) ಯು. ಬಸವರಾಜು (ಮಗ), (2) ರುದ್ರಮ್ಮ (ಪತ್ನಿ), (3) ಯು. ಜಗದೀಶ (ಮಗ), (4) ಯು. ಉಮಾವತಿ (ಮಗಳು), (5) ಸುನಂದ (ಮಗಳು) ಇವರುಗಳನ್ನು 2ನೇ ಪ್ರತಿವಾದಿಯ ವಾರಸುದಾರರುಗಳನ್ನಾಗಿ ಸೇರಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 2ನೇ ವಲಯ, ಬೆಂಗಳೂರು ಇವರ ಕಛೇರಿಗೆ ಅರ್ಜಿ ಸಲ್ಲಿಸಿ ಉಲ್ಲೇಖ (2)ರಂತೆ 2ನೇ ಪ್ರತಿವಾದಿಯ ವಾರಸುದಾರರುಗಳಿಂದ ಬ್ಯಾಂಕಿನ ಸಾಲದ ಬಾಕಿ ವಸೂಲಾತಿ ಮಾಡಿಕೊಳ್ಳಲು ಜವಾಬ್ದಾರರನ್ನಾಗಿ ಪರಿಗಣಿಸಿ ಆದೇಶ ಪಡೆಯಲಾಗಿದೆ.

ನಂತರ ಬ್ಯಾಂಕಿನ ಮಾರಾಟಾಧಿಕಾರಿಯವರು ಸದರಿ ಅಮಲ್ಜಾರಿಯನ್ನು ವಿಲೇಗೊಳಿಸಲು ನಿಯಮಾನುಸಾರ ಕ್ರಮ ತೆಗೆದುಕೊಂಡು ದಿನಾಂಕ:31.03.2004, 17.03.2005, 17.05.2008, 27.06.2008, 09.09.2009 ಮತ್ತು 31.12.2009ರಂದು ಸಾಲಗಾರರು ಬ್ಯಾಂಕಿಗೆ ಈಡು ಮಾಡಿದ್ದ ಸ್ಥಿರಾಸ್ತಿಯನ್ನು ಬಹಿರಂಗ ಹರಾಜಿಗೆ ದಿನಾಂಕ ನಿಗದಿಪಡಿಸಿದ್ದು, ಹರಾಜಿನಲ್ಲಿ ಹೆಚ್ಚಿನ ಜನರು ಭಾಗವಹಿಸದೇ ಹಾಗೂ ಉತ್ತಮ ಬೆಲೆ ಬಾರದ ಕಾರಣದಿಂದಾಗಿ ಹರಾಜಿನಲ್ಲಿ ಆಸ್ತಿಯನ್ನು ಮಾರಾಟ ಮಾಡಲು ಸಾಧ್ಯವಾಗಿರಲಿಲ್ಲ.

ಮಾರಾಟಾಧಿಕಾರಿಯವರು ಅಂತಿಮವಾಗಿ ದಿನಾಂಕ:20.01.2010ರಂದು ಹೊರಡಿಸಲಾದ ನಮೂನೆ 8 ಮತ್ತು 9ರ ಸ್ಥಿರಾಸ್ತಿ ಮಾರಾಟದ ನೋಟೀಸನ್ನು ಪ್ರತಿವಾದಿಗಳಿಗೆ ಜಾರಿ ಮಾಡಿ ದಿನಾಂಕ:25.02.2010ರಂದು ಸಾರ್ವಜನಿಕ ಹರಾಜಿಗೆ ದಿನಾಂಕ ನಿಗದಿಪಡಿಸಿ ಈ ಬಗ್ಗೆ ಈ ಸಂಜೆ ದಿನಪತ್ರಿಕೆಯಲ್ಲಿ ದಿನಾಂಕ:19.02.2010ರಂದು ಸಾರ್ವಜನಿಕ ಪ್ರಕಟಣೆಯನ್ನು ನೀಡಿ ಸ್ಥಿರಸ್ವತ್ತಿನ ಸುತ್ತಮುತ್ತಲ ಪ್ರದೇಶದಲ್ಲಿ ಕರಪತ್ರಗಳನ್ನು ಹಂಚಿಕೆ ಮಾಡಿ ಸಾರ್ವಜನಿಕರ ಗಮನಕ್ಕೆ ಹಾಗೂ ವ್ಯಾಪಕ ಪ್ರಚಾರದ ಉದ್ದೇಶದಿಂದ ದಿನಾಂಕ:22.02.2010 ರಿಂದ 24.02.2010ರವರೆಗೆ ಮೂರು ದಿನಗಳು ಡಂಗೂರ ಮಾಡಿಸಿರುತ್ತಾರೆ.

ದಿನಾಂಕ:25.02.2010ರಂದು ನಡೆದ ಬಹಿರಂಗ ಹರಾಜಿನಲ್ಲಿ ಒಟ್ಟು 4 ಜನ ಬಿಡ್ಡುದಾರರು ಭಾಗವಹಿಸಿ ತಲಾ ರೂ.5,000/– (ರೂ. ಐದು ಸಾವಿರ ಮಾತ್ರ)ಗಳ ಇ.ಎಂ.ಡಿ. ಮುಂಗಡ ಹಣ ಪಾವತಿಸಿರುತ್ತಾರೆ. ಈ ನಾಲ್ಕು ಜನ ಬಿಡ್‌ದಾರರ ಪೈಕಿ ಮೂರನೇ ಬಿಡ್‌ದಾರರಾದ ಎಂ.ಆರ್. ಪ್ರದೀಪ್‌ಕುಮಾರ್ ಬಿನ್ ರಾಮಯ್ಯರವರು, ಶ್ರೀಮತಿ ಎಂ. ವಾಸಂತಿ ಕೋಂ ಎಂ.ಆರ್. ಪ್ರದೀಪ್‌ಕುಮಾರ್ ಮತ್ತು ಶ್ರೀ ಎಂ. ರಾಜೀವ್ ಬಿನ್ ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ರವರು ಜಂಟಿಯಾಗಿ ರೂ.45,00,000/–(ರೂ.ನಲವತ್ತೈದು ಲಕ್ಷ) ಗಳಿಗೆ ಬಿಡ್ ಮಾಡಿದ್ದು ಅತೀ ಹೆಚ್ಚಿನ ಮೊತ್ತದ ಬಿಡ್‌ದಾರರಾಗಿದ್ದು, ಮಾರಾಟಾಧಿಕಾರಿಯವರು ಬಿಡ್‌ನ್ನು ಇವರ ಹೆಸರಿಗೆ ನಿಲ್ಲಿಸಿರುತ್ತಾರೆ.

ಬ್ಯಾಂಕಿನ ಮಾರಾಟಾಧಿಕಾರಿಯವರು ಈ ಕಛೇರಿಗೆ ಉಲ್ಲೇಖ (4)ರಂತೆ ಸಲ್ಲಿಸಿರುವ ಪ್ರಸ್ತಾವನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಡಿಕ್ರಿ ಆದೇಶ ಮತ್ತು ಅಮಲ್ಜಾರಿ ಅರ್ಜಿಯ ಪ್ರಕಾರ ಅಸಲು ರೂ.9,95,850/– ಬಡ್ಡಿ ಮತ್ತು ಇತರೇ ವೆಚ್ಚಗಳು ರೂ.31,54,650/– ಸೇರಿ ಒಟ್ಟು ರೂ.41,50,500/–ಗಳು ಬ್ಯಾಂಕಿಗೆ ಬರಬೇಕಾಗಿರುತ್ತದೆ. ಆಸ್ತಿ ಮೌಲ್ಯಮಾಪಕರು (ರಿಜಿಸ್ಟರ್ಡ್ ವ್ಯಾಲ್ಯೂಯರ್) ಹರಾಜಿನಲ್ಲಿ ಮಾರಾಟ ಮಾಡಲಾದ ಆಸ್ತಿಯ ಬೆಲೆಯನ್ನು ರೂ.44,18,706/–ಗಳಿಗೆ ನಿಗದಿಪಡಿಸಿರುತ್ತಾರೆ. ಆಸ್ತಿ ಮೌಲ್ಯಮಾಪಕರು ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆ ಬಹಿರಂಗ ಹರಾಜಿನಲ್ಲಿ ಬಂದಿರುತ್ತದೆ. ಆಸ್ತಿ ಖರೀದಿದಾರರಾದ ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ಬಿನ್ ರಾಮಯ್ಯ, ಶ್ರೀಮತಿ ಎಂ. ವಾಸಂತಿ ಕೋಂ ಎಂ.ಆರ್. ಪ್ರದೀಪ್‌ಕುಮಾರ್ ಮತ್ತು ಶ್ರೀ ಎಂ. ರಾಜೀವ್ ಬಿನ್ ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ಹರಾಜಿನ ಸ್ಥಳದಲ್ಲಿಯೇ ಬಿಡ್ ಮೊತ್ತದ ಶೇ.15% ರಷ್ಟು ರೂ.6,75,000/– (ಆರು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಮತ್ತು ಉಳಿದ ಹಣ ರೂ.38,25,000/– (ಮೂವತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಹಾಗೂ ಆಸ್ತಿ ನೋಂದಣಿಗೆ ಮುದ್ರಾಂಕ ಶುಲ್ಕವನ್ನು ದಿನಾಂಕ:09.04.2010ರಂದು ಪಾವತಿಸಿರುತ್ತಾರೆಂದು ಬಹಿರಂಗ ಹರಾಜಿನಲ್ಲಿ ಖರೀದಿಸಿದ ಸ್ಥಿರಾಸ್ತಿಯನ್ನು ಆಸ್ತಿ ಖರೀದಿದಾರರ ಹೆಸರಿಗೆ ನೋಂದಣಿ ಮಾಡಿಕೊಡಬೇಕೆಂದು ಮಾರಾಟಾಧಿಕಾರಿಯವರು ಅವರ ವರದಿಯಲ್ಲಿ ಕೋರಿರುತ್ತಾರೆ.

ಬ್ಯಾಂಕಿನ ಮಾರಾಟಾಧಿಕಾರಿಯವರು ದಿನಾಂಕ:25.02.2010ರಂದು ನಡೆಸಿದ ಸಾರ್ವಜನಿಕ ಹರಾಜನ್ನು ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ಹರಾಜು ಕ್ರಮವನ್ನು ನಡೆಸಿ ಶ್ರೀ ಯು. ಬಸವರಾಜು ಬಿನ್ ಲೇಟ್ ಉಮಾಶಂಕರಪ್ಪರವರ ಸ್ಥಿರಾಸ್ತಿಯನ್ನು ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ಬಿನ್ ರಾಮಯ್ಯ, ಶ್ರೀಮತಿ ಎಂ.ವಾಸಂತಿ

ಕೋಂ ಪ್ರದೀಪ್‌ಕುಮಾರ್ ಮತ್ತು ಶ್ರೀ ಎಂ. ರಾಜೀವ್ ಬಿನ್ ಪ್ರದೀಪ್‌ಕುಮಾರ್‌ರವರಿಗೆ ಮಾರಾಟ ಮಾಡಿರುವ ಸ್ಥಿರಾಸ್ತಿ ಹರಾಜನ್ನು ಸ್ಥಿರೀಕರಿಸಬೇಕೆಂದು ಉಲ್ಲೇಖ (4)ರಂತೆ ಈ ಕಛೇರಿಗೆ ಸವಿಸ್ತಾರವಾದ ವರದಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ:25.02.2010ರಂದು ಬ್ಯಾಂಕಿನ ಮಾರಾಟಾಧಿಕಾರಿಯವರು ನಡೆಸಿದ ಸ್ಥಿರಾಸ್ತಿ ಹರಾಜಿನ ನಡವಳಿಕೆಯನ್ನು ಪರಿಶೀಲಿಸಿದಾಗ ಸದರಿ ಸ್ಥಿರಾಸ್ತಿ ಹರಾಜಿನಲ್ಲಿ ಒಟ್ಟು 4 ಜನ ಬಿಡ್ಡುದಾರರು ಭಾಗವಹಿಸಿದ್ದು, ಈ ಪೈಕಿ ಅತ್ಯಧಿಕ ಬಿಡ್ಡುದಾರರಾದ ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ಬಿನ್ ರಾಮಯ್ಯ, ಶ್ರೀಮತಿ ಎಂ.ವಾಸಂತಿ ಕೋಂ ಎಂ.ಆರ್. ಪ್ರದೀಪ್‌ಕುಮಾರ್ ಮತ್ತು ಎಂ. ರಾಜೀವ್ ಬಿನ್ ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ಇವರಿಗೆ ರೂ.45,00,000/– (ರೂ. ನಲವತ್ತೈದು ಲಕ್ಷ ಮಾತ್ರ)ಗಳಿಗೆ ಮಾರಾಟ ಮಾಡಿರುವುದು ದಾಖಲಾತಿಗಳಿಂದ ತಿಳಿದು ಬಂದಿರುತ್ತದೆ. ಆಸ್ತಿ ಖರೀದಿದಾರರು ಹರಾಜಿನ ಪೂರ್ಣ ಹಣ ಮತ್ತು ನೋಂದಣಿಗಾಗಿ ತಗಲುವ ಮುದ್ರಾಂಕ ಶುಲ್ಕವನ್ನು ನಿಗದಿತ ಅವಧಿಯೊಳಗಾಗಿ ಡಿಕ್ರಿದಾರ ಬ್ಯಾಂಕಿಗೆ ಪಾವತಿಸಿದ್ದು, ಬಹಿರಂಗ ಹರಾಜು ನಡೆದ 30 ದಿನಗಳೊಳಗೆ ಬಾಕಿದಾರರು ವಾದಿ ಬ್ಯಾಂಕಿಗೆ ಪಾವತಿಸಬೇಕಾಗಿದ್ದ ಸಾಲದ ಹಣವನ್ನು ಮರುಪಾವತಿ ಮಾಡದೆ ಇರುವುದರಿಂದ ಹಾಗೂ ದಿನಾಂಕ:25.02.2010ರಂದು ನಡೆಸಲಾದ ಬಹಿರಂಗ ಹರಾಜಿನ ನಡವಳಿಕೆ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇರುವುದರಿಂದ ಮಾರಾಟಾಧಿಕಾರಿಯವರು ದಿನಾಂಕ:25.02.2010ರಂದು ನಡೆಸಲಾದ ಬಹಿರಂಗ ಹರಾಜಿನ ನಡವಳಿಕೆಯನ್ನು ಖಾಯಂಗೊಳಿಸಿ ಸ್ಥಿರೀಕರಿಸುವಂತೆ ಮಾರಾಟಾಧಿಕಾರಿಯವರು ಸಲ್ಲಿಸಿರುವ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಮಾರಾಟಾಧಿಕಾರಿಯವರು ಕೈಗೊಂಡ ಕ್ರಮಗಳು ಕಾನೂನುಬದ್ಧವಾಗಿದೆ ಎಂದು ಕಂಡು ಬಂದಿರುವುದರಿಂದ ಈ ಕೆಳಗಿನ ಸ್ಥಿರೀಕರಣ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಎಸ್.ಎಸ್. ಕಟಗೇರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 38(7)ರನ್ವಯ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಅಮಲ್ಜಾರಿ ಅರ್ಜಿ ಸಂಖ್ಯೆ:ಎಆರ್‌ಬಿ 11/ (45) ಸಿಇಪಿ 141/1999–2000 ವರ್ಗಾವಣೆ ಸಂಖ್ಯೆ: ಎಆರ್‌ಇ/ಯುಬಿಎಫ್/77/09–10 ರಲ್ಲಿ ಶ್ರೀ ಯು. ಬಸವರಾಜು ಬಿನ್ ಲೇಟ್ ಉಮಾಶಂಕರಪ್ಪ ಇವರಿಗೆ ಸೇರಿದ ಸ್ಥಿರಾಸ್ತಿಯನ್ನು ದಿನಾಂಕ:25.02.2010ರಂದು ಡಿಕ್ರಿದಾರ ಬ್ಯಾಂಕಿನ ಮಾರಾಟಾಧಿಕಾರಿಯವರು ಮಾಡಿದ ಬಹಿರಂಗ ಹರಾಜಿನಲ್ಲಿ ಶ್ರೀ ಎಂ.ಆರ್. ಪ್ರದೀಪ್‌ಕುಮಾರ್ ಬಿನ್ ರಾಮಯ್ಯ, ಶ್ರೀಮತಿ ಎಂ.ವಾಸಂತಿ ಕೋಂ ಎಂ.ಆರ್. ಪ್ರದೀಪ್‌ಕುಮಾರ್ ಮತ್ತು ಶ್ರೀ ಎಂ.ರಾಜೀವ್ ಬಿನ್ ಎಂ.ಆರ್. ಪ್ರದೀಪ್‌ಕುಮಾರ್, ನಂ.881, 4ನೇ ಮುಖ್ಯರಸ್ತೆ, 3ನೇ ಕ್ರಾಸ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು–40 ಇವರು ಅತೀ ಹೆಚ್ಚಿನ ಬಿಡ್‌ದಾರರಾಗಿದ್ದು, ಇವರಿಗೆ ರೂ.45,00,000/– (ರೂ. ನಲವತ್ತೈದು ಲಕ್ಷ ಮಾತ್ರ) ಗಳಿಗೆ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಿರುವುದನ್ನು ಖಾಯಂಗೊಳಿಸಿ ಸ್ಥಿರೀಕರಿಸಿರುತ್ತೇನೆ.

ಸ್ಥಿರಾಸ್ತಿಯ ವಿವರ

ಬೆಂಗಳೂರು ಮಹಾನಗರ ಪಾಲಿಕೆ, ರಾಜಾಜಿನಗರ ವಲಯಕ್ಕೆ ಸೇರಿದ ಆಸ್ತಿ ನಂ. ಹೊಸದು 13, ಹಳೆ ನಂ.7/13, 6ನೇ ಮುಖ್ಯ ರಸ್ತೆ, ಶಿವನಗರ, ವೆಸ್ಟ್‌ಆಫ್‌ಕಾರ್ಡ್ ರಸ್ತೆ, ಬೆಂಗಳೂರು–10, ಪೂರ್ವ–ಪಶ್ಚಿಮ 30 ಅಡಿಗಳು, ಉತ್ತರ–ದಕ್ಷಿಣ 40 ಅಡಿಗಳು ಅಳತೆಯುಳ್ಳ ನಿವೇಶನದಲ್ಲಿ 1987ನೇ ಸಾಲಿನಲ್ಲಿ ಕಟ್ಟಲಾದ ನೆಲಮಹಡಿ, ಮೊದಲನೇ ಮಹಡಿ ಮತ್ತು 2ನೇ ಮಹಡಿ ತುಂಬ ಹಳೆಯದಾದ ಮನೆ ಇದಕ್ಕೆ ಚೆಕ್ಕುಬಂದಿ:

ಚೆಕ್ಕುಬಂದಿ

ಪೂರ್ವಕ್ಕೆ – ಸೈಟ್ ನಂ.12
ಪಶ್ಚಿಮಕ್ಕೆ – ಸೈಟ್ ನಂ.10
ಉತ್ತರಕ್ಕೆ – ಸೈಟ್ ನಂ.14
ದಕ್ಷಿಣಕ್ಕೆ – ರಸ್ತೆ

ಮಾರಾಟದ ಮೊಬಲಗು ರೂ.45,00,000/–ಗಳು

ಮಾರಾಟ ಮಾಡಿದ ದಿನಾಂಕ:25.02.2010

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:04.06.2010ರಂದು ನೀಡಲಾಗಿದೆ.

ಎಸ್.ಎಸ್. ಕಟಗೇರಿ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
(ನಿ.441) ಹಾಗೂ ವಸೂಲಾಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

ಪಿಡಿ–78

PROCEEDINGS OF THE ASSISTANT COMMISSIONER OF COMMERCIAL TAXES, LOCAL VAT OFFICE-075, BANGALORE

PRESENT: C.R. Manjunath

Assistant Commissioner of Commercial Taxes (LVO-075)

Sub: Loss of 'C' Form in case of M/s High Temp Furnaces Ltd., Bangalore.

Read: Letter Dated:27.04.2010.

Preamble:

M/s High Temp Furnaces Limited, No.1-C, II Phase, Peenya Industrial Area, Bangalore-58 is a registered dealer borne on the files of this office bearing TIN-29550343041. The company in its letter cited at read above has intimated that 2 leaves of 'C' Forms bearing Nos.3633613 & 3633614 issued by the department, is lost in transit.

The company has produced the proof for having filed the complaint to police authorities for loss of above 'C' Form and executed Indemnity Bond in favour of the Government as laid down Rule 12(2) and 12(9) of CST Act, 1956.

Since the said 'C' Forms are stated to be lost in transit, the Form so lost is treated as Invalid. Hence, this order-

Order No.ACCT/LVO-075/2010-11, Dated:18th May, 2010

In view of the circumstances explained above the said 'C' Forms treated as invalid with immediate effect.

Assistant Commissioner of Commercial Taxes (LVO-075), Bangalore.

OFFICE OF THE ACCT, LVO-075, BANGALORE

Notified Authority Under the Rule 6(i) of the CST (Karnataka) Rules 1957

NOTIFICATION

No.ACCT/LVO-075/10-11, Dated:18th May, 2010

By virtue of the provisions of Rule 12(2) of the CST (Registration & Turnover) Rules 1957 and Rule 6(e) & 6(i) of the CST (Karnataka) Rules 1957, it is hereby notified for general information that the declaration in Form-C desired below is declared to be obsolete and Invalid.

Sl. No.	Number (including code No.) of declaration Forms lost destroyed or stolen	Name & address of the dealer to whom declaration Forms is/are issued by the department with date of C form issue	Registration certificate No. of the dealer under CST Act 1956	The address of the dealer to whom the declaration is/are sent	Date of issue of Form/s by the dealer	Whether Lost/ Stolen destroyed	Remarks
1.	C-Form Nos. 1) 3633613 2) 3616303	M/s. Hightemp Furnaces Limited No.1-C, II Phase Peenya Indl. Area, Bangalore-58	29550343041	M/s Champion Coolers, Coimbatore	29.08.07	Lost	1) 175442/- 2) 185125/-

Assistant Commissioner of Commercial Taxes (LVO-075), Bangalore.

PR-866

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂಖ್ಯೆ:ಆಸಾನಿ/63(ಭಾಗ)/ಆಡಳಿತ–2/2003, ಬೆಂಗಳೂರು, ದಿನಾಂಕ:30ನೇ ಏಪ್ರಿಲ್, 2010

ವಿಷಯ: ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಶಿವಮೊಗ್ಗ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದನ್ನು ಕಾಯ್ದಿರಿಸಿ, ಅವರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸುವುದರ ಕುರಿತು.

ಉಲ್ಲೇಖ:1) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಶಿವಮೊಗ್ಗ ಇವರ ಪತ್ರದ ಸಂಖ್ಯೆ:ಜಿಸಾಂಅ/ಶಿ/ ಆಡಳಿತ/ ಸಿಎಸ್‌ಕೆ/1714/2009–10, ದಿನಾಂಕ 20.10.2009 ಮತ್ತು ಅದೇ ಪತ್ರದೊಂದಿಗೆ ಲಗತ್ತಿಸಲಾದ ಕರಡು ಆರೋಪ ಪಟ್ಟಿ.

2) ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಶಿವಮೊಗ್ಗ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ:11ರ ಅನ್ವಯ ಹೊರಿಸಲಾದ ಕಾರಣ ಕೇಳುವ ಜ್ಞಾಪನ.

3) ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು ಇವರು ದಿನಾಂಕ 2.2.2010ರಂದು ಸಲ್ಲಿಸಿದ ವಿವರಣೆ.

ಪ್ರಸ್ತಾವನೆ:

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರು ಅವರ ಕಚೇರಿಯ ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು ಇವರ ನಿರಂತರವಾದ ಈ ಕೆಳಗೆ ತಿಳಿಸಲಾದ ಅನಧಿಕೃತ ಗೈರು ಹಾಜರಾತಿ ಹಾಗೂ ದುರ್ನಡತೆ ಕುರಿತು ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು ಇವರ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸುವುದರ ಪ್ರಾರಂಭಿಕ ಹಂತದಲ್ಲಿ ಅವರಿಗೆ ಉಲ್ಲೇಖ(2)ರಲ್ಲಿನ ಕಾರಣ ಕೇಳುವ ಜ್ಞಾಪನ ಹೊರಡಿಸಿ, ಅವರ ಈ ಕೆಳಕಂಡ ವಿವರಣೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

1. ದಿನಾಂಕ:1.4.2008 ರಿಂದ ದಿನಾಂಕ:1.6.2008	62 ದಿನಗಳು
2. ದಿನಾಂಕ:3.11.2008 ರಿಂದ 16.2.2009.	105 ದಿನಗಳು
3. ದಿನಾಂಕ:2.6.2009 ರಿಂದ 23.9.2009.	114 ದಿನಗಳು
ಒಟ್ಟು	**281 ದಿನಗಳು**

ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು ಇವರ ಉಲ್ಲೇಖ(3)ರಲ್ಲಿ ತಿಳಿಸಲಾದ ಲಿಖಿತ ವಿವರಣೆಯಲ್ಲಿ ಮೇಲಿನ ಅವರ ಅನಧಿಕೃತ ಗೈರು ಹಾಜರಾತಿಯನ್ನು ಸಮರ್ಥಿಸಿಕೊಳ್ಳುತ್ತಾ, ಮೇಲಿನ ಅವಧಿಯನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಶಿವಮೊಗ್ಗ ಇವರು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 106–ಎ ರ ಅನ್ವಯ ಅನಧಿಕೃತ ಗೈರು ಹಾಜರಾತಿ ಎಂದು ಪರಿಗಣಿಸಿ ಆದೇಶ ಹೊರಡಿಸಿರುತ್ತಾರೆ. ಆದ್ದರಿಂದ, ಈ ವಿಷಯದಲ್ಲಿ ಇಲಾಖಾ ವಿಚಾರಣೆ ಏರ್ಪಡಿಸುವುದು ನೈಸರ್ಗಿಕ ನ್ಯಾಯ ಮತ್ತು ತತ್ವಗಳಿಗೆ ವಿರುದ್ಧವಾಗಿದೆ ಎಂದು ವಾದಿಸಿರುತ್ತಾರೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ 106–ಎರಲ್ಲಿ "ರಜೆಯನ್ನು ಪಡೆಯದೆ ಕರ್ತವ್ಯಕ್ಕೆ ಗೈರು ಹಾಜರಾಗುವ ಸರ್ಕಾರಿ ನೌಕರನು ಗೈರು ಹಾಜರಿಯ ದಿನಗಳಿಗೆ ವೇತನ ಪಡೆಯಲು ಹಕ್ಕುಳ್ಳವನಾಗಿರುವುದಿಲ್ಲ ಮತ್ತು ಅಂತಹ ಗೈರು ಹಾಜರಿ ದಿನಗಳಿಗೆ ಸಕ್ಷಮ ಅಧಿಕಾರಿಯು ರಜೆಯನ್ನು ಮಂಜೂರು ಮಾಡದ ಹೊರತು, ತನ್ನ ದುರ್ನಡತೆಗಾಗಿ ಶಿಸ್ತಿನ ಕ್ರಮಕ್ಕೆ ಒಳಗಾಗುತ್ತಾನೆ" ಎಂದು ಸ್ಪಷ್ಟಪಡಿಸಲಾಗಿದೆ.

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು ಅದೇ ಅವರ ವಿವರಣೆಯ ದಿನಾಂಕ 2.2.2010ರಲ್ಲಿ "ಅವರ ಅನಧಿಕೃತ ಗೈರು ಹಾಜರಾತಿಯಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟವಾಗಿರುವುದಿಲ್ಲ" ಎಂಬ ಅವರ ವಾದವನ್ನು ಪರಿಶೀಲಿಸಲಾಗಿ ಅವರ ನಿರಂತರವಾದ ಅನಧಿಕೃತ ಗೈರು ಹಾಜರಾತಿಯಿಂದ, ಅವರಿಗೆ ಜ್ಞಾಪನ ನೀಡುವುದಕ್ಕಾಗಿ, ಹಾಗೂ ಆ ಜ್ಞಾಪನಗಳನ್ನು ಅವರು ನೀಡುತ್ತಿರುವ ಬೇರೆ ಬೇರೆ ವಿಳಾಸಗಳಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸುವಲ್ಲಿ, ಸರ್ಕಾರಕ್ಕೆ ಖಂಡಿತವಾಗಿಯೂ ಆರ್ಥಿಕ ನಷ್ಟವುಂಟಾಗಿರುತ್ತದೆ ಹಾಗೂ ನಿರಂತರವಾಗಿ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿ ಹೊಂದಿರುವ ಅವರ ಕಡತವನ್ನು ನಿರ್ವಹಿಸಲು ಹಾಗೂ ಮೇಲಾಧಿಕಾರಿಗಳು ಅವುಗಳನ್ನು ನಿಯಮಾನುಸಾರ ಪರಿಶೀಲಿಸಲು ಅನಾವಶ್ಯಕವಾಗಿ ಸಿಬ್ಬಂದಿಗಳ/ ಅಧಿಕಾರಿಗಳ ಸಮಯವು ವ್ಯರ್ಥವಾಗುತ್ತಿರುವುದೂ ಕೂಡ ಸರ್ಕಾರಕ್ಕೆ ಆರ್ಥಿಕ ನಷ್ಟವಾದಂತೆ.

ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು ಇವರ 30 ವರ್ಷಗಳ ಸೇವೆಯ ಉದ್ದಕ್ಕೂ ಅವರ ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ ಎಲ್ಲಾ ಕಡತಗಳು ಅವರ "ಅನಧಿಕೃತ ಗೈರು ಹಾಜರಿ" ಕುರಿತಾಗೇ ಇರುತ್ತದೆ. ಈ

ಬೆರಳಚ್ಚುಗಾರರು, ಅವರಿಗೆ ವಹಿಸಲಾದ ಸರ್ಕಾರದ ಕರ್ತವ್ಯಗಳನ್ನು ನಿರ್ವಹಿಸುವುದರ ಬದಲಾಗಿ ರಜೆ ಬಳಸಿಕೊಳ್ಳುವುದು ಅವರ ಹಕ್ಕೆನ್ನುವಂತೆಯೋ ವರ್ತಿಸುತ್ತಿರುವುದು, ಹಾಗೂ ಸರ್ಕಾರದ ಕಚೇರಿ ಎಂದರೆ "ಯಾವಾಗ ಬೇಕಾದರೂ ಬರಬಹುದು, ಹಾಗೂ ಅವರಿಗೆ ತೋಚಿದಾಗ ಕಚೇರಿಯಿಂದ ಹೊರಗೆ ಹೋಗಬಹುದು" ಎಂಬ ಅವರ ವಾದವನ್ನು ಯಾವುದೇ ಕಾರಣಕ್ಕೂ ಸರ್ಕಾರವು ಸಹಿಸಲಾಗುವುದಿಲ್ಲವೆಂದು ಅವರಿಗೆ ಸ್ಪಷ್ಟಪಡಿಸಲಾಗಿದೆ.

ಅವರ 30 ವರ್ಷಕ್ಕಿಂತ ಹೆಚ್ಚಿನ ಸೇವಾ ಅವಧಿಯಲ್ಲಿ ಒಂದಿಲ್ಲೊಂದು ಕಾರಣದಿಂದ ನಿರಂತರವಾಗಿ ಅನಧಿಕೃತ ಗೈರು ಹಾಜರಾಗುವ ನಂತರ ವೈದ್ಯಕೀಯ ಕಾರಣ ಮತ್ತು ಇನ್ನಿತರ ನಂಬಲರ್ಹವಾದ ಕಾರಣಗಳನ್ನು ನೀಡಿ ಅಂತಹ ರಜೆಯನ್ನು ಸಕ್ರಮಗೊಳ್ಳುವುದಕ್ಕೆ ನಿರಂತರವಾಗಿ ಪ್ರಯತ್ನಿಸುವ ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರಿಗೆ ಗೌರವಾನ್ವಿತ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:3351/94ಕ್ಕೆ ಸಂಬಂಧಿಸಿದಂತೆ ನೀಡುವ ಆದೇಶದಲ್ಲಿ "the services under the State Government is not open house for anybody to walk in and get out as he pleases" ಎಂದು ಸರ್ಕಾರದ ನೌಕರರನ್ನು ಉದ್ದೇಶಿಸಿ ಆದೇಶಿಸಿದ್ದು, ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರಿಗೆ ಸಂಪೂರ್ಣವಾಗಿ ಅನ್ವಯಿಸತಕ್ಕದ್ದಾಗಿದೆ ಎಂದು ಅವರಿಗೆ ಸ್ಪಷ್ಟಪಡಿಸಲಾಗಿದೆ.

ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರ ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ ಸರ್ಕಾರದ ಸೇವೆಯ ಉದ್ದಕ್ಕೂ ನಿರಂತರವಾಗಿ ಅನಧಿಕೃತ ಗೈರು ಹಾಜರಾಗುವ ಐತಿಹಾಸಿಕ ದಾಖಲೆ ಸ್ಥಾಪಿಸಿರುವ ಹಾಗೂ ಪ್ರಸ್ತುತ ಪ್ರಕರಣಕ್ಕೆ ಸೀಮಿತವಾಗಿ ಮೇಲೆ ತಿಳಿಸಲಾದ ಅವಧಿಗೆ ಸಂಬಂಧಿಸಿದಂತೆ ಸರ್ಕಾರದ ಸೇವೆಗೆ ಅನಧಿಕೃತ ಗೈರು ಹಾಜರಾಗಿ ಸರ್ಕಾರದ ಸೇವೆಯಲ್ಲಿ ಕರ್ತವ್ಯಲೋಪ ಮತ್ತು ಬೇಜವಾಬ್ದಾರಿತನ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರನ್ನು ಅವರ ವಿರುದ್ಧ ಉಲ್ಲೇಖ(2)ರಲ್ಲಿನ ಅಪಾದನೆಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಏರ್ಪಡಿಸುವುದನ್ನು ಕಾಯ್ದಿರಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಚೇರಿ ಆದೇಶದ ಸಂಖ್ಯೆ:ಆಡಳಿತ:54:2010–11

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಶಿಸ್ತು ಪ್ರಾಧಿಕಾರಿಯಾದ ನಾನು ಶ್ರೀ ಸಿ.ಎಸ್. ಕುಲಕರ್ಣಿ, ಬೆರಳಚ್ಚುಗಾರರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಶಿವಮೊಗ್ಗ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ: 10(3) ರಂತೆ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಿರುತ್ತೇನೆ.

ಶ್ರೀ ಸಿ.ಎಸ್. ಕುಲಕರ್ಣಿ, ಅಮಾನತ್ತುಗೊಂಡ ಬೆರಳಚ್ಚುಗಾರರು ಪ್ರತಿ ತಿಂಗಳು ಆ ತಿಂಗಳು ಮುಕ್ತಾಯವಾದ ತಕ್ಷಣ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ:97–ಎರ ಅನ್ವಯ ಹಾಗೂ ನಿಯಮ:98 (2)ರ ಅನ್ವಯ ಪ್ರಮಾಣ ಪತ್ರ ಸಲ್ಲಿಸಿದಲ್ಲಿ ನಿಯಮಾನುಸಾರ ಅವರಿಗೆ ಜೀವನಾಧಾರ ಭತ್ಯೆ ಸಂದಾಯ ಮಾಡಬಹುದಾಗಿದೆ.

ಹೆಚ್.ಇ. ರಾಜಶೇಖರಪ್ಪ

ಪಿಆರ್–718 ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

ಪ್ರಾಚಾರ್ಯರು, ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು

ಅಧಿಕಾರಿಗಳು ಮತ್ತು ನೌಕರರ ವಿವರ

ಸೆಕ್ಷನ್ 4 (1) ಸಿಬ್ಬಂದಿ ವಿಭಾಗ (ಬಿ) (ix)

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
		ಪ್ರಾಂಶುಪಾಲರು			
1	ಎನ್.ಡಿ.ನರಗುಂದ	ಪ್ರಾಚಾರ್ಯರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9880459198	39852
		ಕಛೇರಿ ಸಿಬ್ಬಂದಿ			
1	ಆರ್. ಶಿವಾನಂದಪ್ಪ	ರಿಜಿಸ್ಟ್ರಾರ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9844222486	23650

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
2	ಪಿ.ಸಿ. ಕೇಶವಮೂರ್ತಿ	ಕಛೇರಿ ಅಧೀಕ್ಷಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9449413919	20200
3	ಇಂದುಮತಿ.ಎ.ಆರ್.	ಕಛೇರಿ ಅಧೀಕ್ಷಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448971852	16013
4	ಜಫರುಲ್ಲಾಖಾನ್.ಎ	ಪ್ರ.ದ.ಸ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448254316	15163
5	ಸುಮಿತ್ರ.ಐ	ಪ್ರ.ದ.ಸ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448744362	14427
6	ಲೀಲಾವತಿ.ಟಿ.ಎಸ್.	ಗ್ರಂಥಪಾಲಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	19115
7	ಜಯಂತಿ.ಎಂ.ಡಿ.	ದ್ವಿ.ದ.ಸ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	9350
8	ಭರತ.ಟಿ.ಹೆಚ್.	ದ್ವಿ.ದ.ಸ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9481583069	9040
9	ಮಂಜುನಾಥಸ್ವಾಮಿ.ಎ.ವಿ.	ಬೆರಳಚ್ಚುಗಾರ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9242 504330	11959
10	ಭಾಗ್ಯ ಡಿ.ಕೆ.	ಬೆರಳಚ್ಚುಗಾರರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9035092521	9280
11	ಕಮಲಾಕ್ಷಮ್ಮ.ಎಸ್	ಕಛೇರಿ ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9731527738	14427
12	ಜಯರಾಮ.ಸಿ.ಜಿ.	ಕಛೇರಿ ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	12500
13	ರಂಗಸ್ವಾಮಿ	ಡಿ ಗ್ರೂಪ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	13010

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
14	ಮಲ್ಲೇಶಪ್ಪ.ಕೆ.ಜಿ.	ಸೇವಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	11890
15	ರುಕ್ಮಿಣಿಬಾಯಿ.ಆರ್.	ಡಿ ಗ್ರೂಪ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9902203291	10608
16	ಕೃಷ್ಣರಾಜು.ಟಿ.ಎನ್.	ರಾತ್ರಿ ಕಾವಲುಗಾರರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	12390
17	ಯಲ್ಲರಾಜು.ಟಿ.ಡಿ	ರಾತ್ರಿ ಕಾವಲುಗಾರರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	12700
18	ತೋಮಸ್ ನಜ಼ರತ್	ಡಿ ಗ್ರೂಪ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	13630
ಸಿವಿಲ್ ವಿಭಾಗ (Civil Engg)					
1	ಮಹೇಶ್ವರಪ್ಪ.ಪಿ.ಜಿ.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448944745	39144
2	ಸದಾಶಿವಮೂರ್ತಿ.ಟಿ.ಎಸ್.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9845662632	38110
3	ಸುರೇಶ್.ಎಂ.ಎಸ್.	ಹಿ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9845670434	29398
4	ರವಿಕುಮಾರ್.ವಿ.ಎನ್.	ಹಿ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448589614	24174
5	ಪುಷ್ಪಲತ.ಹೆಚ್.ಡಿ.	ಹಿ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9481650789	25092
6	ಶಿಲ್ಪ.ಕೆ.ಸಿ	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9844279431	21034

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
7	ಸೈಯದ್ ಸಲೀಂ ಪೀರಾನ್	ಶಿಕ್ಷಕ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9241208828	17380
		ಯಾಂತ್ರಿಕ ವಿಭಾಗ (Mechanical Engg.)			
1	ಕಾಂತರಾಜಪ್ಪ.ಹೆಚ್.ಎಲ್.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448817745	38819
2	ಕಾಂತರಾಜು.ಟಿ.ಪಿ.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448406787	38819
3	ನಿಂಗಪ್ಪ.ಡಿ	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	944895658	38819
4	ನಾಗರಾಜ	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9844607494	33978
5	ರಾಜೇಶ್.ಎ.ಆರ್.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448787292	33653
6	ರವಿ.ಎ.ಎಂ	ಹಿ.ಶ್ರೇ. ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448555056	26446
7	ನಂಜಯ್ಯ ಹೆಚ್.ಪಿ.	ಫೋರ್‌ಮನ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9972655215	17255
8	ಮಂಜುನಾಥ.ಎಸ್.ಎಂ	ಸಹಭೋಧಕ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9945344726	15238
9	ಶ್ರೀಕಾಂತ್ ಸಿ.ಎನ್.	ಮೆಕ್ಯಾನಿಕ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9449959811	9195
10	ವಿಜಯಕುಮರ್ ಪಿ.ಆರ್.	ಮೆಕ್ಯಾನಿಕ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9964529660	9040

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
11	ಮುಳ್ಳಯ್ಯ.ಡಿ	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9480053228	14825
12	ಚಂದ್ರಯ್ಯ.ಎಂ.ಎಸ್	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	8971887438	13380
13	ಕುಮಾರಪ್ಪ.ಸಿ.ಬಿ.	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	0	10665
14	ವಸಂತ ಕುಮಾರ್.ಸಿ.ಟಿ.	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9035930889	10508
ವಿಜ್ಞಾನ ವಿಭಾಗ (Science Department)					
1	ಕೃಷ್ಣಮೂರ್ತಿ ಆಚಾರ್.ಎ.ಬಿ	ವಿಜ್ಞಾನ ವಿಭಾಗಾಧಿಕಾರಿ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9343849960	45018
2	ಎಂ.ರುದ್ರಸ್ವಾಮಿ	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448705658	38894
3	ಷಡಕ್ಷರಿಸ್ವಾಮಿ.ಜಿ.ಎಸ್	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448758944	33978
4	ನಿತ್ಯಾನಂದ	ಉಪನ್ಯಾಸಕರು (ಆಂಗ್ಲ)	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9449494619	19680
ಅಟೋಮೊಬೈಲ್ ವಿಭಾಗ (Automobile Engg.)					
1	ಸತೀಶ್ ಕಾಳೇಗೌಡ	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9900515148	33653
2	ಮಹೇಶಪ್ಪ.ಕೆ.ಎಸ್.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9449414100	25092
3	ತಿಪ್ಪೆಸ್ವಾಮಿ	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9845337129	21034

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
4	ಶ್ರೀಶೈಲ ನುಚ್ಚಿ	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9945660880	19680
5	ಮಹಮದ್‌ಗೌಸ್ ಚೌಧರಿ	ಶಿಕ್ಷಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9242408672	20700
6	ಸೋಮನಗೌಡ ಪಾಟೀಲ್	ಶಿಕ್ಷಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9242893452	19958
7	ಅನಿಲ್ ಎಸ್. ಕಾಳೆ	ಸಹಶಿಕ್ಷಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9008523462	16325
8	ಸುರೇಶ್‌ಬಾಬು.ಪಿ	ಸಹಭೋಧಕ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9844813866	12625
9	ಚಿಕ್ಕಪ್ಪ	ಸಹಭೋಧಕ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9242124811	15213
10	ನಿರ್ವಾಣೇಗೌಡ.ಬಿ.ಎಸ್.	ಮೆಕ್ಯಾನಿಕ್	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	8262223056	14427
11	ಅಣ್ಣಯ್ಯಪ್ಪ.ವಿ	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9242881881	14477
ಇ ಆಂಡ್ ಸಿ ವಿಭಾಗ (Electronics & Communication Engg.)					
1	ಗೋವಿಂದಪ್ಪ.ಟಿ.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9740352224	25092
2	ನಾಗಶ್ರೀ.ಎನ್	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9480236909	21034
3	ಸೌಮ್ಯ ಆರ್.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	8172245477	21034

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
4	ರಾಜೇಶ್.ಎಸ್.ಆರ್.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448787292	21034
5	ಚಂದ್ರಶೇಖರ ವಿ.ಕೆ.	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9141607676	8265
ಗಣಕಯಂತ್ರ ವಿಭಾಗ (Computer Science & Engg.)					
1	ಪ್ರಿಯ ಎನ್.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9632037430	19680
2	ಅಶ್ವಿನಿ ಬಿ.ಎನ್.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9535120957	19680
3	ಗೀತಾಕುಮಾರಿ ಕೆ.	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9972030733	19680
4	ರೇವನಿ ನಾಯ್ಕ್	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9741388330	19680
5	ಶಶಿಧರ.ಪಿ.ಎ.	ಸಹಾಯಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9845730417	8730
ಇಲೆಕ್ಟ್ರಿಕಲ್ ವಿಭಾಗ (Electrical & Electronics Engg.)					
1	ಓಂಕಾರಸ್ವಾಮಿ.ಡಿ.ಆರ್.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9448665693	38819
2	ಲೋಕೇಶ್.ಬಿ.ಎಂ.	ಆ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9242856691	33653
3	ಶ್ರೀಧರಮೂರ್ತಿ.ಟಿ.ಆರ್.	ಹಿ.ಶ್ರೇ.ಉ	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9480487576	27798

SL. No.	NAME OF THE OFFICERS/ EMPLOYEES	DESIGNATIONS	OFFICE ADDRESS	CONTACT NUMBER/ EMAIL ID	Gross Salary
4	ಶಂಕರಪ್ಪ.ಕೆ	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9480492600	25092
5	ರಾಘವೇಂದ್ರನ್.ಜಿ	ಉಪನ್ಯಾಸಕರು	ಡಿ.ಎ.ಸಿ.ಜಿ. ಸರ್ಕಾರಿ, ಪಾಲಿಟೆಕ್ನಿಕ್, ಚಿಕ್ಕಮಗಳೂರು	9485094611	22386
ಪ್ರಕರಣದ ತನಿಖೆಯನ್ನು ಮುಂದುವರಿಸಿ ತನಿಖಾಧಿಕಾರಿಗಳು ದಿ:19–9–2008ರಂದು ಜಪ್ತುಪಡಿಸಿಕೊಂಡ TVS GLX ವಿಕ್ಟರ್ ಮೋಟಾರ್ ಸೈಕಲ್ ಸಂ:KA-19-W-231 ಇದರ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಜಿಲ್ಲೆ, ಮಂಗಳೂರು ಇವರಿಂದ ಪಡೆದು ಈ ಪ್ರಾಧಿಕಾರಕ್ಕೆ ಒಪ್ಪಿಸಿ ಸದ್ರಿ ವಾಹನದ ಬಗ್ಗೆ ಮಾಲೀಕತ್ವ ನಿರೂಪಿಸಿ ಬಿಡುಗಡೆಗೆ ಯಾರೊಬ್ಬರೂ ಪ್ರಯತ್ನಿಸದೇ ಇರುವುದರಿಂದ, ಸದ್ರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ವಾಹನ TVS GLX ವಿಕ್ಟರ್ ಮೋಟಾರ್ ಸೈಕಲ್ ಸಂ:KA-19-W-231 ಇದಕ್ಕೆ ಸಂಬಂಧಿಸಿದ ಬಿ ರಿಜಿಸ್ಟ್ರಾರ್ ವರದಿಯಲ್ಲಿ ದೃಡೀಕೃತವಾಗಿರುವ ವಾಹನದ ನೊಂದಾಣಿ ಮಾಲೀಕರು ಹಾಗೂ ಪ್ರಕರಣದ ಒಂದನೇ ಆರೋಪಿಯಾದ ವಿಘ್ನೇಶ್ ಬಿನ್:ಮೋನಪ್ಪ, ಹೌಸ್ ನಂ:4–229, ಮಧುಪಾಲ್ ಕ್ವಾಟ್ರಸ್, ಕೋಟೆಕಾರು ಗ್ರಾಮ ಮತ್ತು ಅಂಚೆ, ಮಂಗಳೂರು ಮತ್ತು ವಾಹನದ ಹೆಚ್.ಪಿ. ದಾರರಾದ ICICI ಬ್ಯಾಂಕ್ ಲಿಮಿಟೆಡ್, ಕೆ.ಎಸ್.ಆರ್. ರಾವ್ ರೋಡ್ ಇವರಿಗೆ ಜಪ್ತುಪಡಿಸಿದ ವಾಹನವನ್ನು ಯಾಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಬಗ್ಗೆ ದಿ:30–12–2008ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43 ಬಿ ರ ಪ್ರಕಾರ ಹೊರಡಿಸಲಾದ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ದಿ:3–1–2009ರಂದು ಹಾಗೂ ಹೆಚ್.ಪಿ.ದಾರರಿಗೆ ದಿ:5–1–2009ರಂದು ಜ್ಯಾರಿಯಾಗಿದ್ದು ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಹಾಗೂ ಇನ್ನೊಂದು ವಾಹನ ಸಂ:KA-02-AB-1919 ಬೊಲೆರೋ ಜೀಪು ಇದರ ಬಿ ರಿಜಿಸ್ಟ್ರಾರ್ ವಹಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದಕ ಜಿಲ್ಲೆ, ಮಂಗಳೂರು ಇವರಿಂದ ಪಡೆಯಲಾಗಿದ್ದು, ಸದ್ರಿ ಬಿ ವರದಿಯಲ್ಲಿ ದೃಡೀಕರವಾಗಿರುವ ವಾಹನದ ನೊಂದಾಣಿ ಮಾಲೀಕರಾದ ಶ್ರೀ. ಹೆಚ್. ಕಿರಣ್ ಶೆಟ್ಟಿ, ಬಿನ್:ವಿಠಲ್ ಶೆಟ್ಟಿ,ಹೌಸ್ ನಂ:41, 2ನೇ ಕ್ರಾಸ್, 3 ಮೇನ್, ರಾಮಮೋಹನಪುರ, ಬೆಂಗಳೂರು ಇವರಿಗೆ ಮತ್ತು ಸದ್ರಿ ವಾಹನದ ಹೆಚ್.ಪಿ.ದಾರರಾದ ಮೆ:ಸಿಟಿ ಫೈನಾನ್ಸಿಯಲ್ ಕನ್‌ಸ್ಯೂಮರ್ ಫೈನಾನ್ಸ್ ಇಂಡಿಯ ಲಿಮಿಟೆಡ್, ಬೆಂಗಳೂರು ಇವರಿಗೆ ದಿ:30–12–2008ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43 ಬಿ ರ ಪ್ರಕಾರ ಹೊರಡಿಸಲಾದ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ಜ್ಯಾರಿಯಾಗದೇ ವಾಪಸ್ಸು ಬಂದಿರುತ್ತದೆ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ಪಿರ್ಯಾಧುದಾರರು ಹಾಗೂ ತನಿಖಾಧಿಕಾರಿಗಳಾದ ಶ್ರೀ ವಿನೋದ್ ಕುಮಾರ್, ಅಬಕಾರಿ ಉಪ ನಿರೀಕ್ಷಕರು ಮತ್ತು ಮಹಜರು ಸಾಕ್ಷಿದಾರರಾದ ಶ್ರೀ.ಜಯಪ್ಪ ಲಮಾಣಿ,ಅ.ರ ಮತ್ತು ಪ್ರಕರಣದಲ್ಲಿ ಮಾದರಿಗಳನ್ನು ವಿಶ್ಲೇಷಣೆಗೆ ರವಾನಿಸಿರುವ ಶ್ರೀ.ಜ್ಞಾನದೇವ ಅ.ರ. ಇವರುಗಳು ಪ್ರಾಸಿಕ್ಯೂಶನ್ ಸಾಕ್ಷಿಗಳಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ಅಭಿಯೋಗದ ಪರ ಸಾಕ್ಷಿ ಹಾಗೂ ರಕ್ಷಣಾ ಪರ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ನಡೆಸಿ, ರಕ್ಷಣಾ ಪರ ವಾದ ಮಂಡನೆಗೆ ಕಾಲಾವಕಾಶ ನೀಡಿದ್ದರೂ ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಅಭಿಯೋಗದ ಪರ ವಾದ

ಆಲಿಸಿ, ಪ್ರಾಧಿಕಾರಕ್ಕೆ ಸಲ್ಲಿಸಿರುವ ದಾಖಲಾತಿಗಳು, ಪ್ರಾಸಿಕ್ಯೂಶನ್ ಪರ ನೀಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿ ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾಧಾಂಶಗಳು

1) ದಿನಾಂಕ:18–10–2007ರಂದು TVS GLX ವಿಕ್ಟರ್ ಮೋಟಾರ್ ಸೈಕಲ್ ಸಂ:KA-19-W-231 ಮತ್ತು ಇನ್ನೊಂದು ವಾಹನ ಸಂ:KA-02-AB-1919 ಬೊಲೆರೋ ಜೀಪು ಇದರಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೇಟುಗಳನ್ನು ಸಾಗಾಣಿಕೆಯಾಗಿದೆಯೇ? ಮತ್ತು ವಾಹನಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನಗಳ ಮಾಲೀಕರು ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಸಾರಾಯಿ ಸ್ಯಾಚೇಟು ಸಾಗಾಣಿಕೆಗೆ ವಾಹನಗಳನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನಗಳ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

3) ಜಪ್ತು ಪಡಿಸಲಾಗಿರುವ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯ ವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ–1:–

ಶ್ರೀ. ಜಯಪ್ಪ ಲಮಾಣಿ, ಅ.ರ, ಅಬಕಾರಿ ನಿರೀಕ್ಷಕರ ಕಛೇರಿ, ಬಂಟ್ವಾಳ ವಲಯ ಇವರು ದಿನಾಂಕ: 05–01–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. 2006ರಿಂದ 2008 ರವರೆಗೆ ತಾನು ಅಬಕಾರಿ ಜಂಟಿ ಆಯುಕ್ತರು, ಮಂಗಳೂರು ವಿಭಾಗ ಇವರ ವಿಶೇಷ ತನಿಖಾ ತಂಡದಲ್ಲಿ ಅಬಕಾರಿ ರಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೆನು. ದಿ:18–10–2007 ರಂದು ಸಂಜೆ 4–15 ಗಂಟೆಗೆ ಮಂಗಳೂರು ತಾಲೂಕು ನಂತೂರು ರಾಷ್ಟ್ರೀಯ ಹೆದ್ದಾರಿ ಯ ಬಬ್ಬು ಸ್ವಾಮಿ ದೇವಸ್ಥಾನದ ಎದುರಿಗೆ ನಮ್ಮ ತಂಡದ ಅಬಕಾರಿ ಉಪ ನಿರೀಕ್ಷಕರು ಹಾಗೂ ನಾವು ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಕೇರಳದಿಂದ ಕರ್ನಾಟಕಕ್ಕೆ ಅಕ್ರಮವಾಗಿ ಸಾರಾಯಿ ತೊಟ್ಟೆಗಳು ಮಂಗಳೂರು/ಇನ್ನಿತರ ಪ್ರದೇಶಕ್ಕೆ ಅಕ್ರಮವಾಗಿ ಸಾಗಾಟ ಆಗುತ್ತಿದೆ ಎಂಬ ಖಚಿತ ವರ್ತಮಾನ ದಂತೆ ನಂತೂರು ತಾರಿತೋಟ ಬಳಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಓರ್ವ ವ್ಯಕ್ತಿ ಒಂದು ಬೈಕಿನ ಹ್ಯಾಂಡಲ್‌ನಲ್ಲಿ 1 ಚೀಲವನ್ನು ಹಾಕಿಕೊಂಡು ಪಂಪುವೆಲ್–ಸುರತ್ಕಲ್ ಕಡೆಗೆ ಬರುತ್ತಿದ್ದನ್ನು ನಾವು ಗಮನಿಸಿದೆವು. ಅದು ರಾಷ್ಟ್ರೀಯ ಹೆದ್ದಾರಿ ಆಗಿತ್ತು. ಆತನು ತನ್ನ ಹ್ಯಾಂಡಲಿನಲ್ಲಿ 1 ಚೀಲ ಹಾಕಿಕೊಂಡು ಬರುತ್ತಿದ್ದಾಗ ನಮಗೆ ಅತನ ಮೇಲೆ ಸಂಶಯ ಬಂದು ವಾಹನ ನಿಲ್ಲಿಸಲು ಸೂಚಿಸಿದಾಗ ಆತ ನಿಲ್ಲಿಸದೇ ವೇಗವಾಗಿ ಮುಂದಕ್ಕೆ ಹೋದನು ನಾವು ಆತನನ್ನು ಬೆನ್ನಟ್ಟಿದೆವು. ಹೀಗೆ ಬೆನ್ನಟ್ಟಿ ನಂತೂರು ಬಬ್ಬುಸ್ವಾಮಿ ದೇವಸ್ಥಾನದ ಬಳಿ ತಡೆದು ನಿಲ್ಲಿಸಿದೆವು. ಆತನ ಬೈಕಿನ ಹ್ಯಾಂಡಲ್‌ನಲ್ಲಿದ್ದ ಚೀಲ ನಾವು ಪರಿಶೀಲಿಸಿದಾಗ ತಲಾ 100 ಎಂಎಲ್‌ನ 75 ಸಾರಾಯಿ ಸ್ಯಾಚೇಟ್ ಗಳಿದ್ದವು . ಸದ್ರಿ ಬೈಕಿನ ನೊಂದಣಿ ಸಂಖ್ಯೆಯನ್ನು ನಾವು ಗಮನಿಸಿದಾಗ ಅದು KA-19-W-231 ಆಗಿದ್ದು ,ಅದು ವಿಕ್ಟರ್ ಜಿ ಎಲ್ ಎಕ್ಸ್ ಮಾಡೆಲ್ ಆಗಿತ್ತು. ಅದರ ಚಾಸಿಸ್ ಮತ್ತು ಇಂಜಿನ್ ನಂಬರನ್ನು ಸ್ಥಳದಲ್ಲಿ ಪರಿಶೀಲಿಸಿದೆವು. ಅಕ್ರಮವಾಗಿ ಬೈಕಿನ ಹ್ಯಾಂಡೆಲ್‌ನಲ್ಲಿ ಚೀಲವೊಂದರಲ್ಲಿ ಸಾರಾಯಿ ಸ್ಯಾಚೇಟುಗಳನ್ನ ತುಂಬಲು ಪರವಾನಿಗೆ ಇರಲಿಲ್ಲ .ಆತನನ್ನು ವಿಚಾರಿಸಿದಾಗ ಆತನ ಹೆಸರು ವಿಘ್ನೇಶ್ ಬಿನ್:ಮೋನಪ್ಪ ಪೂಜಾರಿ ಹಾಗೂ ವಿಳಾಸ ತಿಳಿಸಿರುತ್ತಾನೆ.

ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಆತನು ಒಂದು ಬೊಲೆರೋ ವಾಹನದಿಂದ ಒಬ್ಬ ವ್ಯಕ್ತಿ ಕೊಟ್ಟಿದನ್ನು ತಂದಿರುವುದಾಗಿ ಹಾಗೂ ಸದ್ರಿ ಬೊಲೆರೋ ವಾಹನದ ವ್ಯಕ್ತಿ ವಾಹನ ಸಮೇತ ಆತನ ಹಿಂದಿನಿಂದ ಬರುವ ಸಾಧ್ಯತೆ ಇದೆ ಎಂದು ತಿಳಿಸಿದ ಈ ಮಾಹಿತಿ ದೊರಕಿದ ಕಾರಣ ನಾವು ಸ್ವಲ್ಪ ಸಮಯ ಅಲ್ಲೇ ಕಾದೆವು, KA-02-AB-1919 ನೊಂದಣಿ ಸಂಖ್ಯೆ ಬಿಳಿ ಬಣ್ಣದ ಬೊಲೆರೋ ವಾಹನ ಬರುತ್ತಿರುವುದನ್ನು ಕಂಡು ತಡೆದು ನಿಲ್ಲಿಸಿದೆವು, ಅದರಲ್ಲಿದ್ದ ಇಬ್ಬರು ವ್ಯಕ್ತಿಗಳು ಇದ್ದು ಅವರ ಪೈಕಿ ಒಬ್ಬ ಚಾಲಕನಾಗಿದ್ದನು. ಸದ್ರಿ ಚಾಲಕನಲ್ಲಿ ನಾವು ವಿಚಾರಿಸಿದಾಗ ಬೊಲೆರೋ ವಾಹನದಲ್ಲಿ ಸಾರಾಯಿ ಸ್ಯಾಚೇಟುಗಳು ಇದೆ ಎಂದು ನಮಗೆ ತಿಳಿಸಿದನು. ಸದ್ರಿ ವಾಹನ ತಪಾಸಣೆ ಮಾಡಲು ಅಬಕಾರಿ ಕಾಯಿದೆಯಂತೆ ಮಾನ್ಯ ನ್ಯಾಯಾಲಯದ ದಂಡಾಧಿಕಾರಿರವರ ಆದೇಶ ಅಗತ್ಯವಿದ್ದು ಸದ್ರಿ ಆದೇಶ ಪಡೆಯಲು ಸಮಯವಕಾಶವಿಲ್ಲದ ಕಾರಣ ಸ್ಥಳದಲ್ಲೇ ನಾವು ಯಾವ ಕಾರಣಕ್ಕಾಗಿ ಶೋಧನಾ ವಾರೆಂಟ್ ಪಡೆಯಲು ಅಸಾಧ್ಯವಾಯಿತು ಎಂಬ ಬಗ್ಗೆ ರೆಕಾರ್ಡ್ ಆಫ್ ರೀಸನ್ ತಯಾರಿಸಿದೆವು, ತದನಂತರ ನಾವು ಸದ್ರಿ ವಾಹನವನ್ನು ಶೋಧನೆ ನಡೆಸಿದಾಗ ಹಿಂದಿನ ಬದಿಯಲ್ಲಿ 6 ಗೋಣಿ ಚೀಲಗಳಲ್ಲಿ ತಲಾ 500ರಂತೆ ಒಟ್ಟು 3000 ಸಾರಾಯಿ ಸ್ಯಾಚೇಟುಗಳಿದ್ದವು,. ಪ್ರತಿ ಸಾರಾಯಿ ಸ್ಯಾಚೇಟ್ ನಲ್ಲಿ 100 ಎಂಎಲ್‌ನ ಸಾರಾಯಿ ಇತ್ತು. ಮೇಲೆ ಹೇಳಿದ ಸಾರಾಯಿ ಸ್ಯಾಚೇಟ್ ಗಳನ್ನು ಸಾಗಿಸಲು ಅಥವಾ ಹೊಂದಲು ಯಾವುದೇ ಪರವಾನಿಗೆ

ಇರಲಿಲ್ಲ. ಮೇಲೆ ಹೇಳಿದ ಬೊಲೆರೋ ಚಾಲಕನ ಹೆಸರು: ಪ್ರಭಾಕರ ಶೆಟ್ಟಿ ಹಾಗೂ ಆತನ ಪ್ರಾಯ ಮತ್ತು ವಿಳಾಸವನ್ನು ಕೂಡಾ ಹೇಳಿರುತ್ತಾನೆ. ಬೊಲೆರೋ ವಾಹನದಲ್ಲಿದ್ದ ಇನ್ನೊರ್ವ ವ್ಯಕ್ತಿ ಹೆಸರು ಕೇಳಿದಾಗ ಆತನ ಹೆಸರು ದೀರಜ್ ಶೆಟ್ಟಿ ,ಪ್ರಾಯ 21 ವರ್ಷ ಎಂದು ಹೇಳಿದನು. ಮೋಟಾರ್ ಸೈಕಲಿನಲ್ಲಿ ದೊರೆತ ಸಾರಾಯಿ ಸ್ಯಾಚೇಟುಗಳಲ್ಲಿ ರಾಸಾಯನಿಕ ವಿಶ್ಲೇಷಣೆಗಾಗಿ 10 ಸಾ.ಸ್ಯಾ.ಗಳನ್ನು ತೆಗೆದು ಅದಕ್ಕೆ ಬಿಳಿ ಬಟ್ಟೆ ಸುತ್ತಿ ದಾರ ಕಟ್ಟಿ ಇಲಾಖಾ ಮೊಹರು ಹಾಕಿರುತ್ತೇವೆ. ಸದ್ರಿ ಸ್ಯಾಚೇಟುಗಳಿಗೆ ಅರೋಪಿ ಹೆಸರು ಮತ್ತು ವಿಳಾಸ ಇರುವ ಚೀಟಿ ಅಂಟಿಸಿದೆವು. ಉಳಿದ ಮಾಲುಗಳನ್ನು ಕೂಡ ಅದೇ ಚೀಲದಲ್ಲಿ ತುಂಬಿಸಿ ಅದಕ್ಕೂ ಅರೋಪಿ ಹೆಸರಿನ ಚೀಟಿ ಅಂಟಿಸಿ ಬೊಲೆರೋ ದಲ್ಲಿ ಸಿಕ್ಕಿದ್ದ ಉಳಿದ ಸಾ.ಸ್ಯಾ ಗಳ ಗೋಣಿ ಚೀಲಕ್ಕೆ ಆರೋಪಿ ಹೆಸರು–ವಿಳಾಸ ಇರುವ ಚೀಟಿ ಅಂಟಿಸಲಾಯಿತು. ಎಲ್ಲಾ ವಸ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಳ್ಳಲಾಯಿತು. ಎಲ್ಲಾ ಸಂಗತಿಗಳನ್ನು ಒಳಗೊಂಡ ವಿವರವಾದ ಮಹಜರನ್ನು ನಮ್ಮ ತಂಡದ ಅಬಕಾರಿ ಉಪ ನಿರೀಕ್ಷಕರು ಒಂದು ಮಹಜರು ತಯಾರಿಸಿದರು .ಸದ್ರಿ ಮಹಜರಿಗೆ ನಾನು ಸಹಿ ಮಾಡಿದ್ದು ಮಹಜರು ನಿಶಾನೆ ಪಿ–1 ರಲ್ಲಿ ನನ್ನ ಸಹಿ ನೋಡುತ್ತಿದ್ದು ಅದು ನಿಶಾನೆ ಪಿ–1 ಎ ಆಗಿರುತ್ತದೆ. ಆ ಮೇಲೆ ನಾವು ವಾಹನ ಸೊತ್ತುಗಳನ್ನು ಹಾಗೂ ಆರೋಪಿಗಳೊಂದಿಗೆ ನಮ್ಮ ಇಲಾಖಾ ಕಛೇರಿಗೆ ವಾಪಸಾದೆವು ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ರಕ್ಷಣಾ ಪರ ವಕೀಲರಾದ ಶ್ರೀ.ಸುಬ್ಬಯ್ಯ ರೈ ಇವರ ಸಹಾಯಕರಾದ ಶ್ರೀ.ಮನೋಜ್ ವಕೀಲರು ಇವರ ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸುತ್ತಾ ನಾನು ಆ ದಿವಸ ನಮ್ಮ ಕಛೇರಿಯಿಂದ ಮಧ್ಯಾಹ್ನ 2–30 ಗಂಟೆಗೆ ಹೊರಟಿರುತ್ತೇನೆ. ನನ್ನೊಂದಿಗೆ ನಮ್ಮ ಅಧಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರಾದ ಶ್ರೀ.ವಿನೋದ್ ಕುಮಾರ್ ನಮ್ಮ ಇಲಾಖಾ ಸಿಬ್ಬಂದಿ ಶಿವಕುಮಾರ್ ಇದ್ದರು. ಆ ದಿವಸ ಗಸ್ತು ತಿರುಗಲು ಹೊರಟ ಬಗ್ಗೆ ನಮ್ಮ ಠಾಣಾ ವಹಿಯಲ್ಲಿ ನಮೂದಿಸಲಾಗಿದೆ. ನಮ್ಮ ಕಛೇರಿಯಿಂದ ತಕ್ಷೀರು ಸ್ಥಳಕ್ಕೆ 2 ಕಿ.ಮಿ. ದೂರ ಆಗಬಹುದು. ನಾವು ತಕ್ಷೀರು ಸ್ಥಳಕ್ಕೆ ಕಛೇರಿಯಿಂದ ನಮ್ಮ ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಸದ್ರಿ ನಮ್ಮ ಇಲಾಖಾ ವಾಹನ ಚಾಲಕ ರಘುರಾಮ ಆಗಿರುತ್ತಾನೆ. ನಾವು ತಲುಪಿದ ತಕ್ಷೀರು ಸ್ಥಳ ತಾರೆತೋಟ ಎಂಬುದು ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯಲ್ಲಿ ಇರುತ್ತದೆ. ಇದು ಬಹಳ ಸಂಖ್ಯೆ ವಾಹನ ಸಾಗುವ ರಾಷ್ಟ್ರೀಯ ಹೆದ್ದಾರಿ ಆಗಿರುತ್ತದೆ. ನಾವು ಆ ದಿವಸ ರಾಷ್ಟ್ರೀಯ ಹೆದ್ದಾರಿಯಲ್ಲಿ 30 ವಾಹನಗಳ ಶೋದನೆ ಮಾಡಿರುತ್ತೇವೆ. ನಾವು ನಮ್ಮ ವಾಹನವನ್ನು ರಾಷ್ಟ್ರೀಯ ಹೆದ್ದಾರಿ ಎಡಭಾಗಕ್ಕೆ ನಂತೂರು ಕಡೆ ಮುಖ ಮಾಡಿ ಇರಿಸಿರುತ್ತೇವೆ. ಸದ್ರಿ ತಕ್ಷೀರು ಸ್ಥಳಕ್ಕೆ ನಾವು ಜಪ್ತುಪಡಿಸಿದ ವಾಹನ ಸುಮಾರು 4 ಗಂಟೆಗೆ ಸಾಗಿ ಬಂದಿರುತ್ತದೆ. ಸದ್ರಿ ದ್ವಿಚಕ್ರ ವಾಹನ ತಲುಪಿದ 10 ನಿಮಿಷದಲ್ಲಿ ಬೊಲೆರೋ ವಾಹನ ತಲುಪಿರುತ್ತದೆ. ಸದ್ರಿ ಬೊಲೆರೋ ವಾಹನ ನಿಲ್ಲಿಸಲು ನಾನು ಕೈಸನ್ನೆ ಮಾಡಿರುತ್ತೇನೆ. ಸದ್ರಿ ವಾಹನ ಚಲಾಯಿಸುತ್ತಿದ್ದ ವ್ಯಕ್ತಿಗಳು ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿರುವುದಿಲ್ಲ. ಸದ್ರಿ ಬೊಲೆರೋ ವಾಹನದ ಚಾಲಕನ ಹಿಂದಿನ ಸೀಟು ಮಡಿಸಿದ್ದು, ಆ ಭಾಗದಲ್ಲಿ ಸಾ.ಸ್ಯಾಚೆಟುಗಳು ತುಂಬಿದ್ದ 6 ಚೀಲಗಳನ್ನು ಇರಿಸಲಾಗಿರುತ್ತದೆ. ಸದ್ರಿ ಸಾ.ಸ್ಯಾಚೇಟುಗಳನ್ನು ನಮ್ಮ ಸಿಬ್ಬಂಧಿ ಶಬೀರ್‌ರವರು ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಇರುವುದನ್ನು ನೋಡಿರುತ್ತಾರೆ. ಸದ್ರಿ ಗೋಣಿಚೀಲಗಳನ್ನು ಕೂಲಂಕುಷವಾಗಿ ನಾನು ಮತ್ತು ನಮ್ಮ ಸಿಬ್ಬಂಧಿ ಶಬೀರ್ ಅಹ್ಮದ್ ಇವರು ಕೆಳಗಿಳಿಸಿರುತ್ತೇವೆ. ಸದ್ರಿ 6 ಗೋಣಿ ಚೀಲಗಳಿಗೆ ಕ್ರ.ಸಂಖ್ಯೆ ನೀಡಿರುವುದಿಲ್ಲ. ಸದ್ರಿ ವಾಹನದಲ್ಲಿದ್ದ 6 ಗೋಣಿ ಚೀಲಗಳು ಸಾಗಿಸಲಾಗುತ್ತಿದ್ದ ಸಾ.ಸ್ಯಾಚೇಟುಗಳನ್ನು ನಾವು ಲೆಕ್ಕ ಮಾಡಿ ಅವುಗಳಲ್ಲಿ 10 ಮಾದರಿ ತೊಟ್ಟೆ ತೆಗೆದು ಅವುಗಳಿಗೆ ನಮ್ಮ ಅಧಿಕಾರಿ ತಯಾರಿಸಿಕೊಟ್ಟ ಗುರುತು ಚೀಟಿ ಹಚ್ಚಿರುತ್ತೇವೆ. ನಾವು ಸ್ಥಳಕ್ಕೆ ರವಿ ಎನ್ನುವ ಸ್ವತಂತ್ರ ಸಾಕ್ಷಿಯನ್ನು ಕರೆಸಿಕೊಂಡಿರುತ್ತೇವೆ. ಅವರು ನಾವು ಅಪರಾಧ ಪತ್ತೆ ಹಚ್ಚುವ ಸಂದರ್ಭ ಸ್ಥಳದಲ್ಲಿದ್ದರು. ಮೇಲೆ ಹೇಳಿದ ಬಬ್ಬು ಸ್ವಾಮಿ ದೇವಸ್ಥಾನಕ್ಕೆ ತುಂಬಾ ಜನರು ಬಂದು ಹೋಗುತ್ತಿರುತ್ತಾರೆ. ನಾವು ಜಪ್ತಿಪಡಿಸಿದ ಅಪರಾಧ ಸ್ಥಳದಲ್ಲಿ ಸುಮಾರು 10–12 ಜನರು ಸೇರಿರುತ್ತಾರೆ. ನಾವು ಸ್ಥಳ ಮಹಜರನ್ನು ಸ್ಥಳದಲ್ಲೇ ತಯಾರಿಸಿದ್ದು, ಸದ್ರಿ ಮಹಜರನ್ನು ನಮ್ಮ ಸಿಬ್ಬಂಧಿ ಸಯ್ಯದ್ ಶಬೀರ್ ಎಂಬವರು ಬರೆದಿರುತ್ತಾರೆ. ನಾವು ಈ ಸ್ಥಳ ಮಹಜರನ್ನು ತಕ್ಷೀರು ಸ್ಥಳದಲ್ಲೇ 4–15ರಿಂದ 5–15ರವರೆಗೆ ತಯಾರಿಸಿರುತ್ತೇವೆ. ಈ ಪ್ರಕರಣಕ್ಕೆ ಸಂಬಂಧಿಸಿ ತಯಾರಿಸಿದ ದಾಖಲೆಗಳು ನಮ್ಮ ಕಛೇರಿಯಲ್ಲಿ ತಯಾರಿಸಿದ್ದು ಅಂದರೆ ಸರಿಯಲ್ಲ. ನಾವು ಆ ದಿವಸ ಪತ್ತೆ ಮಾಡಿರುವ ಅಪರಾಧ ಸ್ಥಳಕ್ಕೆ ಹೋಗಿದ್ದೆ ಇಲ್ಲ ಎಂದರೆ ಸರಿಯಲ್ಲ. ನಾವು ಜಪ್ತಿಪಡಿಸಿರುವ ಬೊಲೆರೋ ವಾಹನದಲ್ಲಿ ಯಾವುದೇ ಅಕ್ರಮ ಸಾ.ಸ್ಯಾಚೇಟುಗಳು ಇದ್ದೆ ಇಲ್ಲ ಎಂದರೆ ಸರಿಯಲ್ಲ. ನಾವು ಸ್ಥಳ ಮಹಜರಿನಲ್ಲಿ ಅಪರಾಧ ಸ್ಥಳದ ಚೆಕ್‌ಬಂಧಿ ನಮೂದಿಸಿರುವುದಿಲ್ಲ. ನಾನು ಈ ಪ್ರಾಧಿಕಾರದ ಮುಂದೆ ನಮ್ಮ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ, ಈ ತಕ್ಷೀರಿಗೂ ನಾವು ಜಪ್ತುಪಡಿಸಿದ ವಾಹನಕ್ಕೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿ ಅಲ್ಲ ಎಂದು ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸಿರುತ್ತಾರೆ.

ಪ್ರಾ.ಸಾ–2:– ಶ್ರೀ.ಜ್ಞಾನದೇವ, ಅ.ರ ಮಂಗಳೂರು ಉತ್ತರ ವಲಯ–1ಇವರು ದಿ:5–1–2010 ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ ಅಕ್ಟೋಬರ್–2007ರಿಂದ ನಾನು ಮಂಗಳೂರು ಉತ್ತರ ಜಾರಿ ಮತ್ತು ತನಿಖೆ ವಿಭಾಗದಲ್ಲಿ ಅಬಕಾರಿ

ರಕ್ಷಕನಾಗಿ ಕೆಲಸ ಮಾಡುತ್ತಿದ್ದೆನು. ದಿ:29–10–2007 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ನಮ್ಮ ಅಬಕಾರಿ ಉಪ ನಿರೀಕ್ಷಕರವರು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಪ್ಯಾಕೇಟುಗಳನ್ನು ಮತ್ತು ಕೋರಿಕೆ ಪತ್ರವನ್ನು ರಾಸಾಯನಿಕ ವಿಶ್ಲೇಷಣೆಗೆ ಕೊಂಡು ಹೋಗಲು ಕೊಟ್ಟಿರುತ್ತಾರೆ. ಆ ಪ್ರಕಾರ ನಾನು ಸೊತ್ತು ಮತ್ತು ಕೋರಿಕೆ ಪತ್ರ ಸಹಾಯಕ ರಾಸಾಯನಿಕ ವಿಶ್ಲೇಷಕರು ಮಂಗಳೂರು ಇವರಿಗೆ ಅದೇ ದಿವಸ ಒಪ್ಪಿಸಿರುತ್ತೇನೆ. ದಿ:3–3–2008ರಂದು ನನಗೆ ರಾಸಾಯನಿಕ ವಿಶ್ಲೇಷಕರ ಕಛೇರಿಯಿಂದ ಮೇಲೆ ಹೇಳಿದ ಸಾ.ಸ್ಯಾ ಗಳನ್ನು ವಿಶ್ಲೇಷಣೆ ಮಾಡಿದ ವರದಿ ಹಾಗೂ ಉಳಿದ ಪ್ಯಾಕೇಟುಗಳನ್ನು ಅವರ ವರದಿ ಸಮೇತ ಕೊಟ್ಟಿರುತ್ತಾರೆ. ವರದಿ ಮತ್ತು ನಾನು ವಾಪಾಸು ತಂದ ಸಾ.ಸ್ಯಾಚೇಟು ಪ್ಯಾಕೇಟನ್ನು ನಮ್ಮ ಕಛೇರಿಗೆ ಒಪ್ಪಿಸಿರುತ್ತಾನೆ. ನಾನು ಅಬಕಾರಿ ಉಪ ನಿರೀಕ್ಷಕರು (1) ಇವರಿಂದ ಪಡೆದ ಕೋರಿಕೆ ಪತ್ರ ನಿಶಾನೆ ಪಿ–2 ರಲ್ಲಿದೆ, ನಿಶಾನೆ ಪಿ–2 ರಲ್ಲಿ ನನ್ನ ಸಹಿಯನ್ನು ನಿಶಾನೆ ಪಿ–2 ಎ ಎಂದು ಗುರುತಿಸಲಾಯಿತು. ನಾನು ಸಹಾಯಕ ರಾಸಾಯನಿಕ ವಿಶ್ಲೇಷಕರ ಕಚೇರಿಯ ಪಡೆದ ವರದಿ ನಿಶಾನೆ ಪಿ–3 ರಲ್ಲಿದೆ.

ಪಾಟೀ ಸವಾಲು: ಶ್ರೀ.ಮನೋಜ್ ಕುಮಾರ್ ಆಳ್ವ ವಕೀಲರು ಇವರ ಪಾಟೀ ಸವಾಲಿಗೆ ಉತ್ತರಿಸುತ್ತಾ ನಾನು ನಮ್ಮ ಅಬಕಾರಿ ಉಪ ನಿರೀಕ್ಷಕರು ನನ್ನ ಮುಖಾಂತರ ಇಂತಹ ಪ್ರಕರಣಕ್ಕೆ ಸಂಬಂಧಿಸಿದ ಮಾದರಿ ಸಾರಾಯಿ ಸ್ಯಾಚೇಟುಗಳನ್ನು ರಾಸಾಯನಿಕ ವಿಶ್ಲೇಷಣಾ ಅಧಿಕಾರಿಯವರಿಗೆ ಕೋರಿಕೆ ಪತ್ರದೊಂದಿಗೆ ಕಳುಹಿಸಿರುವುದಿಲ್ಲ ಮತ್ತು ರಾಸಾಯನಿಕ ವಿಶ್ಲೇಷಣಾ ವರದಿ ಪಡೆದು ತಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಾಧಿಕಾರದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಾ.ಸಾ–3:–

ಶ್ರೀ.ವಿನೋದ್ ಕುಮಾರ್,ಅ.ನಿ, ಕಾರ್ಕಳ ವಲಯ ಇವರು ದಿ:19–1–2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ದಿನಾಂಕ:28–12–2003ರಿಂದ ಅಕ್ಟೋಬರ್ 2009ರವರೆಗೆ ಮಂಗಳೂರು ವಿಭಾಗದ ವಿಶೇಷ ತನಿಖಾ ತಂಡದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೆ. ದಿ:18–10–2007ರಂದು ಅಬಕಾರಿ ಜಂಟಿ ಆಯುಕ್ತರವರ ನಿರ್ದೇಶನದ ಮೇರೆಗೆ ನಾನು ನನ್ನ ಸಿಬ್ಬಂಧಿ ಜೊತೆ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ವರ್ತಮಾನದ ಮೇರೆಗೆ ಮಂಗಳೂರು ತಾಲೂಕು ರಾಷ್ಟ್ರೀಯ ಹೆದ್ದಾರಿ ಯ ತಾರೆತೋಟ ಬಳಿನಿಂತಿದ್ದಾಗ ಕೇರಳ–ಸುರತ್ಕಲ್ ಕಡೆಗೆ ಒಂದು ಮೋಟಾರ್ ಸೈಕಲ್ ಬರುತ್ತಿರುವುದನ್ನು ಸಂಶಯದ ಮೇರೆಗೆ ತಡೆದು ನಿಲ್ಲಿಸಲು ಸೂಚನೆ ನೀಡಿದಾಗ ಸದ್ರಿ ವಾಹನವನ್ನು ಅದರ ಚಾಲಕನು ಮುಂದೆ ಚಲಾಯಿಸಿದಾಗ ನಾವು ಅದನ್ನು ಸುಮಾರು 100 ಮೀಟರು ದೂರ ಬಬ್ಬು ಸ್ವಾಮಿ ದೇವಸ್ಥಾನದ ಬಳಿ ತಡೆದು ನಿಲ್ಲಿಸಿದಾಗ ಸದ್ರಿ ಸವಾರ ಮೋಟಾರು ಸೈಕಲ್‌ನಿಂದ ಇಳಿದು ಓಡಲು ಪ್ರಯತ್ನಿಸಿದಾಗ ನಾವು ಅವನನ್ನು ತಡೆದು ನಿಲ್ಲಿಸಿದೆವು. ಸದ್ರಿ ಮೋಟಾರ್ ಸೈಕಲ್ ನಲ್ಲಿ ಒಂದು ಚೀಲ ಇದ್ದು, ಸದ್ರಿ ಚೀಲದಲ್ಲಿ ಏನಿದೆ ಎಂದು ವಿಚಾರಿಸಿದಾಗ ಅದರಲ್ಲಿ ಸಾರಾಯಿ ಸ್ಯಾಚೇಟುಗಳು ಇರುವುದಾಗಿ ತಿಳಿಸಿದರು. ಸದ್ರಿ ಸಾರಾಯಿಯನ್ನು ಒಂದು ಜೀಪಿನವರು ಕೊಟ್ಟಿರುವುದಾಗಿ ತಿಳಿಸಿದ. ಸದ್ರಿ ಚೀಲ ಪರಿಶೀಲಿಸಿದಾಗ ಅದರಲ್ಲಿ 100 ಎಂಎಲ್‌ನ 75 ಸಾರಾಯಿ ಸ್ಯಾಚೇಟುಗಳು ಇರುವುದು ಕಂಡು ಬಂತು. ಆ ಸಂದರ್ಭದಲ್ಲಿ ನಾವು ಪಂಚರನ್ನು ಸ್ಥಳಕ್ಕೆ ಕರೆಸಿದೆವು. ಕಾಲಾವಕಾಶ ಇಲ್ಲದ ಕಾರಣ ಸರ್ಚ್ ವಾರೆಂಟ್ ಪಡೆಯಲಾಗಲಿಲ್ಲ. ಸ್ಥಳದಲ್ಲಿ ಸರ್ಚ್ ಮೆಮೋ ತಯಾರಿಸಿರುತ್ತೇವೆ. ಸದ್ರಿ ಸಾರಾಯಿ ಸ್ಯಾಚೇಟುಗಳನ್ನು ಹೊಂದಲು ಆತನಲ್ಲಿ ಪರವಾನಿಗೆ :ರಹದಾರಿ ಇರಲಿಲ್ಲ. ವಾಹನದ ಚಾಲಕನ ಹೆಸರು ವಿಚಾರಿಸಿದಾಗ ಅತ ವಿಘ್ನೇಶ್ ಬಿನ್:ಮೋನಪ್ಪ ಪೂಜಾರಿ, ಕೋಟೆಕಾರು ಗ್ರಾಮ, ಎಂದು ತಿಳಿಸಿರುತ್ತಾನೆ. ಸದ್ರಿ ವಾಹನದ ನೊಂದಣಿ ಸಂಖ್ಯೆ:KA-19-W-231 ಆಗಿತ್ತು. ತನಗೆ ಸಾರಾಯಿ ಸ್ಯಾಚೇಟುಗಳನ್ನು ನೀಡಿದ ಜೀಪು ಹಿಂದಿನಿಂದ ಬರುವ ಸಾಧ್ಯತೆ ಇದೆ ಎಂದು ಹೇಳಿದ ಕಾರಣ , ನಾವು ಕಾಯುತ್ತಿರುವಾಗ ಸ್ವಲ್ಪ ಸಮಯದಲ್ಲಿ ಕೇರಳ ಗಡಿ ಕಡೆಯಿಂದ ಸುರತ್ಕಲ್ ಕಡೆ ಹೋಗುತ್ತಿದ್ದ ಕಂದು ಬಣ್ಣದ ಬೊಲೆರೋ ಜೀಪು ಬಂದಿದ್ದು ಅದರ ನೊಂದಣಿ ಸಂ:KA-02-AB-1919 ಆಗಿದ್ದು ಸದ್ರಿ ವಾಹನವನ್ನು ತಡೆದು ನಿಲ್ಲಿಸಿದಾಗ ಅದರಲ್ಲಿ ಇಬ್ಬರು ವ್ಯಕ್ತಿಗಳಿದ್ದು, ಅವರಲ್ಲಿ ಸದ್ರಿ ವಾಹನದಲ್ಲಿ ಏನು ಇದೆ ಎಂದು ಕೇಳಿದಾಗ ಅದರಲ್ಲಿ ಸಾ.ಸ್ಯಾಚೇಟುಗಳು ಇರುವುದು ಅವುಗಳಿಗೆ ಯಾವುದೇ ಪರವಾನಿಗೆ :ರಹದಾರಿ ಇಲ್ಲ ಎಂದು ತಿಳಿಸಿದರು. ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ವಾರೆಂಟ್ ತಯಾರಿಸಿ ವಾಹನ ಶೋಧಿಸಿದಾಗ ಕಾರಿನ ಸೀಟಿನ ಹಿಂಭಾಗದಲ್ಲಿ 6 ಗೋಣಿ ಚೀಲಗಳಲ್ಲಿ ತಲಾ 500 ರಂತೆ 100 ಎಂಎಲ್‌ನ ಸಾರಾಯಿ ಸಾ.ಸ್ಯಾಚೇಟುಗಳು ಇರುವುದು ಕಂಡು ಬಂತು. ಸದ್ರಿ ಚಾಲಕ ಮತ್ತು ಇನ್ನೊಬ್ಬರ ಹೆಸರು ಮತ್ತು ವಿಳಾಸ ಕೇಳಲಾಗಿ ಚಾಲಕ ಪ್ರಭಾಕರ ಬಿನ್:ಉಗಪ್ಪ ಶೆಟ್ಟಿ,ಕೋಟೆಕಾರು ಗ್ರಾಮ, ಮಂಗಳೂರು ಮತ್ತು ಧೀರಜ್ ಶೆಟ್ಟಿ, ಬಿನ್: ರಾಮಣ್ಣ ಶೆಟ್ಟಿ,ಸೋಮೇಶ್ವರ ಎಂದು ತಿಳಿಸಿದ. ಪ್ರತಿಯೊಂದು ಬ್ಯಾಗಿನಿಂದ ತಲಾ 10ರಂತೆ ಒಟ್ಟು 60 ಸಾ.ಸ್ಯಾ ಗಳನ್ನು ಮತ್ತು ಬೈಕ್ ನಿಂದ ಸಾ.ಸ್ಯಾ ಗಳ ಪೈಕಿ 10 ಸಾ.ಸ್ಯಾ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಿ ಮೊಹರು ಕ್ರಮ ಜರುಗಿಸಿ ಪ್ರತ್ಯೇಕ ವಶಕ್ಕೆ ತೆಗೆದುಕೊಂಡಿರುತ್ತೇನೆ. ಹಾಗೂ ಸದ್ರಿ 2 ವಾಹನದಲ್ಲಿ ಸಾ.ಸ್ಯಾಗಳನ್ನು

ಪಂಚರ ಸಮಕ್ಷಮ ಇಲಾಖಾ ವಶಕ್ಕೆ ತೆಗೆದುಕೊಂಡಿರುತ್ತೇನೆ. ಸ್ಥಳದಲ್ಲಿ ಮಹಜರು ತಯಾರಿಸಿದ್ದು,ಸದ್ರಿ ಮಹಜರನ್ನು ನಿಶಾನೆ ಪಿ–1, ಸಾಕ್ಷಿ ಸಹಿ ನಿಶಾನೆ–ಪಿ1 ಬಿ ಎಂದು ಗುರುತಿಸಲಾಯಿತು,. ನಂತರ ಆರೋಪಿ ಸೊತ್ತುಗಳೊಂದಿಗೆ ಕಛೇರಿಗೆ ಬಂದು ಪ್ರ.ಮಾ.ಸಂ: 11 /2007–08 ರಂತೆ ಪ್ರಕರಣ ದಾಖಲಿಸಿರುತ್ತೇನೆ. ಸದ್ರಿ ಪ್ರ.ಮಾ.ವರದಿಯನ್ನು ನಿಶಾನೆ ಪಿ–4 ಎಂದು ,ಅದರ ಸಾಕ್ಷಿ ಸಹಿಯನ್ನು ನಿಶಾನೆ ಪಿ–4ಬಿ ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಪಟ್ಟ ಸೊತ್ತು ಪಟ್ಟಿ ನಿಶಾನೆ ಪಿ–5 ಎಂದು, ಸಆಕ್ಷಿ ಸಹಿ ನಿಶಾನೆಪಿ–5ಎ ಎಂದು ಗುರುತಿಸಿ ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಡಿಮಾಂಡ್ ಅರ್ಜಿ ಜೊತೆ ಹಾಜರು ಪಡಿಸಲಾಯಿತು. ವಶಪಡಿಸಿಕೊಳ್ಳಲಾದ ಸೊತ್ತುಗಳನ್ನು ರಾಸಾಯನಿಕ ವಿಶ್ಲೇಷಣೆ ಕಛೇರಿಗೆ ಕಳುಹಿಸಿಕೊಡಲಾಗಿ ಕೋರಿಕೆ ಪತ್ರವನ್ನು ನಿಶಾನೆ ಪಿ–2 ಎಂದು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಶಾನೆ ಪಿ–2ಬಿ ಎಂದೂ, ತನಿಖಾ ಸಮಯ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆಯಲಾಗಿದ್ದು ಅದು ನಿಶಾನೆ ಪಿ–3 ಆಗಿರುತ್ತದೆ.ಸದ್ರಿ ವರದಿಯಂತೆ ರಾಸಾಯನಿಕ ಪರೀಕ್ಷೆಗೆ ತೆಗೆದಿರಿಸಿದ ಎಲ್ಲಾ ಸಾರಾಯಿ ಸ್ಯಾಚೇಟುಗಳಲ್ಲಿ ಮದ್ಯಸಾರದ ಅಂಶ ಇರುವುದು ಕಂಡು ಬಂದಿರುತ್ತದೆ. ತನಿಖೆ ಸಮಯ ಬೊಲೆರೋ ವಾಹನಕ್ಕೆ ಸಂಬಂಧಿಸಿದಂತೆ ಬಿ ವಹಿಯನ್ನು ಪಡೆದಿರುತ್ತೇನೆ. ಸದ್ರಿ ಬಿ ವರದಿಯನ್ನು ನಿಶಾನೆ ಪಿ–6 ಎಂದು ಹಾಗೂ ಪಡೆಯಲಾದ ಸದ್ರಿ ವಾಹನದ ಮೌಲ್ಯಮಾಪನ ವರದಿಯನ್ನು ನಿಶಾನೆ ಪಿ–7 ಎಂದು ಗುರುತಿಸಲಾಯಿತು. ತನಿಖೆ ಪೂರೈಸಿ ಸಂಬಂಧಪಟ್ಟ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಅರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಸದ್ರಿ ದೋಷರೋಪಣಾ ಪಟ್ಟಿ ,ಸಿ.ಸಿ ಸಂಖ್ಯೆ 3740/2008 ಎಂದು ನೊಂದಾಯಿಸಲ್ಪಟ್ಟಿರುತ್ತದೆ. ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಲು ದಿ:19–3–08 ರಂದು ಪ್ರಾಧಿಕಾರಕ್ಕೆ ವರದಿ ಮಾಡಿರುತ್ತೇನೆ ಅದನ್ನು ನಿಶಾನೆ ಪಿ–8 ಎಂದು,ಅದರ ಮೇಲಿನ ಸಹಿಯನ್ನು ನಿಶಾನೆ ಪಿ–8ಎ ಎಂದು ಗುರುತಿಸಲಾಯಿತು. ತನಿಖಾ ಸಮಯದಲ್ಲಿ ಪಡೆದ ವಾಹನ ಮೋಟಾರ್ ಸೈಕಲ್ ನ ಬಿ ವಹಿ ನಿಶಾನೆ ಪಿ–9 ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಶಾನೆ ಪಿ–9ಎ ಎಂದು ಗುರತಿಸಲಾಯಿತು. ನಾನು ತನಿಖೆಯ ಸಮಯದಲ್ಲಿ ವಶಪಡಿಸಿದ 2 ವಾಹನಗಳ ಸಮೇತ ಎಲ್ಲಾ ಸೊತ್ತುಗಳನ್ನು ಮತ್ತು ಆರೋಪಿಗಳನ್ನು ನೋಡಿದ್ದರೆ ಗುರುತಿಸಬಲ್ಲೇ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳುವರೇ ನಾನು ಪ್ರಾಧಿಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ಶ್ರೀ.ಎಂ.ಕೆ ಆಳ್ವ ವಕೀಲರು ಇವರ ಪಾಟೀ ಸವಾಲಿಗೆ ಉತ್ತರಿಸುತ್ತಾ ನನಗೆ ಆ ದಿನ ಸಂಜೆ 4 ಗಂಟೆಗೆ ತಕ್ಷೀರಿನ ಬಗ್ಗೆ ಮಾಹಿತಿ ತಲುಪಿರುತ್ತದೆ. ನಾನು ಗಸ್ತು ಕರ್ತವ್ಯದಲ್ಲಿದ್ದ ಸಂದರ್ಭ ತಕ್ಷೀರು ಮಾಹಿತಿ ನಮಗೆ ಸಿಕ್ಕಿರುತ್ತದೆ. ನಾವು ಆ ದಿವಸ ನಮ್ಮ ಕಛೇರಿಯಿಂದ ಗಸ್ತು ಕಾರ್ಯ ಬಗ್ಗೆ ಮಧ್ಯಾಹ್ನ 3 ಗಂಟೆಗೆ ಹೊರಟಿರುತ್ತೇವೆ, ಆ ದಿವಸ ನಾನು ಇಲಾಖಾ ವಾಹನದಲ್ಲಿ ಹೊರಟಿರುತ್ತೇವೆ. ನನ್ನೊಂದಿಗೆ ಆ ದಿವಸ 3–4 ಜನ ಕಛೇರಿ ಸಿಬ್ಬಂಧಿ ಇದ್ದರು. ತಕ್ಷೀರು ಸ್ಥಳದಲ್ಲಿ ಶೋಧಿಸಿದ ವಾಹನ ಹೊರತು ಇದರ ಪೂರ್ವದಲ್ಲಿ ಎರಡು ವಾಹನಗಳನ್ನು ಶೋಧಿಸಲಾಗಿರುತ್ತದೆ. ತಕ್ಷೀರು ಸ್ಥಳ ರಾಷ್ಟ್ರೀಯ ಹೆದ್ದಾರಿ 17ಕ್ಕೆ ಸಮೀಪವಾಗಿರುತ್ತದೆ. ಹಾಗೂ ಸದ್ರಿ ಹೆದ್ದಾರಿ ಯಲ್ಲಿ ವಾಹನ ಸಂಚಾರ ಹೆಚ್ಚಾಗಿರುತ್ತದೆ. ನಮ್ಮ ವಾಹನವನ್ನು ನಾವು ತಕ್ಷೀರು ಸ್ಥಳದಲ್ಲಿ ಕೇರಳದಿಂದ ಉಡುಪಿಗೆ ಹೋಗುವ ದಾರಿಯಲ್ಲಿ ಉಡುಪಿ ಕಡೆಗೆ ಮುಖ ಮಾಡಿ ನಿಲ್ಲಿಸಿರುತ್ತೇನೆ. ತಕ್ಷೀರು ಸ್ಥಳದಲ್ಲಿ ರಾ.ಹೆದ್ದಾರಿ ಯ ಅಕ್ಕ ಪಕ್ಕ ಹತ್ತಿರ ಯಾವುದೇ ವಾಸದ ಮನೆ, ಇತರ ಕಟ್ಟಡಗಳು ಇರುವುದಿಲ್ಲ ತಕ್ಷೀರು ಸ್ಥಳದಲ್ಲಿ ಪ್ರಥಮವಾಗಿ ದ್ವಿಚಕ್ರ ವಾಹನವನ್ನು ನಿಲ್ಲಿಸಿ ಶೋಧನೆ ಮಾಡಿದ ಸುಮಾರು 20 ನಿಮಿಷ ನಂತರ ಆ ಬೊಲೆರೋ ಜೀಪು ಸದ್ರಿ ಸ್ಥಳಕ್ಕೆ ಹಾದು ಬಂದಿರುತ್ತದೆ. ಸದ್ರಿ ಬಂದ ವಾಹನವನ್ನು ಪ್ರಥಮ ಬಾರಿಗೆ 20 ಮೀ ದೂರದಿಂದ ನೋಡಿರುತ್ತೇನೆ. ನಾನು ಮತ್ತು ನನ್ನೊಂದಿಗೆ ಇದ್ದ ಸಿಬ್ಬಂಧಿ ಕೂಡಿ ಸದ್ರಿ ವಾಹನ ನಿಲ್ಲುವ ಸೂಚನೆ ನೀಡಿರುತ್ತೇವೆ. ಸದ್ರಿ ವಾಹನ ಚಲಾಯಿಸುತ್ತಿದ್ದ ಚಾಲಕ ಮತ್ತು ಅದರಲ್ಲಿ ಇನ್ನೊರ್ವ ವ್ಯಕ್ತಿ ವಾಹನ ನಿಲ್ಲಿಸಿದ್ದ ಸಂದರ್ಭ ಓಡಲು ಪ್ರಯತ್ನಿಸಿರುವುದಿಲ್ಲ. ಸದ್ರಿ ವಾಹನದಲ್ಲಿ ಸಾಗಿಸಲಾಗುತ್ತಿದ್ದ ಅಕ್ರಮ ಮದ್ಯವನ್ನು ಶೋಧನೆಗಾಗಿ ನಾನು ಮತ್ತು ಸಿಬ್ಬಂಧಿಗಳು ಸೇರಿಕೊಂಡು ವಾಹನದಿಂದ ಕೆಳಗೆ ಇಳಿಸಿರುತ್ತೇನೆ. ಸದ್ರಿ ಅಕ್ರಮಗಳ ಸೊತ್ತುಗಳ ಪರಿಶೀಲನೆ ಮತ್ತು ಲೆಕ್ಕವನ್ನು ನಾವು ಸ್ದಳದಲ್ಲಿಯೇ ಮಾಡಿರುತ್ತೇವೆ. ಸದ್ರಿ ಅಕ್ರಮ ಸೊತ್ತುಗಳಿಂದ ತೆಗೆಯಲಾದ 70 ಮಾದರಿಗಳನ್ನು ಸೀಲು ಮಾಡಿ ಸ್ಥಳದಲ್ಲಿಯೇ ಅಪರಾಧ ಚೀಟಿ ತಯಾರಿಸಿ ಮಾದರಿಗಳ ಮೇಲೆ ಅಂಟಿಸಲಾಯಿತು. ಸದ್ರಿ ಅಕ್ರಮ ಸಾ.ಸ್ಯಾ ಗಳನ್ನು 6 ಪ್ಲಾಸ್ಟಿಕ್ ಗೋಣಿ ಚೀಲಗಳಲ್ಲಿ ತುಂಬಿಸಿಡಲಾಗಿರುತ್ತದೆ. ನಾವು ವಶಪಡಿಸಿಕೊಂಡ 6 ಗೋಣಿ ಚೀಲಗಳಿಗೆ ಪ್ರತ್ಯೇಕವಾಗಿ ಕ್ರಮ ಸಂಖ್ಯೆ ನೀಡಿರುವುದಿಲ್ಲ. ನಾವು ಸ್ಥಳದಲ್ಲಿಯೇ ತಯಾರಿಸಿದ ಮಹಜರಿನಲ್ಲಿ ತಕ್ಷೀರು ಸ್ಥಳದ ಚೆಕ್ ಬಂಧಿಯನ್ನು ನಮೂದಿಸಿರುವುದಿಲ್ಲ, ತಕ್ಷೀರು ಸ್ಥಳದಲ್ಲಿ ರವಿ ಶೆಟ್ಟಿ ಎಂಬ ಪಂಚರನ್ನು ಪಡೆದಿರುತ್ತೇನೆ. ತಕ್ಷೀರು ಸ್ಥಳದಲ್ಲಿ ಶೋಧನೆ ನಡೆಸಿದ್ದ ಸಂದರ್ಭದಲ್ಲಿ ಸುಮಾರು 10 ಜನ ಸೇರಿರುತ್ತಾರೆ. ತಕ್ಷೀರು ಸ್ದಳದ ದೂರದಲ್ಲಿರುವ ಬಬ್ಬು ಸ್ವಾಮಿ ದೇವಸ್ಥಾನ ಎಂಬ ಧಾರ್ಮಿಕ ಕ್ಷೇತ್ರಕ್ಕೆ ಹಲವಾರು ಭಕ್ತರು ಬಂದು ಹೋಗುತ್ತಾರೆ. ನಾವು ಒಬ್ಬರನ್ನು ಮಾತ್ರ ಪಂಚರನ್ನಾಗಿ ಬರಮಾಡಿಕೊಂಡಿರುತ್ತೇವೆ ಪಡೆದಿರುವ ಪಂಚ ಸಾಕ್ಷಿದಾರರಾದ ರವಿ ಶೆಟ್ಟಿ ಎಂಬವರು ನಮ್ಮ ಇಲಾಖಾ ಪ್ರಕರಣಗಳಲ್ಲಿ ಖಾಯಂ ಸಾಕ್ಷಿದಾರರೆಂದರೆ ಸರಿಯಲ್ಲ. ನಾವು

ತಕ್ಷೀರು ಸ್ಥಳದಲ್ಲಿ ಮಹಜರನ್ನು 4–15ರಿಂದ ಪ್ರಾರಂಭಿಸಿ 5–30ರವರೆಗೆ ಪೂರ್ಣಗೊಳಿಸಿರುತ್ತೇನೆ. ಸದ್ರಿ ಮಹಜರನ್ನು ನಮ್ಮ ಸಿಬ್ಬಂಧಿ ಸೈಯದ್ ಶಬೀರ್ ಅ.ರ ಇವರ ಬರಹದಿಂದ ತಯಾರಿಸಿರುತ್ತೇನೆ. ಪ್ರಕರಣದ ತನಿಖಾ ಸಂದರ್ಭ ಆರ್.ಸಿ ಮಾಲೀಕರ ಯಾವುದೇ ಹೇಳಿಕೆ ಪಡೆದಿರುವುದಿಲ್ಲ,ವಾಹನದ ಆರ್.ಸಿ ಮಾಲೀಕರು ಬೆಂಗಳೂರಿನಲ್ಲಿ ಕೆಲಸ ಮಾಡಿರುವ ಬಗ್ಗೆ ನಾನು ತಿಳಿದಿರುತ್ತೇನೆ. ಆರ್.ಸಿ. ಮಾಲೀಕರು ಈ ಅಪರಾಧಕ್ಕೆ ಸಂಬಂಧಿಸಿದ್ದಿಲ್ಲ ಎಂಬ ಬಗ್ಗೆ ಆರ್.ಸಿ ಮಾಲೀಕರು ನಮ್ಮಲ್ಲಿ ಯಾವುದೇ ದಾಖಲಾತಿ ಒಪ್ಪಿಸಿರುವುದಿಲ್ಲ. ನಾವು ಜಪ್ತುಪಡಿಸಿಕೊಂಡ ವಾಹನದಲ್ಲಿದ್ದ ಚಾಲಕ ಸದ್ರಿ ವಾಹನದ ಮಾಲೀಕರು ಈ ಅಕ್ರಮಕ್ಕೆ ಸಂಬಂಧಿಸಿರುವುದಾಗಿ ತಿಳಿಸಿರುತ್ತಾರೆ. ಸದ್ರಿ ವಾಹನದ ಮಾಲೀಕರು ಅವರೇ ಆಗಿರುವುದರಿಂದ ಆರ್.ಸಿ ಮಾಲೀಕರನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಿದ್ದೇನೆ. ವಾಹನವನ್ನು ಆರ್.ಸಿ ಮಾಲೀಕರ ತಂದೆ ತನ್ನ ಉಪಯೋಗಕ್ಕೆ ಬಳಸುತ್ತಿದ್ದ ವಿಷಯ ನನಗೆ ಗೊತಿಲ್ಲ. ದ್ವಿಚಕ್ರ ವಾಹನದ ಸವಾರ ಬೊಲೆರೋ ವಾಹನದಲ್ಲಿ ಅಕ್ರಮ ಸಾಗಾಣಿಕೆ ಬಗ್ಗೆ ಯಾವುದೇ ಮಾಹಿತಿ ಹೇಳಿಕೆ ನೀಡಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳನ್ನು ನಾನು ಕಛೇರಿಯಲ್ಲಿಯೇ ತಯಾರಿಸಿದ್ದು ಎಂದರೆ ಸರಿಯಲ್ಲ, ನಾನು ಆ ದಿವಸ ಅಪರಾಧ ಸ್ಥಳಕ್ಕೆ ಹೋಗಿದ್ದೆ ಇಲ್ಲ ಮತ್ತು ಜಪ್ತು ಪಡಿಸಿದ ವಾಹನಗಳನ್ನು ನಾನು ಜಪ್ತು ಪಡಿಸದೇ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ, ನಾನು ಈ ಮೊಕದ್ದಮೆಯನ್ನು ಇಲಾಖಾ ಅಂಕಿ ಅಂಶಗಳ ಪ್ರಗತಿಗಾಗಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ,ನಾನು ಜಪ್ತುಪಡಿಸಿದ ಬೊಲೆರೋ ವಾಹನದ ಮಾಲೀಕರಿಗೂ ,ತಕ್ಷೀರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸಿರುತ್ತಾರೆ.

ಡಿಡಬ್ಲೂ–1

ರಕ್ಷಣಾ ಪರ ಸಾಕ್ಷಿದಾರರಾದ ಶ್ರೀ.ಕಿರಣ್ ಹೆಚ್.ಶೆಟ್ಟಿ ಇವರು ದಿ:2–3–2010ರಂದು ಈ ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿ ನೀಡುತ್ತಾ ನಾನು ಶಿಲ್ಪ ಸ್ಟಾಕ್ ಬ್ರೋಕಿಂಗ್ ಪ್ರೈವೇಟ್ ಲಿ. ಕಂಪೆನಿಯ ಬೆಂಗಳೂರು ಡಿವಿಜನ್‌ನ ಮುಖ್ಯಸ್ಥನಾಗಿ ಕೆಲಸ ಮಾಡಿರುತ್ತೇನೆ. ನಾನು ಬೆಂಗಳೂರು ನಿವಾಸಿಯಾಗಿರುತ್ತೇನೆ. ನನ್ನ ತಂದೆ ತಾಯಿಯವರು ಮಂಗಳೂರಿನಲ್ಲಿ ವಾಸ ವಾಗಿರುತ್ತಾರೆ. ನಾನು KA-02-AB-1919 ಬೊಲೆರೋ ಮ್ಯಾಕ್ಸಿಕಾಬ್‌ನ ಮಾಲೀಕನಾಗಿರುತ್ತೇನೆ. 2004ನೇ ಇಸವಿಯಲ್ಲಿ ಸದ್ರಿ ವಾಹನವನ್ನು ನಾನು ಖರೀದಿಸಿರುತ್ತೇನೆ. ಸದ್ರಿ ವಾಹನವನ್ನು ಟ್ಯಾಕ್ಸಿ ಉದ್ದೇಶಕ್ಕಾಗಿ ಖರೀದಿಸಿರುತ್ತೇನೆ. ನಾನು ಕಾಲ್ ಸೆಂಟರಿಗಾಗಿ ಸದ್ರಿ ವಾಹನವನ್ನು ಖರೀದಿಸಿದ್ದು, 2004ನೇ ಇಸವಿ ಯಿಂದ 2006ರ ತನಕ ಬೆಂಗಳೂರಿನಲ್ಲಿ ಓಡಿಸುತ್ತಿದ್ದೆ. ಅದನ್ನು ಚಾಲಕ ನಡೆಸುತ್ತಿದ್ದನು. ಸದ್ರಿ ವಾಹನಕ್ಕೆ ಬೆಂಗಳೂರಿನಲ್ಲಿ ಸಾಕಷ್ಟು ಬಾಡಿಗೆ ದೊರೆಯದೇ ಇರುವ ಕಾರಣ ಅದನ್ನು ಊರಿಗೆ ಕಳುಹಿಸಿಕೊಟ್ಟು ಅಂದರೆ ಮಂಗಳೂರಿಗೆ ಕಳುಹಿಸಿಕೊಟ್ಟು ತಂದೆ ತಾಯಿಯವರ ಉಪಯೋಗಕ್ಕೆ ಹಾಗೂ ಮಂಗಳೂರಿನಲ್ಲಿ ಬಾಡಿಗೆಗೆ ಓಡಿಸುವ ಉದ್ದೇಶದಿಂದ ಕಳುಹಿಸಿ ಕೊಟ್ಟಿರುತ್ತೇನೆ. ಸದ್ರಿ ವಾಹನಕ್ಕೆ ಮಂಗಳೂರಿನಲ್ಲಿ ಚಾಲಕನ್ನಾಗಿ ಪ್ರಬಾಕರ ಶೆಟ್ಟಿ ಎಂಬವನ್ನು ನೇಮಿಸಿದ್ದು, ಸದ್ರಿ ಚಾಲಕನಲ್ಲಿ ವಾಹನವನ್ನು ಯಾವುದೇ ಅಕ್ರಮಗಳಿಗೆ ಬಳಸಬಾರದು ಎಂದು ಬರವಣಿಗೆಯಲ್ಲಿ ಹೇಳಿಕೆ ಪಡೆದುಕೊಂಡಿರುತ್ತೇನೆ.ವಾಹನ ಚಾಲಕನು ಅವನ ಪೂರ್ವಪರಗಳನ್ನು ವಿಚಾರಿಸಿ ಅವನು ಒಳ್ಳೆಯವನೆಂದು ತಿಳಿದು ನೇಮಕ ಮಾಡಿರುತ್ತೇನೆ. ಅವನಿಗೆ ದಿನವೊಂದಕ್ಕೆ 150/– ಸಂಬಳ ಕೊಡುತ್ತಿದ್ದೆ. 2006ನೇ ಇಸವಿಯಲ್ಲಿ ನಾನು ಚಾಲಕನನ್ನು ನೇಮಕ ಮಾಡಿದಾಗ ವಾಹನವನ್ನು ಯಾವುದೇ ಅವ್ಯವಹಾರಕ್ಕೆ ಉಪಯೋಗಿಸಬಾರದು ಎಂಬ ಮುಚ್ಚಳಿಕೆ ಪತ್ರವನ್ನು ಪಡೆದು ಕೊಂಡಿದ್ದು,ಅದನ್ನು ಈ ದಿವಸ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು,ಅದನ್ನು ನಿಶಾನೆ ಡಿ–1 ಎಂದು ಅದರಲ್ಲಿರುವ ಚಾಲಕನ ಸಹಿಯನ್ನು ನಿಸಾನೆ ಡಿ–1 ಎ ಎಂದು ಗುರುತಿಸಲಾಯಿತು. ವಾಹನವನ್ನು ಅಬಕಾರಿ ಕಾಯಿದೆಯಡಿ ಅಪರಾಧ ದಲ್ಲಿ ಜಪ್ತುಪಡಿಸಿಕೊಂಡ ಮರುದಿವಸ ನನ್ನ ತಂದೆಯವರು ವಿಷಯವನ್ನು ನನಗೆ ತಿಳಿಸಿದರು. ನಂತರ ನಾನು ಮಂಗಳೂರಿಗೆ ಬಂದು ವಿಚಾರಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ವಾಹನವನ್ನು ಈ ಕೃತ್ಯಕ್ಕೆ ಬಳಸಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ತಪ್ಪು ಮಾಡದೇ ನಿರ್ದೋಷಿಯಾಗಿರುವುದರಿಂದ ಸದ್ರಿ ವಾಹನದ ಬಗ್ಗೆ ದಾಖಲಾದ ಮೊಕದ್ದಮೆಯನ್ನು ಕೈಬಿಟ್ಟು ನನಗೆ ವಾಹನವನ್ನು ಬಿಟ್ಟುಕೊಡಬೇಕಾಗಿ ಕೋರುತ್ತೇನೆ. ಎಂದು ರಕ್ಷಣಾ ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು:– ರಕ್ಷಣಾ ಸಾಕ್ಷಿದಾರರನ್ನು ಅಭಿಯೋಗ ನಿರ್ದೇಶಕರು ಪಾಟೀ ಸವಾಲು ನಡೆಸಲಾಗಿ ಈ ವಾಹನ ಜಪ್ತಾದ ನಂತರ ವಾಹನದ ಮುಕ್ತೇರು ನಾಮೆಯನ್ನು ಮುತ್ತಣ್ಣ ಶೆಟ್ಟಿ ಎಂಬವರಿಗೆ ಬರೆದುಕೊಟ್ಟಿರುತ್ತೇನೆ. ಈ ಪ್ರಾಧಿಕಾರಕ್ಕೆ ಸದ್ರಿಯವರು ವಕಾಲತ್ತು ಹಾಗೂ ವಿವರಣೆ ಒಪ್ಪಿಸಿರುತ್ತಾರೆ, ಸದ್ರಿ ವಿವರಣೆಯಲ್ಲಿ ಚಾಲಕನಿಂದ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುವುದನ್ನು ತಿಳಿಸಿರುವುದಿಲ್ಲ. ಚಾಲಕನನ್ನಾಗಿ ನೇಮಿಸುವಾಗ ಒಪ್ಪಿಗೆ ಪತ್ರ ಬರೆಸಿಕೊಂಡಿರುತ್ತೇನೆ. ನಾನು ವಾಹನವನ್ನು ಸರಿಯಾಗಿ ಓಡಾಡುವ ಸ್ಥಿತಿಯಲ್ಲಿಟ್ಟಿರುತ್ತೇನೆ ಎಂದು ಬರೆದಿರುವುದು ವ್ಯಾಕರಣದಲ್ಲಿ ಸರಿಯಿಲ್ಲ, ಪ್ರಕರಣದ ನಂತರ ಈ ಕೇಸಿಗೆ ನನ್ನ ಅಭಿರಕ್ಷೆಗೆ ಸಹಾಯವಾಗುವ ರೀತಿಯಲ್ಲಿ ನಿಶಾನೆ ಡಿ–1ನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ, ನಿಶಾನೆ

ಡಿ–1 ಎ ಸಹಿ ಪ್ರಭಾಕರ ಶೆಟ್ಟಿ ಇವರದು ಅಲ್ಲ ಎಂದರೆ ಸರಿಯಲ್ಲ, ತಕ್ಷೀರು ಪತ್ತೆ ದಿನದಂದು ಸದ್ರಿ ವಾಹನದಲ್ಲಿ ಚಾಲಕ ಅಲ್ಲದೇ ಬೇರೆ ಯಾರೂ ಇದ್ದರು, ಅದರಲ್ಲಿ ಏನು ಸೊತ್ತು ಇತ್ತು ,ಎಲ್ಲಿಂದ ಎಲ್ಲಿಗೆ ಹೋಗುತ್ತಿತ್ತು ಅನ್ನುವ ವೈಯಕ್ತಿಕ ಮಾಹಿತಿ ನನಗೆ ತಿಳಿದಿರುವುದಿಲ್ಲ. ಸದ್ರಿ ವಾಹನವನ್ನು ಸರಿಯಾದ ರೀತ್ಯಾ ಬಳಸಿಕೊಂಡು ಮತ್ತು ವಾಹನದ ಚಾಲಕನಿಗೆ ಎಚ್ಚರಿಕೆ ವಹಿಸದೇ, ಯಾವುದೇ ನಿಗಾ ಈ ಕೇಸಿನಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಈ ವಾಹನಕ್ಕೆ ಸಂಬಂಧಿಸಿದ ಮುತ್ತಣ್ಣ ಶೆಟ್ಟಿ ಎಂಬವರಿಗೆ ಮುಕ್ತೇರುನಾಮೆ ಕೊಡಲು ನನಗೆ ಅಥವಾ ನನ್ನ ತಂದೆಗಾಗಲೀ ನ್ಯಾಯಾಲಯಕ್ಕೆ ಬರಲು ಪುರುಸೊತ್ತು ಇಲ್ಲದ ಕಾರಣವಾಗಿರುತ್ತದೆ. ಈ ವಾಹನದ ಮೇಲೆ ಸರಿಯಾದ ನಿಗಾ ವಹಿಸದೇ ಇರುವುದರಿಂದ ಸದ್ರಿ ವಾಹನದ ಮೇಲೆ ಸುಪರ್ದಿಗೆ ಬರಲಿಲ್ಲವೆಂದರೆ ಸರಿಯಲ್ಲ, ಪ್ರಭಾಕರ ಶೆಟ್ಟಿ ಎಂಬವನನ್ನು ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ವಿಚಾರಿಸಲು ನನಗೆ ಯಾವುದೇ ಅಭ್ಯಂತರವಿಲ್ಲ ಅಭಿಯೋಜಕರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ–1,2,3 ಹಾಗೂ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ಕೈಗೊಂಡು, ವಾದ ಮಂಡನೆಗಾಗಿ ರಕ್ಷಣಾ ಪರ ವಕೀಲರಿಗೆ ಕಾಲಾವಕಾಶ ನೀಡಿದ್ದರೂ ವಾದ ಮಂಡಿಸದೇ ಇರುವುದರಿಂದ ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿ ಮತ್ತು ಮಹಜರು ಸಾಕ್ಷಿದಾರರ ಹಾಗೂ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಿ:18–10–2007ರಂದು ಜಪ್ತು ಪಡಿಸಿರುವ GLX TVS Victor Bike No: KA-19-W-231 ಮತ್ತು ಮಹಿಂದ್ರ ಬೊಲೆರೋ ಸಂ:KA-02-AB-1919ರಲ್ಲಿ 100 ಎಂಎಲ್‌ನ 3075 ಸಾರಾಯಿ ಸ್ಯಾಚೇಟುಗಳನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು, ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ವಶಪಡಿಸಿಕೊಂಡಿದ್ದು, ಅಕ್ರಮ ಸಾರಾಯಿ ಸಾಗಾಣಿಕೆಗೆ GLX TVS Victor Bike No:KA-19-W-231 ಮತ್ತು ಮಹಿಂದ್ರ ಬೊಲೆರೋ ಸಂ:KA-02-AB-1919ನ್ನು ಬಳಸಿರುವುದು ಪ್ರಾಧಿಕಾರದ ಮುಂದೆ ವಿಚಾರಣೆಗೆ ಒಳಪಟ್ಟಿರುವ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕ ವಾಗಿ ಪರಿಗಣಿಸಲಾಗಿದೆ.

ಅಕ್ರಮ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಬೊಲೆರೋ ಜೀಪು ಸಂ: KA-02-AB-1919 ಇದರ ಮಾಲೀಕರು ಪ್ರಕರಣದಲ್ಲಿ ವಾಹನ ಜಪ್ತಾದ ತಕ್ಷಣದಲ್ಲಿ ವಾಹನದ ಮಧ್ಯಂತರ ಬಿಡುಗಡೆ ಬಗ್ಗೆ ಅರ್ಜಿ ಸಲ್ಲಿಸಿ ವಾಹನದ ಮಧ್ಯಂತರ ಬಿಡುಗಡೆಗೆ ಕೋರಿರುವರಾದರೂ ವಾಹನವನ್ನು ತನ್ನ ಗಮನಕ್ಕೆ ಬಾರದೇ ಅಕ್ರಮ ಸಾರಾಯಿ ಸಾಗಾಣಿಕೆಗೆ ಚಾಲಕನಿಂದ ಬಳಸಲಾಗಿತ್ತು ಎಂಬ ಬಗ್ಗೆ ಪುರಾವೆಗಳೊಂದಿಗೆ ಸಾಬೀತುಪಡಿಸಿರುವುದು ಕಂಡುಬರುವುದಿಲ್ಲ. ನಂತರದಲ್ಲಿ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೂ ವಾಹನದ ಮಾಲೀಕರು ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಿ ಉತ್ತರವನ್ನು ನೀಡುವ ಸೌಜನ್ಯತೆಯನ್ನು ಕೂಡಾ ತೋರ್ಪಡಿಸಿರುವುದಿಲ್ಲ. ರಕ್ಷಣಾ ಸಾಕ್ಷಿ ವೇಳೆಯಲ್ಲಿ ವಾಹನದ ಮಾಲೀಕರು ವಾಹನಕ್ಕೆ ಪ್ರಮಾಣಿಕನಾದ ವ್ಯಕ್ತಿಯನ್ನು ಚಾಲಕ ನನ್ನಾಗಿ ನೇಮಿಸಿ ಆತನಿಗೆ ಸದ್ರಿ ವಾಹನವನ್ನು ಯಾವುದೇ ಅಕ್ರಮ ಚಟುವಟಿಕೆಗಳಿಗೆ ಬಳಸಬಾರದು ಎಂಬಂತೆ ಮುಚ್ಚಳಿಕೆ ಪತ್ರವನ್ನು ಚಾಲಕನಿಂದ ಬರೆಸಿಕೊಂಡಿರುವ ಬಗ್ಗೆ ಹೇಳಿರುವರಾದರೂ ಹಾಗೂ ಈ ಬಗ್ಗೆ ಬರೆಸಿಕೊಂಡ ಮುಚ್ಚಳಿಕೆ ಪತ್ರವನ್ನು ಪ್ರಾಧಿಕಾರದ ಮುಂದೆ ನಿಶಾನೆ ಡಿ–1ರಂತೆ ಒಪ್ಪಿಸಿರುವರಾದರೂ, ಸದ್ರಿ ಮುಚ್ಚಳಿಕೆ ಪತ್ರದಂತೆ ಅಕ್ರಮ ಆದ ನಂತರದಲ್ಲಿ ಸದ್ರಿ ವಾಹನ ಚಾಲಕನು ವಾಹನವನ್ನು ಅಕ್ರಮ ಸಾರಾಯಿ ಸಾಗಾಟಕ್ಕೆ ಬಳಸಿರುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಮುಂದಾದ ಬಗ್ಗೆ ಪುರಾವೆ ದಾಖಲೆಗಳನ್ನು ಒದಗಿಸಿರುವುದಿಲ್ಲ. ಅಲ್ಲದೇ ಸದ್ರಿ ಪತ್ರವು ಕೇವಲ ಒಪ್ಪಿಗೆ ಪತ್ರವಾಗಿದ್ದು ಆರ್.ಸಿ ಮಾಲೀಕರು ತನ್ನ ಹೊಣೆಗಾರಿಕೆಯನ್ನು ತಪ್ಪಿಸಲು ಇಂತಹ ಪತ್ರವೊಂದನ್ನು ಅಪರಾಧ ಪತ್ತೆಯಾದ ನಂತರದಲ್ಲಿ ಬರೆಸಿಕೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದರಿಂದ ವಾಹನದ ಮಾಲೀಕರು ತನ್ನ ಅಪರಾಧವನ್ನು ಮರೆಮಾಚಿಕೊಳ್ಳುವ ಸಲುವಾಗಿ ಇಂತಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಒಪ್ಪಿಸಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಹಾಗೂ ವಾಹನದ ಮಾಲೀಕರು ವಾಹನದ ಬಗ್ಗೆ ತನ್ನ ನೈಜ ಜವಾಬ್ದಾರಿಕೆಯಿಂದ ನುಸುಳಿಕೊಂಡಿರುವುದು ಕೂಡಾ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಹಾಗೂ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಇನ್ನೊಂದು ವಾಹನ GLX TVS Victor Bike No: KA-19-W231 ಇದರ ನೊಂದಣಿ ಮಾಲೀಕರಿಗೆ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಸದ್ರಿಯವರಿಂದ ಯಾವುದೇ ಉತ್ತರ ಬಾರದೇ ಇರುವುದು ಹಾಗೂ ಸದ್ರಿ ವಾಹನವನ್ನು ನಡೆಸುತ್ತಿದ್ದ ವ್ಯಕ್ತಿಯೇ ವಾಹನದ ಮಾಲೀಕನಾಗಿದ್ದು ಪ್ರಕರಣದಲ್ಲಿ ಒಂದನೇ ಆರೋಪಿಯಾಗಿರುವುದು ಗಮನಾರ್ಹ ವಿಷಯವಾಗಿರುತ್ತದೆ. ಇದರಿಂದ ಸದ್ರಿ ಮೋಟಾರ್ ಬೈಕ್ ವಾಹನದ ಮಾಲೀಕ/ಚಾಲಕನು ಬೊಲೆರೋ ವಾಹನದ ಚಾಲಕನೊಂದಿಗೆ ಶಾಮೀಲಾಗಿ ಈ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಕಾರಣ ಈ ಅಕ್ರಮವು ವಾಹನದ ಮಾಲೀಕರ ಅಥವಾ ವಾಹನದ ಸುಪರ್ದಿ ಹೊಂದಿರುವವರ

ತಿಳುವಳಿಕೆಯಿಂದಲೇ ನಡೆದಿದೆ ಎಂಬುದು ಪ್ರಾಧಿಕಾರಕ್ಕೆ ಮನದಟ್ಟಾಗಿರುವುದರಿಂದ ಎರಡನೆಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಅಭಿಯೋಗದ ಪರ ಸಾಕ್ಷಿಗಳ ಹಾಗೂ ರಕ್ಷಣಾ ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಟಿ.ವಿ.ಎಸ್ ವಿಕ್ಟರ್ ಬೈಕ್ ಮತ್ತು ಬೊಲೆರೋ ಜೀಪನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ನಡೆಸಲಾದ ವಿಚಾರಣೆಯಲ್ಲಿ ಯೋಗ್ಯವೆಂದು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ GLX TVS Victor Bike No: KA-19-W-231 ಮತ್ತು ಬೊಲೆರೋ ಜೀಪು ಸಂ: KA-02-AB-1919 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲ0 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ಜಾರಿ ಮತ್ತು ತನಿಖೆ ಇವರ ತಕ್ಷೀರು ಸಂ:11/2007–08,ದಿ:18–10–2007 ರಲ್ಲಿ ಜಪ್ತುಪಡಿಸಿರುವ GLX TVS Victor Bike No: KA-19-W-231 (ಚಾಸೀಸ್ ನಂ:MD625DF4961N82977 ಮತ್ತು ಇಂಜಿನ್ ಸಂ:OF4N61203218) ನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಸಿ ಅಡಿಯಲ್ಲಿ ಮತ್ತು ಬೊಲೆರೋ ಜೀಪು ಸಂ: KA-02-AB-1919 ನ್ನು (ಚಾಸೀಸ್ ನಂ:MA1WL2DDC42E54023 ಮತ್ತು ಇಂಜಿನ್ ನಂ: DD44D 22109) ನ್ನು ನಿಯಮ 43 ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಪ್ರಾಧಿಕಾರದಿಂದ ದಿನಾಂಕ:29.02.2008ರಂದು ವಾಹನ ಬೊಲೆರೋ ಜೀಪು ಸಂಖ್ಯೆ: KA-02-AB-1919ನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಬೊಲೆರೋ ಜೀಪು ಸಂಖ್ಯೆ: KA-02-AB-1919ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉತ್ತರ ವಲಯ–1 ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ಸಿಂಡಿಕೇಟ್ ಬ್ಯಾಂಕ್, ಕೋಟೆಕಾರು ಶಾಖೆ, ಮಂಗಳೂರು ಇಲ್ಲಿಂದ ಬ್ಯಾಂಕ್ ಗ್ಯಾರಂಟಿ ಸಂಖ್ಯೆ:1/2008 ದಿನಾಂಕ:07.03.2008ರಂತೆ ಪಡೆದು ಸರ್ಕಾರದ ರೆವೆನ್ಯೂ ಖಾತೆಯಲ್ಲಿ ಇಡಲಾದ ಮೊತ್ತ ರೂ.2,25,000/– ವನ್ನು ಸರ್ಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ. ಈ ಆದೇಶದ ಪಾಲನೆ ಬಗ್ಗೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉತ್ತರ ವಲಯ–1 ಇವರು 30 ದಿನಗಳೊಳಗೆ ತನ್ನ ಸ್ವಾಧೀನಕ್ಕೆ ವಶಪಡಿಸಿಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 10–05–2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I : ಶ್ರೀ ಜಯಪ್ಪ ಲಮಾಣಿ, ಅಬಕಾರಿ ರಕ್ಷಕ
ಅಬಕಾರಿ ನಿರೀಕ್ಷಕರ ಕಛೇರಿ, ಬಂಟ್ವಾಳ ವಲಯ.

ಪ್ರಾ.ಸಾ–2 : ಶ್ರೀ . ಜ್ಞಾನದೇವ, ಅಬಕಾರಿ ರಕ್ಷಕ
ಮಂಗಳೂರು ಉತ್ತರ ವಲಯ–1

ಪ್ರಾ.ಸಾ–3 : ಶ್ರೀ.ವಿನೋದ್ ಕುಮಾರ್,
ಅಬಕಾರಿ ಉಪ ನಿರೀಕ್ಷಕರು, ಕಾರ್ಕಳ ವಲಯ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–I : ಮಹಜರು ಪ್ರತಿ

ನಿಶಾನೆ ಪಿ–Iಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–Iಬಿ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–2 : ರಸಾಯನಿಕ ವಿಶ್ಲೇಷಣೆಗಾಗಿ ಬರೆದ ಕೋರಿಕೆ ಪತ್ರ
ನಿಶಾನೆ ಪಿ–2ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–3 : ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–3ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–4 : ಪ್ರಥಮ ಮಾಹಿತಿ ವರದಿ
ನಿಶಾನೆ ಪಿ–4ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–5 : ಸೊತ್ತು ಪಟ್ಟಿ
ನಿಶಾನೆ ಪಿ–5 ಎ : ಅದರ ಮೇಲಿನ ಸಹಿ
ನಿಶಾನೆ ಪಿ–6 : ಬೊಲೆರೋ ಜೀಪು ಸಂ: KA-02-AB-1919 ಇದರ ಬಿ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ–7 : ಬೊಲೆರೋ ಜೀಪು ಸಂ: KA-02-AB-1919 ಇದರ ಮೌಲ್ಯ ಮಾಪನ ವರದಿ
ನಿಶಾನೆ ಪಿ–8 : ತನಿಖಾ ವರದಿ
ನಿಶಾನೆ ಪಿ–9 : GLX TVS Victor Bike No: KA-19-W-231 ಇದರ ಬಿ ಎಕ್ಸ್ ಟ್ರಾಕ್ಟ್ ವರದಿ.

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಡಿಡಬ್ಲ್ಯೂ–1 : ಶ್ರೀ.ಹೆಚ್.ಕಿರಣ್ ಶೆಟ್ಟಿ, ಹೌಸ್ ನಂ:212 ಶೆಟ್ಟಿ ಕಂಪೌಂಡ್, ಕೆ.ಸಿ.ರೋಡ್, ಸೋಮೇಶ್ವರ ಉಚ್ಚಿಲ, ಮಂಗಳೂರು ತಾಲ್ಲೂಕು.

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :–

ವಾಹನದ ಮಾಲೀಕರು ಚಾಲಕನಿಂದ ಪಡೆದಿರುವ ಒಪ್ಪಿಗೆ ಪತ್ರ

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.951

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ ವಿಭಾಗ, ಭದ್ರಾವತಿ.

ಅಧಿಸೂಚನೆ

ಸಂಖ್ಯೆ: ಎ3–ಸಿಓಎನ್–ಸಿಆರ್–2/2010–11, ದಿನಾಂಕ:5ನೇ ಜೂನ್, 2010

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಅಪರಾಧ ಪ್ರಕರಣ ಸಂಬಂಧ ಕೆಳಕಂಡ ವಾಹನವನ್ನು ತರೀಕೆರೆ ಮತ್ತು ಶಾಂತಿಸಾಗರ ವಲಯದ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್–71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ಕ್ರ. ಸಂ.	ವಲಯ	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1	ತರೀಕೆರೆ	31/2009–10 ದಿನಾಂಕ:10.06.2009	ಸುಜುಕಿ ಮ್ಯಾಕ್ಸ್ ಬೈಕ್ ಕೆಎ–18–ಹೆಚ್–3919	–	–
2	“	45/2009–10 ದಿನಾಂಕ:20.07.2009	ಲಗೇಜ್ ಆಟೋ ಸಂ:ಕೆಎ–18–ಹೆಚ್–9560	R6BO218099	MAILM2FHJ6 3C81688

ಕ್ರ. ಸಂ.	ವಲಯ	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
3	"	119/2009–10 ದಿನಾಂಕ:17.02.2010	ಟಿ.ವಿ.ಎಕ್ಸ್‌ಲ್ ಬೈಕ್ ಸಂ:ಕೆಎ–18–ಜೆ–4681	P1009M330805	P3009F333877
4.	ಲಕ್ಕವಳ್ಳಿ	31/2009–10 ದಿನಾಂಕ:18.02.2010	ಸುಜುಕಿ ಮೋಟಾರ್ ಬೈಕ್ ಎಂ.ಹೆಚ್.02–ಎ–5101	19250270	-
5.	ಉಂಬ್ಳೇಬೈಲು	100/2009–10 ದಿನಾಂಕ:22.02.2010	ಮಾರುತಿ ಓಮಿನಿ ವ್ಯಾನ್ ಎಂ.ಹೆಚ್.–12–ವೈಎ–1091	281093	ST91IN-265989
6.	ಭದ್ರಾವತಿ	81/2009–10 08.12.2009	ಓವಿಎಸ್ ವಿಕ್ಟರ್ ಕೆಎ–04–ಇಡಿ–1017	N3208M174413	N3208F173271
7.	ನ್ಯೂ ಟೌನ್ ಪೋಲಿಸ್ ಠಾಣೆ, ಭದ್ರಾವತಿ.	ಕ್ರೈಂ ನಂ.17/2010 ದಿನಾಂಕ:21.01.2010	ಟಾಟಾ ಇಂಡಿಕಾ ಕಾರು ಸಂಖ್ಯೆ:ಕೆಎ–13–9865	-	600137KUZPO7466

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾದ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಎಸ್.ಎಸ್. ಲಿಂಗರಾಜ

ಪಿ.ಆರ್.910

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ
ಭದ್ರಾವತಿ ವಿಭಾಗ, ಭದ್ರಾವತಿ

ಸಂಖ್ಯೆ:ಎ3–ಎಫ್.ಓ.ಸಿ.ಸಿ.ಓ.ಎನ್–ಸಿಆರ್ 9/2009–10, ದಿನಾಂಕ:3ನೇ ಜೂನ್, 2010

ವಿಷಯ: ಅಕ್ರಮ ಅರಣ್ಯ ಉತ್ಪನ್ನ ಕಳ್ಳ ಸಾಗಣಿಕೆ ಸಂಬಂಧ ಮಾರುತಿ ಓಮಿನಿ ವ್ಯಾನ್ ಸಂ:ಕೆಎ–17–ಎಂ–793ನ್ನು ವಶಪಡಿಸಿಕೊಂಡ ಬಗ್ಗೆ.

ಉಲ್ಲೇಖ: 1. ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯ, ತರೀಕೆರೆ ರವರ ಪ್ರಥಮ ಮಾಹಿತಿ ವರದಿ ಸಂ: 037999 ದಿನಾಂಕ: 01–07–2009.

2. ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯ, ತರೀಕೆರೆ ಇವರ ಪತ್ರ ಸಂ:263/2009–10 ದಿನಾಂಕ: 03–07–2009

3. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಬರೆದ ಪತ್ರದ ಸಮ ಸಂಖ್ಯೆ ದಿನಾಂಕ: 15–07–2009.

4. ಅಧಿಕಾರಿಯುತ ಅಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಪ್ರಕಟಣೆ ಸಮ ಸಂಖ್ಯೆ ದಿನಾಂಕ:24–03–2010ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 15–04–2010 ರಂದು ಪ್ರಕಟಿಸಲಾಗಿದೆ.

ಪ್ರಕಟಣೆಯ ಹಿನ್ನೆಲೆ:

ದಿನಾಂಕ:01–07–2009 ರಂದು ಲಿಂಗದಹಳ್ಳಿ ಶಾಖೆ ವನಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಸಂತವೇರಿಕಡೆಯಿಂದ ತರೀಕೆರೆ ಕಡೆಗೆ ತುರ್ತು ವರ್ತಮಾನ ನಿಮಿತ್ತ ಬರುವಾಗ ತರೀಕೆರೆ ಟೌನ್ ಬಳಿಯ ಸುಂದರೇಶ್ ನಗರ, ಗಾಳಿಹಳ್ಳಿ ಕ್ರಾಸ್ ಬಳಿ 7 ಬೀಟೆ ಸೈಜುಗಳನ್ನು ಅಕ್ರಮವಾಗಿ ಸಾಗಾಣಿಕೆಗೆ ಮಾಡುತ್ತಿದ್ದ ಓಮಿನಿ ವ್ಯಾನ್ ಸಂಖ್ಯೆ ಕೆಎ–17–ಎಂ–793 ನ್ನು ವಶಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಅರಣ್ಯ ಮೊಕದ್ದಮೆ ಸಂಖ್ಯೆ: 37/2009–10 ನ್ನು ದಾಖಲು ಮಾಡಿರುತ್ತಾರೆ. ಈ ಕಛೇರಿ ನ್ಯಾಯಾಲಯ ಸಮಕ್ಷಮ ಹಾಜರುಪಡಿಸಿ ಪ್ರಕರಣವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24(ಇ),50,62 104(ಎ), 71(ಎ) ಹಾಗೂ ನಿಯಮ 1969 ಸೆಕ್ಷನ್ 144, 165 ರಂತೆ ಕ್ರಮ ಜರುಗಿಸಲು ದಾಖಲಾತಿಗಳನ್ನು ಒಪ್ಪಿಸಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸಿ ವಲಯ ಅರಣ್ಯಾಧಿಕಾರಿ, ತರೀಕೆರೆ ನಾಟಾ ಸಂಗ್ರಹಾಲಯ ಇವರ ವಶಕ್ಕೆ ಸುರಕ್ಷತೆಗೆ ಕೊಡಲಾಗಿದೆ. ಸದರಿ ವಾಹನವನ್ನು ಬಿಡುಗಡೆಗೆ ಕೋರಿ ಈ ಕಛೇರಿ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಉಲ್ಲೇಖ ಪತ್ರ 3 ರಲ್ಲಿ ವಾಹನದ ಮಾಲೀಕರ ವಿಳಾಸ ಹಾಗೂ ವಾಹನದ ವಿವರವುಳ್ಳ 'ಬಿ' ವಹಿಯನ್ನು ಒಪ್ಪಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಪತ್ರ ಬರೆದಿರುತ್ತದೆ. ಈ ಬಗ್ಗೆ ವಾಹನದ ವಿವರವುಳ್ಳ ಬಿ ವಹಿಯನ್ನು ದಿನಾಂಕ: 12–08–2009 ರಂದು ಕಳುಹಿಸಿರುತ್ತಾರೆ. ಬಿ ವಹಿಯಲ್ಲಿ ವಾಹನದ ಮಾಲೀಕರು ಶ್ರೀ ಟಿ.ಹೆಚ್. ಕರಿಬಸವರಾಜ್ ಬಿನ್ ಹಂಪಣ್ಣ, ವಿನೋಬನಗರ, ದಾವಣಗೆರೆ ಎಂದು ಕಂಡುಬಂದಿದ್ದು ವಾಹನದ ಮಾಲೀಕರಿಗೆ ಅರಣ್ಯ ಕಾಯ್ದೆ 71 ಬಿ ಪ್ರಕಾರ ಕಾರಣ ಕೇಳಿ ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತದೆ. ವಾಹನದ ಮಾಲೀಕರು ವಾಹನವನ್ನು ದಿನಾಂಕ: 30–09–1994 ರಂದು ಕೆ. ಸುರೇಶ ಬಿನ್ ಎ. ಕೃಷ್ಣನ್, ಬೆಂಗಳೂರು ಇವರಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುವುದಾಗಿ ತಿಳಿಸಿ ಅದರ ನಕಲನ್ನು ಲಗತ್ತಿಸಿ ಕಳುಹಿಸಿರುತ್ತಾರೆ. ಈ ಬಗ್ಗೆ ಶ್ರೀ ಕೆ. ಸುರೇಶ ಬಿನ್ ಕೃಷ್ಣನ್ ಇವರಿಗೆ ದಿನಾಂಕ: 09–09–2009 ರಂದು ನೊಂದಾಯಿತ ಅಂಚೆ ಮೂಲಕ ನೋಟೀಸ್ ನೀಡಿರುತ್ತದೆ. ವಾಹನದ ಮಾಲೀಕರು ನೋಟೀಸ್ ಪಡೆಯದೇ ವಾಪಸ್ಸು ಬಂದಿರುತ್ತದೆ. ಸದರಿ ವಾಹನಕ್ಕೆ ಸಂಬಂಧಿಸಿದ ವಾರಸುದಾರರು ಲಿಖಿತವಾಗಿ ಅಥವಾ ಖುದ್ದಾಗಿ ಸಮಜಾಯಿಸಿಯನ್ನು ದಾಖಲಾತಿಗಳೊಂದಿಗೆ ನೀಡದೇ ಇದ್ದುದರಿಂದ ಕರ್ನಾಟಕ ಅರಣ್ಯ ಕಾಯಿದೆ 71(ಎ) ಪ್ರಕಾರ 30 ದಿನಗಳ ಕಾಲಾವಾಕಾಶ ನೀಡಿ ಯಾರಾದರೂ ವಾರಸುದಾರರು ಇದ್ದರೆ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳ ಸಮೇತ ಹಕ್ಕುಬಾದ್ಯತೆಗಳನ್ನು ಈ ಕೆಳಗೆ ಸಹಿ ಮಾಡಿದವರ ಮುಂದೆ ಖುದ್ದಾಗಿಯಾಗಲೀ ಅಥವಾ ನ್ಯಾಯಾವಾದಿಗಳವರ ಮುಖಾಂತರವಾಗಲೀ ಹಾಜರು ಪಡಿಸುವುದಕ್ಕೆ ಹಾಗೂ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಸಂಬಂಧದಲ್ಲಿ ವಾಹನವನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ತಿಳುವಳಿಕೆ ಪತ್ರವನ್ನು ಕರ್ನಾಟಕ ರಾಜ್ಯ ಪತ್ರ ದಿ: 15–04–2010 ರಂದು ಪ್ರಚಾರ ಪಡಿಸಿ ಪ್ರಕಟಿಸಲಾಗಿದೆ.

ಪ್ರಕಟಣೆಯಂತೆ 30 ದಿನಗಳು ದಿನಾಂಕ: 14–05–2010 ಕ್ಕೆ ಮುಕ್ತಾಯಗೊಂಡಿದ್ದು, ವಾಹನದ ಬಗ್ಗೆ ಯಾವ ವಾರಸುದಾರರೂ ತಮ್ಮ ಮಾಲೀಕತ್ವವನ್ನು ದೃಡಪಡಿಸಿ ವಾಹನವನ್ನು ತಮ್ಮ ವಶಕ್ಕೆ ಕೋರಿಕೊಳ್ಳದೆ ಇದ್ದುದರಿಂದ ಸದರಿ ವಾಹನವನ್ನು ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ಉಪಯೋಗಿಸಿರುವುದು ಸ್ಪಷ್ಟವಾಗಿರುತ್ತದೆ.

ಈ ಮೊಕದ್ದಮೆಯಲ್ಲಿ ಸಾಕಷ್ಟು ಕಾಲವಕಾಶವನ್ನು ಕೊಟ್ಟರೂ ಸಹ ಮಾಲೀಕರು ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಮುಂದೆ ಬಂದು ವಾಹನದ ಮಾಲೀಕತ್ವದ ಬಗ್ಗೆ ಮೂಲ ದಾಖಲಾತಿಗಳನ್ನು ಹಾಜರು ಪಡಿಸಿ, ತಾವು ತಪ್ಪಿತಸ್ಥರಲ್ಲವೆಂಬುದನ್ನು ಸಾಬೀತು ಪಡಿಸಿರುವುದಿಲ್ಲವಾದ ಕಾರಣ ಮೇಲ್ಕಂಡ ವಾಹನವನ್ನು ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತೇನೆ.

ಆದೇಶ

ಮೇಲ್ಕಂಡ ವಿದ್ಯಾಮಾನಗಳನುಸಾರವಾಗಿ ಶ್ರೀ ಎಸ್.ಎಸ್. ಲಿಂಗರಾಜ,ಭಾ.ಅ.ಸೇ., ಅಧಿಕಾರಿಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ಆದ ನಾನು ಅರಣ್ಯ ಕಾಯಿದೆ 1963 ನಿಯಮ 71 ಎ(2)ರ ತಿದ್ದುಪಡಿ ಪ್ರಕಾರ ಓಮಿನಿ ವ್ಯಾನ್ ಸಂಖ್ಯೆ ಕೆಎ–17–ಎಂ–793 (ಛಾಸಿ ಸಂ: ST91IN938371 ಯಂತ್ರದ ಸಂ: S46655 ಹಾಗೂ ಬೀಟೆ ಸೈಜು 7=0.224 ಎಂ3ನ್ನು ಸರ್ಕಾರದ ಪರ ಮುಟ್ಟುಗೋಲು ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ದಿನಾಂಕ: 03–06–2010 ರಂದು ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ಹೊರಡಿಸಿರುತ್ತೇನೆ.

ಎಸ್.ಎಸ್. ಲಿಂಗರಾಜ

ಅಧಿಕಾರಿಯುತ ಅಧಿಕಾರಿ ಹಾಗೂ

ಪಿ.ಆರ್.936 ಉಪ ಅರಣ್ಯ ಸಂರಕ್ಷಣಾಧಿಕಾರಿ

ಭದ್ರಾವತಿ ವಿಭಾಗ, ಭದ್ರಾವತಿ.

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ

ಭದ್ರಾವತಿ ವಿಭಾಗ, ಭದ್ರಾವತಿ

ಸಂಖ್ಯೆ:ಎ3–ಎಫ್.ಓ.ಸಿ.ಸಿ.ಓ.ಎನ್–ಸಿಆರ್ 29/2009–10, ದಿನಾಂಕ:3ನೇ ಜೂನ್, 2010

ವಿಷಯ:ಅಕ್ರಮ ಅರಣ್ಯ ಉತ್ಪನ್ನ ಕಳ್ಳ ಸಾಗಣಿಕೆ ಸಂಬಂಧ ಬಜಾಜ್ ಎಂ.80 ಕೆಎ–18–ಇ–3583 ನ್ನು ವಶಪಡಿಸಿಕೊಂಡ ಬಗ್ಗೆ.

ಉಲ್ಲೇಖ: 1. ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯ, ತರೀಕೆರೆ ರವರ ಪ್ರಥಮ ಮಾಹಿತಿ ವರದಿ ಸಂ: 144732 ದಿನಾಂಕ: 05–12–2009

2. ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯ, ತರೀಕೆರೆ ಇವರ ಪತ್ರ ಸಂ:898/2009–10 ದಿನಾಂಕ: 07–12–2009
3. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಬರೆದ ಪತ್ರದ ಸಮ ಸಂಖ್ಯೆ ದಿನಾಂಕ: 17–12–2009 ಮತ್ತು 25–1–2010.
4. ಅಧಿಕಾರಿಯುತ ಅಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಪ್ರಕಟಣೆ ಸಮ ಸಂಖ್ಯೆ ದಿನಾಂಕ:24–03–2010ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 15–04–2010 ರಂದು ಪ್ರಕಟಿಸಲಾಗಿದೆ.

ಪ್ರಕಟಣೆಯ ಹಿನ್ನೆಲೆ:

ದಿನಾಂಕ: 05–12–2009 ರಂದು ತರೀಕೆರೆ ವಲಯದ ನಗರ ತನಿಖಾ ಶಾಖೆ ವನಪಾಲಕರು ಮತ್ತು ಸಿಬ್ಬಂದಿ ವರ್ಗದವರು ತರೀಕೆರೆ ನಗರ ಹಿರೋಹೊಂಡಾ ಶೋರೂಂ ಹಿಂಭಾಗದ ರೈಲ್ವೆ ಹಳಿ ಬಳಿ ದ್ವಿ ಚಕ್ರ ವಾಹನ ಬಜಾಜ್ ಎಂ.80 ಸಂಖ್ಯೆ:ಕೆಎ–18–ಇ–3583 ರಲ್ಲಿ ಅಕ್ರಮವಾಗಿ ಬೀಟೆ ತುಂಡುಗಳು 2, ಸಾಗುವಾನಿ ತುಂಡುಗಳು 2 ಒಟ್ಟು 4=0.044 ಎಂ3.ನ್ನು ವಶಪಡಿಸಿಕೊಂಡು ಸ್ಥಳದಲ್ಲೇ ಪಂಚನಾಮೆ ಜರುಗಿಸಿ ಅರಣ್ಯ ಮೊಕದ್ದಮೆ ಸಂಖ್ಯೆ: 98/2009–10 ನ್ನು ದಾಖಲು ಮಾಡಿರುತ್ತಾರೆ. ವಾಹನ ಹಾಗೂ ಅರಣ್ಯ ಉತ್ಪನ್ನವನ್ನು ದಾಖಲಾತಿಗಳ ಸಮೇತ ಈ ಕಛೇರಿ ನ್ಯಾಯಾಲಯ ಸಮಕ್ಷಮ ಹಾಜರುಪಡಿಸಿ ಪ್ರಕರಣವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ನಿಯಮ 50,62,80,104(ಎ) ಹಾಗೂ 71(ಎ) ಹಾಗೂ ಅರಣ್ಯ ಕಾನೂನು 1969 ನಿಯಮ 144, 165 ರಂತೆ ಕ್ರಮ ಜರುಗಿಸಲು ಕೋರಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸಿ ವಲಯ ಅರಣ್ಯಾಧಿಕಾರಿ, ತರೀಕೆರೆ ನಾಟಾ ಸಂಗ್ರಹಾಲಯ ಇವರ ವಶಕ್ಕೆ ಸುರಕ್ಷತೆಗೆ ಕೊಡಲಾಗಿದೆ. ಸದರಿ ವಾಹನವನ್ನು ಬಿಡುಗಡೆಗೆ ಕೋರಿ ಈ ಕಛೇರಿ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಉಲ್ಲೇಖ ಪತ್ರ 3 ರಲ್ಲಿ ವಾಹನದ ಮಾಲೀಕರ ವಿಳಾಸ ಹಾಗೂ ವಾಹನದ ವಿವರವುಳ್ಳ 'ಬಿ' ವಹಿಯನ್ನು ಒಪ್ಪಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಪತ್ರ ಬರೆದಿರುತ್ತದೆ. ಈ ಬಗ್ಗೆ ವಾಹನದ ವಿವರವುಳ್ಳ ಬಿ ವಹಿಯನ್ನು ದಿನಾಂಕ: 09–02–2010 ರಂದು ಕಳುಹಿಸಿರುತ್ತಾರೆ. ಬಿ.ವಹಿಯಲ್ಲಿ ವಾಹನದ ಮಾಲೀಕರು ಶ್ರೀ ಕೆ.ಆರ್. ಲೋಕೇಶಪ್ಪ ಬಿನ್ ರುದ್ರಪ್ಪ, ತರೀಕೆರೆ ತಾಲ್ಲೂಕು ವಾಸಿ ಎಂದು ಕಂಡುಬಂದಿದ್ದು, ವಾಹನ ಮಾಲೀಕರಿಗೆ 71 (ಬಿ) ಪ್ರಕಾರ ಕಾರಣ ಕೇಳಿ ಪತ್ರವನ್ನು ಕಳುಹಿಸಿರುತ್ತದೆ. ವಾಹನದ ಮಾಲೀಕರು ದಿನಾಂಕ: 20–02–2010 ರಂದು ಸಮಜಾಯಿಸಿ ನೀಡಿ ಮೇಲ್ಕಂಡ ವಾಹನವನ್ನು ಸಫೀವುಲ್ಲಾ ಬಿನ್ ಅಹಮದ್ ಸಾಬ್, ಕೋಡಿಕ್ಯಾಂಪ್, ತರೀಕೆರೆ ಇವರಿಗೆ ಮಾರಾಟ ಮಾಡಿರುತ್ತೇನೆ ಎಂಬ ಸೇಲ್ ಅಗ್ರಿಮೆಂಟ್ ಪ್ರತಿಯನ್ನು ಒಪ್ಪಿಸಿರುತ್ತಾರೆ. ಸದರಿ ವಾಹನಕ್ಕೆ ಸಂಬಂಧಿಸಿದಂತೆ ಬೇರೆ ಯಾರು ವಾರಸುದಾರರು ಲಿಖಿತವಾಗಿ ಅಥವಾ ಖುದ್ದಾಗಿ ಸಮಜಾಯಿಸಿಯನ್ನು ದಾಖಲಾತಿಗಳೊಂದಿಗೆ ನೀಡದೇ ಇದ್ದುದರಿಂದ ಕರ್ನಾಟಕ ಅರಣ್ಯ ಕಾಯಿದೆ 71(ಎ) ಪ್ರಕಾರ 30 ದಿನಗಳ ಕಾಲಾವಕಾಶ ನೀಡಿ ಯಾರಾದರೂ ವಾರಸುದಾರರು ಇದ್ದರೆ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳ ಸಮೇತ ಹಕ್ಕುಬಾಧ್ಯತೆಗಳನ್ನು ಈ ಕೆಳಗೆ ಸಹಿ ಮಾಡಿದವರ ಮುಂದೆ ಖುದ್ದಾಗಿಯಾಗಲೀ ಅಥವಾ ನ್ಯಾಯಾವಾದಿಗಳವರ ಮುಖಾಂತರವಾಗಲೀ ಹಾಜರು ಪಡಿಸುವುದಕ್ಕೆ ಹಾಗೂ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಸಂಬಂಧದಲ್ಲಿ

ವಾಹನವನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ತಿಳುವಳಿಕೆ ಪತ್ರವನ್ನು ಕರ್ನಾಟಕ ರಾಜ್ಯ ಪತ್ರ ದಿ: 15–04–2010 ರಂದು ಪ್ರಚಾರ ಪಡಿಸಿ ಪ್ರಕಟಿಸಲಾಗಿದೆ.

ಪ್ರಕಟಣೆಯಂತೆ 30 ದಿನಗಳು ದಿನಾಂಕ: 14–05–2010 ಕ್ಕೆ ಮುಕ್ತಾಯಗೊಂಡಿದ್ದು, ವಾಹನದ ಬಗ್ಗೆ ಯಾವ ವಾರಸುದಾರರೂ ತಮ್ಮ ಮಾಲೀಕತ್ವವನ್ನು ದೃಡಪಡಿಸಿ ವಾಹನವನ್ನು ತಮ್ಮ ವಶಕ್ಕೆ ಕೋರಿಕೊಳ್ಳದೆ ಇದ್ದುದರಿಂದ ಸದರಿ ವಾಹನವನ್ನು ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ಉಪಯೋಗಿಸಿರುವುದು ಸ್ಪಷ್ಟವಾಗಿರುತ್ತದೆ.

ಈ ಮೊಕದ್ದಮೆಯಲ್ಲಿ ಸಾಕಷ್ಟು ಕಾಲವಕಾಶವನ್ನು ಕೊಟ್ಟರೂ ಸಹ ಮಾಲೀಕರು ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಮುಂದೆ ಬಂದು ವಾಹನದ ಮಾಲೀಕತ್ವದ ಬಗ್ಗೆ ಮೂಲ ದಾಖಲಾತಿಗಳನ್ನು ಹಾಜರು ಪಡಿಸಿ, ತಾವು ತಪ್ಪಿತಸ್ಥರಲ್ಲವೆಂಬುದನ್ನು ಸಾಬೀತು ಪಡಿಸಿರುವುದಿಲ್ಲವಾದ ಕಾರಣ ಮೇಲ್ಕಂಡ ವಾಹನವನ್ನು ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತೇನೆ.

ಆದೇಶ

ಮೇಲ್ಕಂಡ ವಿದ್ಯಾಮಾನಗಳನುಸಾರವಾಗಿ ಶ್ರೀ ಎಸ್.ಎಸ್. ಲಿಂಗರಾಜ,ಭಾ.ಅ.ಸೇ., ಅಧಿಕಾರಿಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ಆದ ನಾನು ಅರಣ್ಯ ಕಾಯಿದೆ 1963 ನಿಯಮ 71 ಎ(2)ರ ತಿದ್ದುಪಡಿ ಪ್ರಕಾರ ಬಜಾಜ್ ಎಂ.80 ಸಂಖ್ಯೆ:ಕೆಎ–18–ಇ–3583 (ಛಾಸಿ ಸಂ:C16EA190335 ಯಂತ್ರದ ಸಂ: E16EA190561 ಹಾಗೂ ಬೀಟೆ ತುಂಡುಗಳು 2, ಸಾಗುವಾನಿ ತುಂಡುಗಳು 2 ಒಟ್ಟು 4=0.044 ಎಂ3.ನ್ನು ಸರ್ಕಾರದ ಪರ ಮುಟ್ಟುಗೋಲು ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ದಿನಾಂಕ: 03–06–2010 ರಂದು ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ಹೊರಡಿಸಿರುತ್ತೇನೆ.

ಎಸ್.ಎಸ್. ಲಿಂಗರಾಜ
ಅಧಿಕಾರಿಯುತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಭದ್ರಾವತಿ ವಿಭಾಗ, ಭದ್ರಾವತಿ.

ಪಿ.ಆರ್.937

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ
ಭದ್ರಾವತಿ ವಿಭಾಗ, ಭದ್ರಾವತಿ

ಸಂಖ್ಯೆ:ಎ3–ಎಫ್.ಓ.ಸಿ.ಸಿ.ಓ.ಎನ್–ಸಿಆರ್ 26/2009–10, ದಿನಾಂಕ:3ನೇ ಜೂನ್, 2010

ವಿಷಯ: ಅಕ್ರಮ ಅರಣ್ಯ ಉತ್ಪನ್ನ ಕಳ್ಳ ಸಾಗಣಿಕೆ ಸಂಬಂಧ ಟಿ.ವಿ.ಎಸ್.ವಿಕ್ಟರ್ ಮೋಟಾರ್ ಸೈಕಲ್ ಸಂ:ಕೆಎ–25–ಎಸ್–79 ನ್ನು ವಶಪಡಿಸಿಕೊಂಡ ಬಗ್ಗೆ.

ಉಲ್ಲೇಖ: 1. ವಲಯ ಅರಣ್ಯಾಧಿಕಾರಿ, ಶಾಂತಿಸಾಗರ ವಲಯ, ನಲ್ಲೂರು ರವರ ಪ್ರಥಮ ಮಾಹಿತಿ ವರದಿ ಸಂ: 144161 ದಿನಾಂಕ: 25–10–2009.

2. ವಲಯ ಅರಣ್ಯಾಧಿಕಾರಿ, ಶಾಂತಿಸಾಗರ ವಲಯ, ನಲ್ಲೂರು ಇವರ ಪತ್ರ ಸಂ:144161/2009–10 ದಿನಾಂಕ: 25–10–2009.
3. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹಾವೇರಿ ಇವರಿಗೆ ಬರೆದ ಪತ್ರದ ಸಮ ಸಂಖ್ಯೆ ದಿನಾಂಕ: 07–11–2009. ಮತ್ತು 25–01–2010.
4. ಅಧಿಕಾರಿಯುತ ಅಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಪ್ರಕಟಣೆ ಸಮ ಸಂಖ್ಯೆ ದಿನಾಂಕ:24–03–2010ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 15–04–2010 ರಂದು ಪ್ರಕಟಿಸಲಾಗಿದೆ.

ಪ್ರಕಟಣೆಯ ಹಿನ್ನೆಲೆ:

ದಿನಾಂಕ: 25–10–2009 ರಂದು ವನಪಾಲಕ, ಶಾಂತಿಸಾಗರ ವಲಯ ಹಾಗೂ ಸಿಬ್ಬಂದಿ ವರ್ಗದವರು ಮಾಡಾಳ್ ಶಾಖೆಯ ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್. 13 ರ ಶ್ರೀನಿವಾಸಪುರದ ಹತ್ತಿರ ಅಕ್ರಮವಾಗಿ ಶ್ರೀಗಂಧದ ತುಂಡುಗಳು 4=7 ಕೆ.ಜಿ. ಸಾಗಾಣಿಕೆ ಮಾಡುತ್ತಿದ್ದ ಟಿವಿಎಸ್ ವಿಕ್ಟರ್ ಮೋಟಾರ್ ಸೈಕಲ್ ಸಂಖ್ಯೆ: ಕೆಎ–25–ಎಸ್–79 ನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡು ಸ್ಥಳದಲ್ಲೇ ಪಂಚನಾಮೆ ಜರುಗಿಸಿ ಅರಣ್ಯ ಮೊಕದ್ದಮೆ ಸಂಖ್ಯೆ: 45/2009–10 ನ್ನು ದಾಖಲು

ಮಾಡಿರುತ್ತಾರೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಈ ಕಛೇರಿ ನ್ಯಾಯಾಲಯ ಸಮಕ್ಷಮ ಹಾಜರುಪಡಿಸಿ ಪ್ರಕರಣವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ನಿಯಮ 24, 50, 62, 84, 86, 87, 71(ಎ) ಹಾಗೂ ಅರಣ್ಯ ಕಾನೂನು 1969 ನಿಯಮ 144, 165 ರಂತೆ ಕ್ರಮ ಜರುಗಿಸಲು ಹಾಗೂ ವಾಹನವನ್ನು ಸುರಕ್ಷತೆಯಲ್ಲಿಟ್ಟುಕೊಳ್ಳುವ ಬಗ್ಗೆ ಕೋರಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸಿ ವಲಯ ಅರಣ್ಯಾಧಿಕಾರಿ, ತರೀಕೆರೆ ನಾಟಾ ಸಂಗ್ರಹಾಲಯ ಇವರ ವಶಕ್ಕೆ ಸುರಕ್ಷತೆಗೆ ಕೊಡಲಾಗಿದೆ. ಸದರಿ ವಾಹನವನ್ನು ಬಿಡುಗಡೆಗೆ ಕೋರಿ ಈ ಕಛೇರಿ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಉಲ್ಲೇಖ ಪತ್ರ 3 ರಲ್ಲಿ ವಾಹನದ ಮಾಲೀಕರ ವಿಳಾಸ ಹಾಗೂ ವಾಹನದ ವಿವರವುಳ್ಳ 'ಬಿ' ವಹಿಯನ್ನು ಒಪ್ಪಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹಾವೇರಿ ಇವರಿಗೆ ಪತ್ರ ಬರೆದಿರುತ್ತದೆ. ಈ ಬಗ್ಗೆ ವಾಹನದ ವಿವರವುಳ್ಳ ಬಿ ವಹಿಯನ್ನು ಒಪ್ಪಿಸಿರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಿಸಿದಂತೆ ಬೇರೆ ಯಾರು ವಾರಸುದಾರರು ಲಿಖಿತವಾಗಿ ಅಥವಾ ಖುದ್ದಾಗಿ ಸಮಜಾಯಿಸಿಯನ್ನು ದಾಖಲಾತಿಗಳೊಂದಿಗೆ ನೀಡದೇ ಇದ್ದುದರಿಂದ ಕರ್ನಾಟಕ ಅರಣ್ಯ ಕಾಯಿದೆ 71(ಎ) ಪ್ರಕಾರ 30 ದಿನಗಳ ಕಾಲಾವಾಕಾಶ ನೀಡಿ ಯಾರಾದರೂ ವಾರಸುದಾರರು ಇದ್ದರೆ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳ ಸಮೇತ ಹಕ್ಕುಬಾದ್ಯತೆಗಳನ್ನು ಈ ಕೆಳಗೆ ಸಹಿ ಮಾಡಿದವರ ಮುಂದೆ ಖುದ್ದಾಗಿಯಾಗಲೀ ಅಥವಾ ನ್ಯಾಯಾವಾದಿಗಳವರ ಮುಖಾಂತರವಾಗಲೀ ಹಾಜರು ಪಡಿಸುವುದಕ್ಕೆ ಹಾಗೂ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಸಂಬಂಧದಲ್ಲಿ ವಾಹನವನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ತಿಳುವಳಿಕೆ ಪತ್ರವನ್ನು ಕರ್ನಾಟಕ ರಾಜ್ಯ ಪತ್ರ ದಿ: 15–04–2010 ರಂದು ಪ್ರಚಾರ ಪಡಿಸಿ ಪ್ರಕಟಿಸಲಾಗಿದೆ.

ಪ್ರಕಟಣೆಯಂತೆ 30 ದಿನಗಳು ದಿನಾಂಕ: 14–05–2010 ಕ್ಕೆ ಮುಕ್ತಾಯಗೊಂಡಿದ್ದು, ವಾಹನದ ಬಗ್ಗೆ ಯಾವ ವಾರಸುದಾರರೂ ತಮ್ಮ ಮಾಲೀಕತ್ವವನ್ನು ದೃಡಪಡಿಸಿ ವಾಹನವನ್ನು ತಮ್ಮ ವಶಕ್ಕೆ ಕೋರಿಕೊಳ್ಳದೆ ಇದ್ದುದರಿಂದ ಸದರಿ ವಾಹನವನ್ನು ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ಉಪಯೋಗಿಸಿರುವುದು ಸ್ಪಷ್ಟವಾಗಿರುತ್ತದೆ.

ಈ ಮೊಕದ್ದಮೆಯಲ್ಲಿ ಸಾಕಷ್ಟು ಕಾಲವಕಾಶವನ್ನು ಕೊಟ್ಟರೂ ಸಹ ಮಾಲೀಕರು ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಮುಂದೆ ಬಂದು ವಾಹನದ ಮಾಲೀಕತ್ವದ ಬಗ್ಗೆ ಮೂಲ ದಾಖಲಾತಿಗಳನ್ನು ಹಾಜರು ಪಡಿಸಿ, ತಾವು ತಪ್ಪಿತಸ್ಥರಲ್ಲವೆಂಬುದನ್ನು ಸಾಬೀತು ಪಡಿಸಿರುವುದಿಲ್ಲವಾದ ಕಾರಣ ಮೇಲ್ಕಂಡ ವಾಹನವನ್ನು ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತೇನೆ.

ಆದೇಶ

ಮೇಲ್ಕಂಡ ವಿದ್ಯಾಮಾನಗಳನುಸಾರವಾಗಿ ಶ್ರೀ ಎಸ್.ಎಸ್. ಲಿಂಗರಾಜ,ಭಾ.ಅ.ಸೇ., ಅಧಿಕಾರಿಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ಆದ ನಾನು ಅರಣ್ಯ ಕಾಯಿದೆ 1963 ನಿಯಮ 71 ಎ(2)ರ ತಿದ್ದುಪಡಿ ಪ್ರಕಾರ ಟಿವಿಎಸ್ ವಿಕ್ಟರ್ ಮೋಟಾರ್ ಸೈಕಲ್ ಸಂಖ್ಯೆ: ಕೆಎ–25–ಎಸ್–79 ಹಾಗೂ ಶ್ರೀಗಂಧದ ತುಂಡುಗಳು 4=7 ಕೆ.ಜಿ. ಯನ್ನು ಸರ್ಕಾರದ ಪರ ಮುಟ್ಟುಗೋಲು ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ದಿನಾಂಕ: 03–06–2010 ರಂದು ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ಹೊರಡಿಸಿರುತ್ತೇನೆ.

ಎಸ್.ಎಸ್. ಲಿಂಗರಾಜ

ಪಿ.ಆರ್.938

ಅಧಿಕಾರಿಯುತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಭದ್ರಾವತಿ ವಿಭಾಗ, ಭದ್ರಾವತಿ.

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 107 ಮೈಅಪ್ರಾ 2010, ಬೆಂಗಳೂರು, ದಿನಾಂಕ:23ನೇ ಜೂನ್, 2010

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 19(1) ಮತ್ತು ಕರ್ನಾಟಕ ಭೂ ಸ್ವಾಧೀನ ಕಾಯ್ದೆ, 1894ರ ಕಲಂ 48(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಅಧಿನಿಯಮ 19(1)ರನ್ವಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಧಿಸೂಚನೆ ಸಂಖ್ಯೆ: ನಅಇ 39 ಎಂಐಬಿ 1988, ದಿನಾಂಕ:17.02.1988ರಲ್ಲಿ ಮೈಸೂರು ನಗರದ ಚಿಕ್ಕಹರದನಹಳ್ಳಿ ಗ್ರಾಮದ ಬಡಾವಣೆ ರಚಿಸಲು ಜಮೀನುಗಳನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಅಂತಿಮ ಪ್ರಕಟಣೆ ಹೊರಡಿಸಲಾಗಿದೆ. ಈ ಜಮೀನುಗಳ ಪೈಕಿ ಈ ಕೆಳಕಂಡ ಅನುಸೂಚಿಯಲ್ಲಿ ಸೂಚಿಸಿರುವ ಜಮೀನುಗಳನ್ನು ಕಾವೇರಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು ಇವರ ಸದಸ್ಯರುಗಳಿಗೆ ನಿವೇಶನ ಹಂಚಿಕೆ ಮಾಡುವ ಸಲುವಾಗಿ ಭೂ ಸ್ವಾಧೀನ ಕ್ರಮದಿಂದ ಕೈಬಿಡಲಾಗಿದೆ.

ಅನುಸೂಚಿ

ಜಿಲ್ಲೆ: ಮೈಸೂರು **ತಾಲ್ಲೂಕು: ಮೈಸೂರು** **ಗ್ರಾಮ: ಚಿಕ್ಕಹರದನಹಳ್ಳಿ**

ಕ್ರ. ಸಂ.	ಸ. ನಂ.	ಖಾತಾದಾರರ/ ಅನುಭವದಾರರ ಹೆಸರು	ಸ್ವತ್ತಿನ ವಿವರ				ಚೌತರ್ಫು				ಭೂಸ್ವಾಧೀನದಿಂದ ಕೈಬಿಟ್ಟ ವಿಸ್ತೀರ್ಣ ಎ.ಗುಂ.
			ಖುಷ್ಕಿ ಎ.ಗುಂ	ಭಾಗಾಯ್ತು ಎ.ಗುಂ	ಖರಾಬು ಎ.ಗುಂ	ಜುಮ್ಲಾ ಎ.ಗುಂ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1.	16/2	ಬೋರಯ್ಯ ಬಿನ್ ಲೇಟ್ ಮರಿಗೌಡ, ಕರೀಗೌಡ	2–36	–	–	2–36	ಓಣಿ	ಸ.ನಂ.17	ಓಣಿ	ಸ.ನಂ.13,15	2 ಎಕರೆ 22 ಗುಂಟೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್.979